ಸಂಪುಟ: 04 ಸಂಚಿಕೆ: 345 ಪುಟಗಳು: 08 ಬುಧವಾರ 26 ಫೆಬ್ರವರಿ 2025
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5
# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ‘ಸೂರ್ಯ ಘರ್’ ಯೋಜನೆಗೆ ಸುಲಭ ಸಾಲ ನೀಡುವಂತೆ ಸೂಚನೆ

• ಉದಯವಾಹಿನಿ, ಬೆಂಗಳೂರು

ಪ್ರಧಾನ ಮಂತ್ರಿ ಸೂರ್ಯ ಘರ್ ಕೇವಲ ಒಂದು ಯೋಜನೆಯಲ್ಲ; ಅದೊಂದು ಆಂದೋಲನ. ನವೀಕರಿಸಬಹುದಾದ ಇಂಧನ ಹಣಕಾಸು ಕ್ಷೇತ್ರದಲ್ಲಿ ಇದು ರಾಷ್ಟ್ರೀಯ ಆಂದೋಲನವಾಗಬೇಕು ಎಂದು ಕೇಂದ್ರ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಕರೆ ನೀಡಿದರು. ನವೀಕರಿಸಬಹುದಾದ ಇಂಧನ (ಆರ್‌ಇ) ವಲಯಕ್ಕೆ ಸುಲಭವಾಗಿ ಹಣ ಲಭ್ಯವಾಗುವಂತೆ ಹಣಕಾಸು ಸಂಸ್ಥೆಗಳು ಮತ್ತು ನೀತಿ ನಿರೂಪಕರಿಂದ ಸಾಮೂಹಿಕ ಪ್ರಯತ್ನ ಅತ್ಯಗತ್ಯವಾಗಿದೆ ಎಂದು ಕರೆ ನೀಡಿದರು. ಹಣಕಾಸು ಸಂಸ್ಥೆಗಳು ಸಾಲ ನೀಡುವ ಪ್ರಕ್ರಿಯೆಗಳನ್ನು ಸುಗಮಗೊಳಿಸಬೇಕು, ಅನಗತ್ಯ ಅನುಸರಣೆ ಹೊರೆಗಳನ್ನು ಕಡಿಮೆ ಮಾಡಬೇಕು ಮತ್ತು ಶುದ್ಧ ಇಂಧನ ಯೋಜನೆಗಳಿಗೆ ಹಣಕಾಸು ಒದಗಿಸುವ ನಿಟ್ಟಿನಲ್ಲಿ ಹೆಚ್ಚು ಬೆಂಬಲ ನೀಡುವ ವಿಧಾನವನ್ನು ಅಳವಡಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

## ಮಹಾಕುಂಭ:1.24 ಕೋಟಿಗೂ ಹೆಚ್ಚು ಭಕ್ತರ ಪುಣ್ಯ ಸ್ನಾನ

• ಉದಯವಾಹಿನಿ, ಪ್ರಯಾಗರಾಜ್

ಮಹಾಕುಂಭದ ಮುಕ್ತಾಯಕ್ಕೆ ಇಂದು ಮಹಾಕುಂಭದ ಅಂತಿಮ ದಿನ. ನಿನ್ನೆ ರಾತ್ರಿ 8 ಗಂಟೆಯವರೆಗೆ ಪ್ರಯಾಗರಾಜ್‌ನಲ್ಲಿರುವ ಗಂಗಾ, ಯಮುನಾ ಮತ್ತು ಪೌರಾಣಿಕ ಸರಸ್ವತಿ ನದಿಗಳ ಸಂಗಮವಾದ ತ್ರಿವೇಣಿ ಸಂಗಮದಲ್ಲಿ 1.24 ಕೋಟಿಗೂ ಹೆಚ್ಚು ಜನರು ಪವಿತ್ರ ಸ್ನಾನ ಮಾಡಿದರು. ಉತ್ತರ ಪ್ರದೇಶ ಮಾಹಿತಿ ಇಲಾಖೆಯ ಪ್ರಕಾರ, ಜನವರಿ 13ರಿಂದ ಮಹಾಕುಂಭದಲ್ಲಿ ಸ್ನಾನ ಮಾಡಿದ ಒಟ್ಟು ಭಕ್ತರ ಸಂಖ್ಯೆ 63.36 ಕೋಟಿಯನ್ನು ಮೀರಿದೆ. ಫೆಬ್ರವರಿ 26ರಂದು ನಡೆಯಲಿರುವ ಮಹಾಶಿವರಾತ್ರಿಯ ಅಂತಿಮ ಅಧಿಕೃತ ಸ್ನಾನಕ್ಕೂ ಮುನ್ನ, ನಡೆಯುತ್ತಿರುವ ಮಹಾಕುಂಭದಲ್ಲಿ ಭಾಗವಹಿಸಲು ಭಕ್ತರು ಪ್ರಯಾಗ್‌ರಾಜ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ 2025ರ ಮಹಾಕುಂಭ ಮೇಳವು ಭಾರೀ ಜನ ಸಂದಣಿಯನ್ನು ಕಾಣುತ್ತಿದೆ. ಪಾಪಗಳನ್ನು ಶುದ್ಧೀಕರಿಸುವ ಮತ್ತು ಆಧ್ಯಾತ್ಮಿಕ ವಿಮೋಚನೆ ಅಥವಾ ಮೋಕ್ಷವನ್ನು ತರುವ ಪವಿತ್ರ ಆಚರಣೆಯನ್ನು ಮಾಡಲು ಘಾಟ್‌ಗಳಲ್ಲಿ ಸೇರುತ್ತಿರುವ ಯಾತ್ರಿಕರ ಅಪಾರ ಗುಂಪನ್ನು ತ್ರಿವೇಣಿ ಸಂಗಮದ ಡ್ರೋನ್ ದೃಶ್ಯಾವಳಿಗಳು ಪ್ರದರ್ಶಿಸಿವೆ.

## ಯತ್ನಾಳ್ ಬಣವನ್ನು ತಿರಸ್ಕೃತ ನಾಣ್ಯಕ್ಕೆ ಹೋಲಿಸಿದ ರೇಣುಕಾಚಾರ್ಯ

• ಉದಯವಾಹಿನಿ, ದಾವಣಗೆರೆ

ಸ್ವಯಂ ಘೋಷಿತ ನಾಯಕರು ಇಲಿನಾ–ಹುಲಿನಾ ಎಂದು ಮಾಜಿ ಶಾಸಕ ರೇಣುಕಾಚಾರ್ಯ ವಿರೋಧಿ ಪಡೆ ಯತ್ನಾಳ್ ಗೆ ಕೌಂಟರ್ ಕೊಟ್ಟಿದ್ದಾರೆ. ದಾವಣಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲಾ ಮಠಾಧೀಶರ ಬೆಂಬಲ ಯಡಿಯೂರಪ್ಪ ಅವರಿಗೆ ಇದೆ. ಸ್ವಯಂ ಘೋಷಿತ ನಾಯಕರು ಇಲಿನ ಹುಲಿನ ನೀವೇ ತೀರ್ಮಾನ ಮಾಡಿ. ಇವರೆಲ್ಲರೂ ತಿರಸ್ಕೃತ ನಾಯಕರು, ಚಲಾವಣೆ ಇಲ್ಲದ ನಾಯಕರು. ಯಡಿಯೂರಪ್ಪ ವಿಜಯೇಂದ್ರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ಮುಂದೆ ವಿಜಯೇಂದ್ರ ಅವರನ್ನ ಸಿಎಂ ಮಾಡುತ್ತೇವೆ ಎಂದರು. ದೇಶ ವಿರೋಧಿಗಳನ್ನು ಬಂಧಿಸಲು ರಾಜ್ಯ ಸರ್ಕಾರಕ್ಕೆ ಆಗಿಲ್ಲ. ರಾಜ್ಯದಲ್ಲಿ ಸರ್ಕಾರದಿಂದ ಪ್ರಜಾಪ್ರಭುತ್ವ ಕಗ್ಗೊಲೆಯಾಗುತ್ತಿದೆ. ಅಲ್ಪ ಸಂಖ್ಯಾತ ಗೂಂಡಾಗಳು ಬ್ರದರ್ಸ್ ಆಗಿದ್ದಾರೆ. ರಾಜ್ಯ ಸರ್ಕಾರ ಆಡಳಿತ ಮಾಡಲು ನಾಲಾಯಕ್. ನಮ್ಮ ರಾಜ್ಯದಲ್ಲಿ ಗೂಂಡಾಗಳು ಬಸ್‌ಗೆ ಕಲ್ಲು ತೂರಾಟ, ಹಲ್ಲೆ ಮಾಡುವುದು ಹೆಚ್ಚಾಗಿದೆ. ಕಾಂಗ್ರೆಸ್ ನವರಿಗೆ ರಾಜ್ಯದಲ್ಲಿ ಹುಟ್ಟಿದ್ದರೂ ಮಾತೃ ಪ್ರೇಮ ಇಲ್ಲ, ಇವರದ್ದು ಕುರ್ಚಿಗಾಗಿ ರಾಜಕಾರಣ ಎಂದು ರೇಣುಕಾಚಾರ್ಯ ಟೀಕಿಸಿದರು.



# ಕನ್ನಡದ ತಂಟೆಗೆ ಬಂದ್ರೆ ಸರಿ ಇರಲ್ಲ

**ನೀವ್ಯಾರು ಉಳಿಯಂಗಿಲ್ಲ ಹುಷಾರ್!**

● ಮಹಾರಾಷ್ಟ್ರ ಗಡಿ ಭಾಗದಲ್ಲಿ ಬಸ್ ನಿರ್ವಾಹಕನ ಮೇಲೆ ಮರಾಠಿ ಪುಂಡರಿಂದ ಮುಂದುವರಿದ ಹಲ್ಲೆ ● ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ನಿತ್ಯ ಪ್ರಯಾಣ ಮಾಡುತ್ತಿದ್ದ 509 ಬಸ್‌ಗಳು ಸ್ಥಗಿತ. ● ಇತ್ತ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಆಗಮಿಸುತ್ತಿದ್ದ 130 ಬಸ್ ಗಳು ಸ್ಥಗಿತ

1. ಎರಡು ರಾಜ್ಯಗಳ ನಡುವಿನ ಸಂಪರ್ಕಕ್ಕೆ ಕುತ್ತು
2. ಮರಾಠಿ ಪುಂಡರ ನಡೆಗೆ ಕನ್ನಡ ಪರ ಸಂಘಟನೆಗಳು ತೀವ್ರ ಆಕ್ರೋಶ
3. ಮಹಾರಾಷ್ಟ್ರದವರಿಗೆ ಅನ್ಯಾಯ ಆಗಿದ್ರೆ ಅವರು ಪ್ರತಿಭಟನೆ ಮಾಡಲಿ
4. ಮರಾಠರ ಜಾಗದಲ್ಲೇ ನಿಂತು ಉತ್ತರ ಕೊಡುತ್ತೀವಿ. ನಮಗೆ ಯಾವುದೇ ಅಂಜಿಕೆ ಇಲ್ಲ.

• ಉದಯವಾಹಿನಿ, ಬೆಳಗಾವಿ

ಎಂಇಎಸ್ ಪುಂಡರು ಕನ್ನಡದ ತಂಟೆಗೆ ಬಂದರೆ ಸರಿ ಇರಲ್ಲ. ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ಎಸ್ ತಂಗಡಗಿ ಅವರು ಖಡಕ್ ಎಚ್ಚರಿಕೆ ನೀಡಿದ್ದಾರೆ. ತಮ್ಮ ಗೃಹ ಕಚೇರಿ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ಕರ್ನಾಟಕದ ನೀರು, ಗಾಳಿ, ಅನ್ನ ತಿಂದು ಮತ್ತೊಂದು ಭಾಷೆಯ ಬಗ್ಗೆ ಬಹಳ ಪ್ರೀತಿ ವ್ಯಾಮೋಹ ತೋರಿಸಿದರೆ ಮುಂದೆ ಪರಿಣಾಮ ನೆಟ್ಟಗಿರಲ್ಲ ಎಂದು ಕಿಡಿಕಾರಿದರು. ಎಂಇಎಸ್ ಪುಂಡಾಟಿಕೆ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರ ಬಗ್ಗೆ ಚರ್ಚೆ ಮಾಡುತ್ತೇವೆ. ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಅಂತ ಹೇಳಿದ್ದೇವೆ. ಕನ್ನಡದ ವಿಚಾರಕ್ಕೆ ಬಂದರೆ ನಿಮಗೆ ಸರಿಯಾದ ಶಿಸ್ತು ಕಲಿಸುವ ಪರಿಸ್ಥಿತಿ ನಿರ್ಮಾಣ ಆಗುತ್ತೆ ಎಂದು ತೀಕ್ಷ್ಣವಾಗಿ ಹೇಳಿದರು.

**ನೀವ್ಯಾರು ಉಳಿಯಂಗಿಲ್ಲ ಹುಷಾರ್:** ಪುಂಡಾಟಿಕೆ ಹೀಗೆ ಮುಂದುವರೆದರೆ ಗೂಂಡಾ ಪ್ರಕರಣ ದಾಖಲಿಸಿ ಜೈಲಿಗೆ ಅಟ್ಟಬೇಕಾಗುತ್ತದೆ. ನಾವು ಕನ್ನಡಿಗರು ಬೇರೆ ಭಾಷೆಯನ್ನು ಪ್ರೀತಿಸುತ್ತೇವೆ, ಗೌರವಿಸುತ್ತೇವೆ. ಆದರೆ ಈ ರಾಜ್ಯದಲ್ಲಿ ವಾಸವಿರುವ ಅನ್ಯ ಭಾಷಿಕರು ಈ ನೆಲದ ಭಾಷೆ ಮತ್ತು ಕಾನೂನನ್ನು ಗೌರವಿಸಿ, ಪಾಲಿಸಬೇಕು ಎಂದರು. ಕನ್ನಡಿಗರು ಪುಂಡಾಟ ನಡೆಸಲ್ಲ. ಕನ್ನಡಿಗರು ಆ ರೀತಿ ಮಾತ್ರ ಮಾಡೋಕೆ ನಿಂತರೆ, ನೀವ್ಯಾರು ಉಳಿಯಂಗಿಲ್ಲ ಹುಷಾರಾಗಿರಿ ಎಂದು ಎಂಇಎಸ್ ಪುಂಡರಿಗೆ ಎಚ್ಚರಿಕೆ ನೀಡಿದರು.

ಎಲ್ಲಾ ಮರಾಠಿಗರು ಈ ರೀತಿ ಮಾಡಲ್ಲ. ಕೆಲವೇ ಕೆಲವು ಪುಂಡರು ಈ ರೀತಿ ಮಾಡುತ್ತಿದ್ದಾರೆ. ಅದಕ್ಕೆ ಸರಿಯಾಗಿ ಉತ್ತರ ಕೊಡುವ ಪರಿಸ್ಥಿತಿ ಬಂದಿದೆ, ಕೊಟ್ಟೆ ಕೊಡುತ್ತೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

**ಪುಂಡರ ಅಟ್ಟಹಾಸದಿಂದ ಸದ್ಯ ಎಲ್ಲಾವೂ ಸ್ಥಗಿತ!:** ಹಿನ್ನೆಲೆಯಲ್ಲಿ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ನಿತ್ಯ ಪ್ರಯಾಣ ಮಾಡುತ್ತಿದ್ದ 509 ಬಸ್‌ಗಳು ಸ್ಥಗಿತಗೊಂಡಿವೆ. ಅಷ್ಟೇ ಅಲ್ಲ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಆಗಮಿಸುತ್ತಿದ್ದ 130 ಬಸ್‌ಗಳು ಸ್ಥಗಿತಗೊಂಡಿದೆ. ಭಾಷಾ ವಿಚಾರವಾಗಿ ನಡೆದ ಈ ಹಲ್ಲೆ ಪ್ರಕರಣ ಇದೀಗ ಎರಡು ರಾಜ್ಯಗಳ ನಡುವಿನ ಸಂಪರ್ಕಕ್ಕೆ ಕುತ್ತು ಉಂಟು ಮಾಡಿದೆ.

### ಪೊಲೀಸ್ ಇಲಾಖೆಗೆ ಕಟ್ಟುನಿಟ್ಟಿನ ಸೂಚನೆ

ಮಹಾರಾಷ್ಟ್ರದವರಿಗೆ ಅನ್ಯಾಯ ಆಗಿದ್ರೆ ಅವರು ಪ್ರತಿಭಟನೆ ಮಾಡಲಿ. ಅದು ಬಿಟ್ಟು ಬಸ್ ಗಳಿಗೆ ಹಾನಿ ಮಾಡುವುದು ಸರಿಯಲ್ಲ. ಎಂಇಎಸ್ ಮೊದಲಿನಂತೆ ಬಲಿಷ್ಠವಾಗಿಲ್ಲ. ಎಂಇಎಸ್ ಪುಂಡರ ಹಾವಳಿ ತಡೆಯಲು ಗೃಹ ಸಚಿವರು ಪೊಲೀಸ್ ಇಲಾಖೆಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

### 130 ಬಸ್‌ಗಳು ರಾಜ್ಯಕ್ಕೆ

ಬೆಳಗಾವಿಯಲ್ಲಿ ನಡೆದ ಹಲ್ಲೆ ಪ್ರಕರಣ ಮತ್ತು ಅದರ ಮುಂದುವರಿದ ಭಾಗವಾಗಿ ನಡೆಯುತ್ತಿರುವ ಬೆಳವಣಿಗೆಗಳಿಂದಾಗಿ ನಮ್ಮ ರಾಜ್ಯದ ಬಸ್‌ಗಳು ಮಹಾರಾಷ್ಟ್ರಕ್ಕೆ ಹೋಗ್ತಿಲ್ಲ. 509 ಬಸ್‌ಗಳು ನಿತ್ಯ ಮಹಾರಾಷ್ಟ್ರಕ್ಕೆ ಹೋಗುತ್ತಿದ್ದವು. ಮಹಾರಾಷ್ಟ್ರದಿಂದ 130 ಬಸ್ ಗಳು ರಾಜ್ಯಕ್ಕೆ ಆಗಮಿಸುತ್ತಿದ್ದವು. ಆದರೆ ಇದೀಗ ಬಸ್ ಪ್ರಯಾಣ ಸ್ಥಗಿತಗೊಂಡ ಪರಿಣಾಮ ಪರಿಣಾಮ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ'' ಎಂದು ವಿವರಿಸಿದರು. ನಮ್ಮ ರಾಜ್ಯದ ಒಂದು ಬಸ್ ಗೆ ಮಸಿ ಬಳಿದಿದ್ದಾರೆ. ಮಹಾರಾಷ್ಟ್ರ ಬಸ್ ಗೆ ನಮ್ಮವರು ಯಾವುದೇ ಬಣ್ಣ ಬಳಿದಿಲ್ಲ. ಅವರು ಕೇಸರಿ ಬಣ್ಣ ಬಳಿಯುವುದು. ಕಪ್ಪು ಮಸಿ ಬಳಿಯುವುದು ಮಾಡುತ್ತಿದ್ದಾರೆ. ಈ ಎಲ್ಲಾ ವಿಚಾರಗಳನ್ನ ಸಿಎಂ ಗಮನಕ್ಕೆ ತಂದಿರುವೆ ಎಂದು ತಿಳಿಸಿದರು.

### ಜೈ ಮಹಾರಾಷ್ಟ್ರ ಎಂದು ಬರೆದ ಕಿಡಿಗೇಡಿಗಳು

ಈ ಘಟನೆಯ ಬೆನ್ನಲ್ಲೇ ಬಸ್ ಗಳಿಗೂ ಮಸಿ ಬಳಿಯುವ ಘಟನೆ ನಡೆದಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವೋಲ್ವೊ ಬಸ್‌ಗೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಕಪ್ಪು ಮಸಿ ಬಳಿಯಲಾಗಿದೆ. ಬೆಳಗಾವಿಯಿಂದ ನಾಸಿಕ್‌ಗೆ ಹೋಗಿದ್ದ ಬಸ್‌ಗೆ ಮಸಿ ಬಳಿದು, ‘ಮನಸೇ ಮರಾಠಿ’ ಹಾಗೂ ‘ಜೈ ಮಹಾರಾಷ್ಟ್ರ’ ಎಂದು ಕಿಡಿಗೇಡಿಗಳು ಬರೆದಿದ್ದಾರೆ. ಈ ಹಿನ್ನಲೆಯಲ್ಲಿ ಬಸ್ ಚಾಲಕರು ನಿರ್ವಾಹಕರು ಆತಂಕಿತರಾಗಿದ್ದಾರೆ. ಇದರ ನಡುವೆ ಮರಾಠಿ ಪುಂಡರ ನಡೆಗೆ ಕನ್ನಡ ಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ಕರ್ನಾಟಕ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಬೆಳಗಾವಿಯಲ್ಲಿ ಹೋರಾಟ ನಡೆಯುತ್ತಿದೆ. ಈ ಎಲ್ಲಾದರ ಪರಿಣಾಮ ಎರಡು ರಾಜ್ಯಗಳ ಬಸ್ ಸಂಚಾರದ ಮೇಲೆ ಬಿದ್ದಿದೆ.


### ನಾವು ಸುಮ್ಮನಿರುವ ಪ್ರಶ್ನೆ ಇಲ್ಲ

ಕನ್ನಡ ಭಾಷೆ, ನೆಲ ಮತ್ತು ಜಲದ ವಿಚಾರದ ಬಗ್ಗೆ ಪ್ರತಿಯೊಬ್ಬರು ಧ್ವನಿ ಎತ್ತಬೇಕು. ಬೆಳಗಾವಿ ನಾಯಕರು ಈ ಬಗ್ಗೆ ಮಾತನಾಡಬೇಕು. ನಾವು ಇಲ್ಲಿ ಹೇಳೋದಲ್ಲ, ಮರಾಠರ ಜಾಗದಲ್ಲೇ ನಿಂತು ಉತ್ತರ ಕೊಡುತ್ತೀವಿ. ನಮಗೆ ಯಾವುದೇ ಅಂಜಿಕೆ ಇಲ್ಲ. ಕನ್ನಡದ ವಿಚಾರಕ್ಕೆ ಬಂದರೆ ನಾವು ಸುಮ್ಮನಿರುವ ಪ್ರಶ್ನೆ ಇಲ್ಲ ಎಂದು ಸಚಿವರು ತಿಳಿಸಿದರು. ಈ ಹಿಂದೆ ಪ್ರತಿ ವರ್ಷ ಎಂಇಎಸ್ ನವರು ಕರಾಳ ದಿನಾಚರಣೆ ಆಚರಿಸುತ್ತಿದ್ದರು. ಅದಕ್ಕೆ ಕಡಿವಾಣ ಹಾಕಿದ್ದೇವೆ. ಮುಂದೆಯೂ ಕಡಿವಾಣ ಹಾಕುತ್ತೇವೆ ಎಂದು ಶಿವರಾಜ್ ತಂಗಡಗಿ ಹೇಳಿದರು.



ಕಂಡಕ್ಟರ್ ಮೇಲೆ ಪೋಕ್ಸೋ ಪ್ರಕರಣ ದಾಖಲಿಸಲಾಗಿದೆ, ರಾತ್ರೋರಾತ್ರಿ ಅದನ್ನು ಮಾಡಿದ್ದು ಯಾರು ಕಾಣದ ಕೈಗಳು ಇಲ್ಲಿ ಕೆಲಸ ಮಾಡಿವೆ, ಕೇಸನ್ನು ದಾಖಲು ಮಾಡಿರುವ ಪೊಲೀಸ್ ಇನ್ಸ್‌ಪೆಕ್ಟರ್ ಮುಖಕ್ಕೆ ಎರಡು ಬಿಗಿಯಬೇಕು, ಅದ್ಹೇಗೆ ಅವನು ಪೋಕ್ಸೋ ಕೇಸನ್ನು ದಾಖಲಿಸುತ್ತಾನೆ ಅವನೇನು ಕನ್ನಡಿಗನೋ ಅಥವಾ ಮಹಾರಾಷ್ಟ್ರದವನೋ ಪೊಲೀಸ್ ಕಮೀಷನರ್ ಕೂಡಲೇ ಕಂಡಕ್ಟರ್ ಮೇಲೆ ಹಾಕಿರುವ ಕೇಸನ್ನು ವಾಪಸ್ಸು ಪಡೆಯಬೇಕು ಮತ್ತು ಗೃಹ ಸಚಿವರು ತಮ್ಮ ರಾಜಕೀಯ ದೊಂಬರಾಟವನ್ನು ಪಕ್ಕಕ್ಕಿಟ್ಟು ಬೆಳಗಾವಿ ಕನ್ನಡಿಗರ ಬಗ್ಗೆ ಯೋಚಿಸಬೇಕು

-ಟಿಎ ನಾರಾಯಣಗೌಡ, ಕರವೇ ಅಧ್ಯಕ್ಷ



ಎಂಇಎಸ್ ಮತ್ತು ಶಿವಸೇನೆಯ ಗೂಂಡಾಗಳು ಹಲ್ಲೆ ನಡೆಸಿ ಪೋಕ್ಸೋ ಕೇಸ್ ಹಾಕಿದ್ದು ಕೇವಲ ಕಂಡಕ್ಟರ್ ಮೇಲೆ ಅಲ್ಲ, ಇಡೀ ಕರ್ನಾಟಕದ ಮೇಲೆ, ನಾವು ಕರ್ನಾಟಕದಲ್ಲಿದ್ದೀವೋ ಅಥವಾ ಬೇರೆ ರಾಜ್ಯದಲ್ಲಿದ್ದೀವೋ ಮರಾಠೀ ಪುಂಡರು ಕನ್ನಡಿಗರ ಸ್ವಾಭಿಮಾನ ಹತ್ತಿಕ್ಕಲು ಬಿಡೋದಿಲ್ಲ, ಕಂಡಕ್ಟರ್ ವಿರುದ್ಧ ಹಾಕಿರುವ ಕೇಸನ್ನು ವಾಪಸ್ಸು ಪಡೆದಯಬೇಕು ಮತ್ತು ಅದನ್ನು ಹಾಕಿದ ಇನ್ಸ್‌ಪೆಕ್ಟರ್‌ನನ್ನು ಸಸ್ಪೆಂಡ್ ಮಾಡಬೇಕು.

-ಪ್ರವೀಣ್ ಶೆಟ್ಟಿ, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ



## ರಾಷ್ಟ್ರಮಟ್ಟದ 7 ಪ್ರಶಸ್ತಿ ಬಾಚಿಕೊಂಡ ಕೆಎಸ್‌ಆರ್‌ಟಿಸಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) 2025ನೇ ಸಾಲಿನ 5 ನೇ ಗ್ರೀನ್ ಊರ್ಜಾ ಮತ್ತು ಇಂಧನ ದಕ್ಷತೆ ಪ್ರಶಸ್ತಿ ಹಾಗೂ ಜಾಗತಿಕ ಉತ್ಪಾದನೆಯ (ಗ್ಲೋಬಲ್ ಮ್ಯಾನುಫ್ಯಾಕ್ಚರಿಂಗ್) ಏಳು ವಿಭಾಗಗಳಲ್ಲಿ ಪ್ರಶಸ್ತಿಯನ್ನ ತನ್ನದಾಗಿಸಿಕೊಂಡಿದೆ.

ಜಾಗತಿಕ ಉತ್ಪಾದನೆಯ ಉದ್ಯೋಗ ಸ್ಥಳ ಮತ್ತು ಜನಾಭಿವೃದ್ಧಿ ವಿಭಾಗದಲ್ಲಿ 'ವ್ಯಾಪಾರ ನಾಯಕತ್ವ', ಉತ್ತಮ ಸಾರ್ವಜನಿಕ ಆರೋಗ್ಯ ಉಪಕ್ರಮದಲ್ಲಿ 'ವಿಶ್ವ ಆರೋಗ್ಯ ಸೇವಾ' ಪ್ರಶಸ್ತಿ, ಆರೋಗ್ಯ ಸೇವಾ ತಂತ್ರಜ್ಞಾನದಲ್ಲಿ ಅತ್ಯುತ್ತಮ ನಾವೀನ್ಯತೆಗೆ 'ವಿಶ್ವನಾವೀನ್ಯತೆ' ಪ್ರಶಸ್ತಿ, ಸ್ಥಿರತೆಯ ಸಾಧನೆಯಲ್ಲಿ 'ಜಾಗತಿಕ ಉತ್ಪಾದನಾ ನಾಯಕತ್ವ' ಪ್ರಶಸ್ತಿ, 'ಅತ್ಯುತ್ತಮ ಉದ್ಯೋಗದಾತ ಬ್ರಾಂಡ್' ಹಾಗೂ 'ಡಿಜಿಟಲ್ ತಂತ್ರಜ್ಞಾನ' ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಇತ್ತೀಚೆಗೆ ಹೋಟೆಲ್‌ವೊಂದರಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಲೂಧಿಯಾನ ಬೇವರೆಜಸ್ ಲಿಮಿಟೆಡ್‌ನ ಮುಖ್ಯಸ್ಥೆ ಜಪಲೀನ್ ಕೌರ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು. ಅದೇ ರೀತಿ ಸುಸ್ಥಿರ ಅಭಿವೃದ್ಧಿ ಮತ್ತು ನೀತಿಗಳನ್ನು ಅಳವಡಿಸಿಕೊಂಡ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಕೊಡಮಾಡುವ 2025ನೇ ಸಾಲಿನ 5ನೇ ಗ್ರೀನ್ ಊರ್ಜಾ ಮತ್ತು ಇಂಧನ ದಕ್ಷತೆಯ ಪ್ರಶಸ್ತಿ ಕೆಎಸ್‌ಆರ್‌ಟಿಸಿ ಪಡೆದುಕೊಂಡಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ ಅಧ್ಯಕ್ಷ ಅನಿಲ್‌ಕುಮಾರ್ ಜೈನ್, ಕೇಂದ್ರ ವಿದ್ಯುತ್ ಸಚಿವಾಲಯದ ನಿವೃತ್ತ ಕಾರ್ಯದರ್ಶಿ ಅನಿಲ್ ರಜ್ದಾನ್, ಕೇಂದ್ರ ವಿದ್ಯುತ್ ಪ್ರಾಧಿಕಾರದ ನಿವೃತ್ತ ಅಧ್ಯಕ್ಷೆ ನೀರ್ಜಾ ಮಥೂರ್, ಎಸ್‌ಇಸಿಐನ ವ್ಯವಸ್ಥಾಪಕ ನಿರ್ದೇಶಕ ಡಾ. ಅಶ್ವಿನಿ ಕುಮಾರ್ ಅವರಿಂದ ಕೆಎಸ್‌ಆರ್‌ಟಿಸಿಯ ಉಪ ಮುಖ್ಯ ಮೆಕ್ಯಾನಿಕಲ್ ಎಂಜಿನಿಯರ್ ನಾಗರಾಜಮೂರ್ತಿ ಪ್ರಶಸ್ತಿ ಸ್ವೀಕರಿಸಿದರು.



### ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಉಚಿತ ಬಸ್

ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ- 1 ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಸಂಸ್ಥೆಯ ಬಸ್ ಗಳಲ್ಲಿ ಉಚಿತವಾಗಿ ಸಂಚರಿಸಲು ಕೆಎಸ್‌ಆರ್‌ಟಿಸಿ ಅವಕಾಶ ಕಲ್ಪಿಸಿದೆ. ದ್ವಿತೀಯ ಪಿಯುಸಿ ಪರೀಕ್ಷೆ-1 ಮಾರ್ಚ್ 1 ರಿಂದ 20 ರವರೆಗೆ ಹಾಗೂ ಮಾರ್ಚ್ 21 ರಿಂದ ಏಪ್ರಿಲ್ 4 ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ-1 ನಡೆಯಲಿವೆ. ಪರೀಕ್ಷೆಗಳು ನಡೆಯುವ ದಿನಗಳಂದು ವಾಸ ಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದವರೆಗೆ ತೆರಳುವ ಮತ್ತು ಅಲ್ಲಿಂದ ಹಿಂದಿರುಗುವ ವೇಳೆ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರಗಳನ್ನು ತೋರಿಸಿ ಪ್ರಯಾಣಿಸಬಹುದು. ನಿಗಮದ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್‌ಗಳಲ್ಲಿ ಈ ಸೌಲಭ್ಯ ಲಭ್ಯವಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯುವಂತೆ ಕೆಎಸ್‌ಆರ್‌ಟಿಸಿಯ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಸರ್ಕಾರದ ವಿರುದ್ಧ ಮೋಹನ್ ಪೈ ಟೀಕೆ!

• ಉದಯವಾಹಿನಿ, ಬೆಂಗಳೂರು



**ಪ್ರಿಯಾಂಕ್ ತಿರುಗೇಟು**

ಬೆಂಗಳೂರು ಅಭಿವೃದ್ಧಿ ವಿಚಾರವಾಗಿ ಉದ್ಯಮಿ ಮೋಹನ್ ದಾಸ್ ಪೈ ನೀಡಿರುವ ಹೇಳಿಕೆ ಕಾಂಗ್ರೆಸ್ ನಾಯಕರ ಕೆಂಗಣ್ಣಿಗೆ ಗುರಿಯಾಗಿದ್ದು, ರಾಜ್ಯಸಭೆ ಸದಸ್ಯ ಸ್ಥಾನ ಬೇಕು ಅದಕ್ಕೆ ಈ ರೀತಿ ಆರೋಪ ಮಾಡುತ್ತಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

''ಮೋಹನ್ ದಾಸ್ ಪೈ ಸುಮ್ಮನೆ ಸರ್ಕಾರವನ್ನು ಟೀಕೆ ಮಾಡುತ್ತಿದ್ದಾರೆ. ರಾಜ್ಯಸಭೆ ಸದಸ್ಯ ಸ್ಥಾನ ಬೇಕು ಅದಕ್ಕೆ ಈ ರೀತಿ ಆರೋಪ ಮಾಡುತ್ತಿದ್ದಾರೆ'' ಎಂದು ಗಂಭೀರ ಆರೋಪ ಮಾಡಿದರು.

ಕೇಂದ್ರದಲ್ಲಿ ಉನ್ನತ ಹುದ್ದೆ ಬೇಕಾಗಿದೆ. ಅದಕ್ಕೆ ಈ ರೀತಿ ಮೋಹನ್ ದಾಸ್ ಪೈ ಸರ್ಕಾರದ ಸಚಿವರ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಹಿಂದೆ ಇವರು ತಾನೇ ಬೇರೆ ಬೇರೆ ಹುದ್ದೆಯಲ್ಲಿ ಇದ್ದವರು. ಸರ್ಕಾರ ಬದಲಾವಣೆ ಆದ ಮೇಲೆ ಇವರ ವರಸೆ ಬದಲಾಗಿದೆ ಎಂದೂ ಪ್ರಿಯಾಂಕ್ ಟೀಕಿಸಿದರು. ಅದಕ್ಕೆ ಸಿದ್ದರಾಮಯ್ಯ, ಡಿಕೆಶಿ, ಪ್ರಿಯಾಂಕ್ ಖರ್ಗೆ ಟಾರ್ಗೆಟ್. ಏನೋ ಒಂದು ಆಗಬೇಕಿದೆ. ಅದಕ್ಕೆ ಸೋಷಿಯಲ್ ಮಿಡಿಯಾ ವಾರಿಯರ್ಸ್ ಆಗಿದ್ದಾರೆ. ಆಗ ತಿಂಗಳಿಗೆ ಒಮ್ಮೆ ಮಾತಾಡ್ತಾ ಇದ್ರು. ಈಗ ವಾರವೂ ಮಾತಾಡ್ತಾರೆ, ರಾಜ್ಯಸಭೆ ಸ್ಥಾನ ಬೇಕಾಗಿರಬೇಕು. ಅದಕ್ಕೆ ಮಾತಾಡ್ತಾ ಇದ್ದಾರೆ ಎಂದು ತಿರುಗೇಟು ನೀಡಿದರು.

# ಕುಮಾರಸ್ವಾಮಿಗೆ ಮತ್ತೊಂದು ಭೂ ಕಂಟಕ, ಸುಪ್ರೀಂ ಕೋರ್ಟ್‌ನಲ್ಲಿ ಭಾರೀ ಹಿನ್ನಡೆ

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿದ್ದ ಎರಡು ಜಮೀನುಗಳನ್ನು ಡಿನೋಟಿಫೈ ಮಾಡಿದ್ದ ಎಚ್‌ಡಿಕೆ

**ಆಘಾತ ನೀಡಿದ ಸುಪ್ರೀಂ**

• ಉದಯವಾಹಿನಿ, ಬೆಂಗಳೂರು

ಕೇಂದ್ರ ಕೈಗಾರಿಕಾ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ತೀವ್ರ ಆಘಾತ ನೀಡಿದೆ. ಡಿನೋಟಿಫಿಕೇಷನ್ ಪ್ರಕರಣವೊಂದರಲ್ಲಿ ಸಚಿವರಿಗೆ ರಿಲೀಫ್ ನೀಡಲು ನ್ಯಾಯಾಲಯ ನಿರಾಕರಿಸಿದ್ದು, ಕುಮಾರಸ್ವಾಮಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿದೆ.

2020ರಲ್ಲಿ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ಕುಮಾರಸ್ವಾಮಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಆದರೆ ಅಲ್ಲೂ ಅವರಿಗೆ ಹಿನ್ನಡೆ ಆಗಿದೆ. 2006 ಜೂನ್ ಮತ್ತು 2007 ಅಕ್ಟೋಬರ್ ನಡುವೆ ಅವರು ಕರ್ನಾಟಕ ಮುಖ್ಯಮಂತ್ರಿ ಆಗಿದ್ದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿದ್ದ ಎರಡು ಜಮೀನುಗಳನ್ನು ಡಿನೋಟಿಫೈ ಮಾಡಿದ್ದರು. ಇದಕ್ಕೆ ಸಂಬಂಧಿತ ಪ್ರಕ್ರಿಯೆಯನ್ನು ರದ್ದುಪಡಿಸಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿತ್ತು. ಇದೀಗ ಸುಪ್ರೀಂ ಕೋರ್ಟ್ ಕೂಡ ಇದೇ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಮತ್ತು ರಾಜೇಶ್ ಬಿಂಡಾಲ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಕ್ರಿಮಿನಲ್ ಮೊಕದ್ದಮೆಯನ್ನು ಪ್ರಾರಂಭಿಸುವ ಮುನ್ನ ಪೂರ್ವಾನುಮತಿ ಪಡೆದಿಲ್ಲ ಎಂದು ವಾದಿಸಿ ಹಿರಿಯ ವಕೀಲ ಮುಕುಲ್ ರೋಹಟಗಿ ಮತ್ತು ವಕೀಲ ಬಾಲಾಜಿ ಶ್ರೀನಿವಾಸನ್ ಅವರು ಅರ್ಜಿ ಸಲ್ಲಿಸಿದ್ದರು. ಆದರೆ, ಅರ್ಜಿದಾರರ ಮನವಿಯನ್ನು ಪರಿಗಣಿಸಲು ಸರ್ವೋಚ್ಚ ನ್ಯಾಯಾಲಯ ನಿರಾಕರಿಸಿದೆ.

ದೂರು ದಾಖಲಾದಾಗ ತಾವು ಹುದ್ದೆಯಲ್ಲಿ ಇರದೇ ಇದ್ದರೂ ಅನುಮೋದನೆ ಅಗತ್ಯವಿತ್ತು ಎಂದು ಕುಮಾರಸ್ವಾಮಿ ವಾದಿಸಿದ್ದರು. ಇದಕ್ಕೆ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 19(1)(ಬಿ) ತಿದ್ದುಪಡಿಯನ್ನು ಉಲ್ಲೇಖಿಸಿದ್ದರು. ಅಲ್ಲದೆ ಎಚ್‌ಡಿಕೆ ಪರ ವಕೀಲರು, ಸೆಕ್ಷನ್ 19 ಅಡಿಯಲ್ಲಿ ದೂರು ಸ್ವೀಕರಿಸಬಾರದು. ಹೀಗಾಗಿ ಕ್ರಿಮಿನಲ್ ಪ್ರೊಸೀಜರ್ ಕೋಡ್ (ಸಿಆರ್‌ಪಿಸಿ) ಸೆಕ್ಷನ್ 482ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಹೈಕೋರ್ಟ್ ತಪ್ಪು ಮಾಡಿದೆ ಎಂದು ಹೇಳಿದರು.

ಆದರೆ ಇದನ್ನು ಒಪ್ಪದೇ ಡಿನೋಟಿಫಿಕೇಷನ್‌ಗೆ ಸಂಬಂಧಿತ ಪ್ರಕ್ರಿಯೆಯನ್ನು ರದ್ದುಪಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಕರ್ನಾಟಕ ಸರ್ಕಾರದ ಪರವಾಗಿ ಹಿರಿಯ ವಕೀಲರಾ ಹರೀನ್ ಪಿ ರಾವಲ್ ಮತ್ತು ಹೆಚ್ಚುವರಿ ನ್ಯಾಯವಾದಿ ಜನರಲ್ ಅಮನ್ ಪವಾರ್ ವಾದಿಸಿದರು.



### ಭೂಮಿಯ ನೋಟಿಫಿಕೇಶನ್ ರದ್ದತಿಗೆ ಅನುಮೋದನೆ

ಬೆಂಗಳೂರು ದಕ್ಷಿಣದ ಉತ್ತರಹಳ್ಳಿ ಹೋಬಳಿ, ಹಲಗೇವಡೆರಹಳ್ಳಿ ಗ್ರಾಮದಲ್ಲಿನ ಎರಡು ಜಾಗಗಳ ಡಿನೋಟಿಫಿಕೇಶನ್ ಸಂಬಂಧದ ಪ್ರಕರಣ ಇದಾಗಿದೆ. ಈ ಸಂಬಂಧ 2019ರ ಸೆಪ್ಟೆಂಬರ್ 4ರಂದು, ವಿಶೇಷ ನ್ಯಾಯಾಲಯವು ಕುಮಾರಸ್ವಾಮಿ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ನಿರ್ದೇಶಿಸಿತ್ತು. ಅಲ್ಲದೆ 2012ರಲ್ಲಿ ಎಂಎಸ್ ಮಹಾದೇವಸ್ವಾಮಿ ಸಲ್ಲಿಸಿದ್ದ ದೂರಿನ ಆಧಾರದ ಮೇಲೆ ಎಲ್ಲಾ ಆರೋಪಿಗಳಿಗೆ ಸಮನ್ಸ್ ಜಾರಿ ಮಾಡಿತು. ಇದನ್ನು ರದ್ದುಗೊಳಿಸುವಂತೆ ಕೋರಿ ಕರ್ನಾಟಕ ಹೈಕೋರ್ಟ್ ಮೊರೆ ಹೋದಾಗ, 2020ರ ಅಕ್ಟೋಬರ್ 9ರಂದು ಈ ಸಮನ್ಸ್ ಅಥವಾ ಕ್ರಿಮಿನಲ್ ಪ್ರಕ್ರಿಯೆಯನ್ನು ರದ್ದುಪಡಿಸಲು ನಿರಾಕರಿಸಿತ್ತು. ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು 2007ರ ಅಕ್ಟೋಬರ್ 3 ರಂದು ಭೂಮಿಯ ನೋಟಿಫಿಕೇಶನ್ ರದ್ದತಿಗೆ ಅನುಮೋದನೆ ನೀಡುವ ಮೂಲಕ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ ಎಂಬ ಆರೋಪ ಅವರ ಮೇಲೆ ಇದೆ.



| ಈ ದಿನದ ದರ | | | |
|---|---|---|---|
| ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,809 /Gram24ct ₹8,075/Gram22ct | ಬೆಳ್ಳಿ: ₹101.00/Gram |

# ಜೆಡಿಎಸ್ ರಾಜ್ಯಾಧ್ಯಕ್ಷರ ಆಯ್ಕೆ ವಿಚಾರ: ಕುಮಾರಣ್ಣ ಪರ ನಿಖಿಲ್ ಬ್ಯಾಟಿಂಗ್

## ರಾಜ್ಯಾಧ್ಯಕ್ಷರಾಗಿ ಕುಮಾರಸ್ವಾಮಿಯವರೇ ಮುಂದುವರೆಯಬೇಕು ಎನ್ನುವುದು ಎಲ್ಲಾರ ಅಭಿಪ್ರಾಯ

• ಉದಯವಾಹಿನಿ, ಮೈಸೂರು

ಜೆಡಿಎಸ್ ರಾಜ್ಯಾಧ್ಯಕ್ಷರ ಆಯ್ಕೆ ವಿಚಾರವಾಗಿ, ರಾಜ್ಯಾಧ್ಯಕ್ಷರಾಗಿ ಕುಮಾರಸ್ವಾಮಿಯವರೇ ಮುಂದುವರೆಯಬೇಕು ಎನ್ನುವುದು ಎಲ್ಲರ ಅಭಿಪ್ರಾಯವಾಗಿದೆ.



ನಾನು ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತ. ತಳ ಮಟ್ಟದ ಕಾರ್ಯಕರ್ತನಿಗೆ ಸ್ಥಾನಮಾನ ಕೊಡದಿರುವ ಬಗ್ಗೆ ಅಸಮಾಧಾನ ಇದೆ. ಅವರಿಗೆ ಪಕ್ಷದಲ್ಲಿ ಸ್ಥಾನಮಾನ ನೀಡುವ ಕೆಲಸ ಮಾಡುತ್ತೇನೆ. ನನ್ನನ್ನು ರಾಜ್ಯಾಧ್ಯಕ್ಷರಾಗಿ ನೇಮಕ ಮಾಡುವ ಬಗ್ಗೆ ಚರ್ಚೆ ನಡೆದಿಲ್ಲ' ಎಂದು ಮೈಸೂರಿನ ಹೊರವಲಯದ ಖಾಸಗಿ ಹೋಟೆಲ್‌ನಲ್ಲಿ ನಿಖಿಲ್ ಕುಮಾರಸ್ವಾಮಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಮುಂಬರುವ ಜಿಲ್ಲಾ ಪಂಚಾಯತಿ ತಾಲ್ಲೂಕು ಪಂಚಾಯತಿ ಚುನಾವಣೆ ಸಂಬಂಧ ಸಭೆ ನಡೆಸಿದ್ದೇವೆ. ಹಾಲಿ ಮಾಜಿ ಶಾಸಕರು, ಮುಖಂಡರ ಜೊತೆ ಸಭೆ ನಡೆ ಸಿದ್ದೇವೆ. ಮುಖಂಡರ ಅಭಿಪ್ರಾಯ ಸಂಗ್ರಹಿಸುವ ಕೆಲಸ ಆಗಿದೆ. ಪಕ್ಷಕ್ಕೆ ಬಲ ತುಂಬುವ ನಿಟ್ಟಿನಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ಸದಸ್ಯರ ನೇಮಕ, ಚುನಾವಣೆ ಸಂಬಂಧ ಚರ್ಚೆ ಆಗಿದೆ. ಮಾರ್ಚ್ 14ರ ಒಳಗೆ ಡಿಜಿಟಲ್ ಮೂಲಕ ಪಕ್ಷದ ಸದಸ್ಯತ್ವ ನೇಮಕ ಮಾಡುವುದಕ್ಕೆ ಚಾಲನೆ ನೀಡುತ್ತೇವೆ ಎಂದರು.

**ಬಿಜೆಪಿ - ಜೆಡಿಎಸ್ ಮೈತ್ರಿ ವಿಚಾರ:** ಸ್ಥಳೀಯ ಚುನಾವಣೆಗಳಲ್ಲಿ ಸಾಕಷ್ಟು ಜನ ಆಕಾಂಕ್ಷಿಗಳು ಇರುತ್ತಾರೆ. ಸೂಕ್ತ ವ್ಯಕ್ತಿಗಳ ಆಯ್ಕೆ ಮಾಡುವ ನಿಟ್ಟಿನಲ್ಲಿ ಸ್ಥಳೀಯ ನಾಯಕರ ಸಲಹೆ ಪಡೆಯುತ್ತೇವೆ. ಲೋಕಸಭಾ ಚುನಾವಣೆಯಲ್ಲಿ 28ರ ಪೈಕಿ 19ಸಂಸದರ ಆಯ್ಕೆ ಆಗಿದೆ. ಎರಡು ಪಕ್ಷದ ಕಾರ್ಯಕರ್ತರ ಪರಸ್ಪರ ಹೊಂದಾಣಿಕೆಯಿಂದ ಮಾಡಲಾಗಿದೆ. ಮೈತ್ರಿ ಬಗ್ಗೆ ಎರಡು ಪಕ್ಷದ ನಾಯಕರು ಚರ್ಚೆ ಮಾಡ್ತಾರೆ. ಲೋಕಸಭೆ ಚುನಾವಣೆಯಲ್ಲಿ ಎರಡು ಪಕ್ಷಗಳ ಕಾರ್ಯಕರ್ತರು ಹೃದಯ ವೈಶಾಲತೆ ಮೆರೆದಿದ್ದಾರೆ. ಮೋದಿ, ಕುಮಾರಸ್ವಾಮಿಯವರಿಗೆ ಬಲ ತುಂಬಿದ್ದಾರೆ. ಯಾವುದೇ ಗೊಂದಲ ಉಂಟಾಗದ ರೀತಿಯಲ್ಲಿ ನಿರ್ಧಾರ ಕೈಗೊಳ್ಳುತ್ತೇವೆ ಎಂದರು.

**ಉದಯಗಿರಿ ಗಲಾಟೆ ವಿಚಾರ:** ಮೈಸೂರಿನ ಉದಯಗಿರಿಯಲ್ಲಿ ನಡೆದ ಘಟನೆ ನಾಗರೀಕ ಸಮಾಜವೇ ತಲೆ ತಗ್ಗಿಸುವಂತಹ ಘಟನೆ. ಗೃಹ ಸಚಿವರು ಅಸಹಾಯಕತೆಯಿಂದ ಮಾತನಾಡಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಉದಯಗಿರಿಯಲ್ಲಿ ನಡೆದ ಘಟನೆ ಪೂರ್ವ ನಿಯೋಜಿತ ಕೃತ್ಯ. ಡಿಜೆ ಹಳ್ಳಿ ಕೆಜಿ ಹಳ್ಳಿ ಪಾರ್ಟ್ 2. ಈ ಸರ್ಕಾರದಲ್ಲಿ ಅಧಿಕಾರಿಗಳು, ಜನ ಸಾಮಾನ್ಯರು, ಪೊಲೀಸರಿಗೂ ರಕ್ಷಣೆ ಇಲ್ಲ.



### ಬಿಡದಿಯ ಕೇತುಗಾನಹಳ್ಳಿ ಜಮೀನು ವಿಚಾರ

**ಹತ್ತು ವರ್ಷದ ಹಿಂದೆಯಿಂದಲೇ ಪ್ರಾರಂಭ ಮಾಡಿದ್ದರು. ನಾವು ಯಾರಿಗೂ ಮೋಸ ಮಾಡಿ, ಅಕ್ರಮ ಎಸಗಿ ಜಮೀನು ತೆಗೆದುಕೊಂಡಿಲ್ಲ. ಕುಮಾರಸ್ವಾಮಿ ಅವರ ಹೆಸರಿನಲ್ಲಿ ಇರುವ ಒಂದೇ ಒಂದು ಆಸ್ತಿ ಅದು. ನನಗೂ ಕೃಷಿಕನಾಗಿ ಮುಂದುವರೆಬೇಕೆಂದು ಬುದ್ದಿ ಹೇಳಿದ್ದಾರೆ. ನಾವ್ಯಾರು ಅಲ್ಲಿ ಕಮರ್ಷಿಯಲ್ ಬಿಲ್ಡಿಂಗ್ ಕಟ್ಟಿ ಬಾಡಿಗೆ ತೆಗೆದುಕೊಳ್ಳುತ್ತಿಲ್ಲ. ಕುಮಾರಣ್ಣ ನಾವು ಅಲ್ಲಿ ಕೃಷಿ ಮಾಡುತ್ತಿದ್ದೇವೆ ಎಂದರು.**

### ಎಸ್‌ಸಿ, ಎಸ್‌ಟಿ ಹಣ ಗ್ಯಾರಂಟಿಗಾಗಿ ಬಳಕೆ ವಿಚಾರ

**ಎಸ್ಸಿ ಎಸ್ಟಿ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿಗೆ ಹಾಕಿಕೊಂಡಿದ್ದಾರೆ. ಮಾತೆತ್ತಿದರೆ ಎಸ್ಸಿ ಎಸ್ಟಿ ಸಮುದಾಯದ ಜೊತೆ ಇದ್ದೇವೆ ಎನ್ನುತ್ತಾರೆ. ಈ ಸಮುದಾಯಗಳ ಜೊತೆ ಕಾಂಗ್ರೆಸ್ ನಿಂತಿದೆಯಾ ಎಂದು ಅರಿಯಬೇಕು. ಕೇವಲ ಚುನಾವಣೆಯಲ್ಲಿ ವೋಟ್ ಬ್ಯಾಂಕ್ ಗೋಸ್ಕರ ಇದ್ದಾರಾ ಎಲ್ಲವನ್ನು ಯೋಚಿಸಬೇಕು. ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ 40% ಆರೋಪ ಮಾಡಿದ್ದರು. ಈಗಿನ ಸರ್ಕಾರದ ಕಮಿಷನ್‌ಗೆ ಮಿತಿಯೇ ಇಲ್ಲ ಎಂದು ವಾಗ್ದಾಳಿ ನಡೆಸಿದರು.**

ಈ ಸರ್ಕಾರ ಎಲ್ಲಿಗೆ ಬಂದು ನಿಂತಿದೆ ಎಂಬುದನ್ನು ನಾವು ಯೋಚನೆ ಮಾಡಬೇಕು ಎಂದರು. ಚುನಾವಣೆ ಬಂದಾಗ ಒಂದೊಂದು ಜಿಲ್ಲೆಯಲ್ಲಿ ರಾಜಕೀಯ ಬೇರೆ ಬೇರೆ ಇರುತ್ತದೆ. ಸ್ಥಳಿಯ ನಾಯಕರ ಅಭಿಪ್ರಾಯಪಡೆಯುತ್ತೇವೆ. ವರಿಷ್ಠರು ಎಲ್ಲವನ್ನೂ ತೀರ್ಮಾನ ಮಾಡ್ತಾರೆ. ರಾಜ್ಯದ ಏಳಿಗೆಗೆ ದೇಶದ ಏಳಿಗೆಗೆ ಮೋದಿ ಅವರು ಕುಮಾರಸ್ವಾಮಿಗೆ ಜವಾಬ್ದಾರಿ ಕೊಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಕುಮಾರಸ್ವಾಮಿ ಕೆಲಸ ಮಾಡುತ್ತಾರೆ. ಜಿ ಟಿ ದೇವೇಗೌಡರು ಹಿರಿಯರು, ನಮ್ಮ ಪಕ್ಷದ ಚಿಹ್ನೆ ಅಡಿಯಲ್ಲಿ ಗೆದ್ದಿದ್ದಾರೆ. ಜಿ ಟಿ ದೇವೇಗೌಡರು ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರಕ್ಕೆ ಹೆಚಿನ ಒತ್ತನ್ನು ಕೊಡುತ್ತಿದ್ದೇನೆ ಎಂದಿದ್ದಾರೆ ಎಂದರು. 2025 ರ ಮೊದಲ ಕರೆ ನನ್ನದು ಹೋಗಿದ್ದು ಜಿಟಿಡಿಗೆ.

**ಬೇಕಾದರೆ ಅವರನ್ನೇ ಕೇಳಿ**

ಬೇಕಾದರೆ ಅವರನ್ನೇ ಕೇಳಿ. ನನ್ನ ಚುನಾವಣೆ ಅನಿರೀಕ್ಷಿತ, ಎಲ್ಲರೂ ಬಂದು ಚುನಾವಣೆಗೆ ಪ್ರಚಾರ ಕೈಗೊಂಡರು. ಜಿಟಿಡಿ ನನ್ನ ಕರೆದಿಲ್ಲ ಎಂದು ಎಲ್ಲಿ ಹೇಳಿದ್ದಾರೋ ನನಗೆ ಗೊತ್ತಿಲ್ಲ. ನನ್ನನ್ನು ಸೇರಿದಂತೆ ಅನೇಕ ಪಕ್ಷದ ಮುಖಂಡರ ಅಭಿಪ್ರಾಯವಿದೆ. ಕುಮಾರಸ್ವಾಮಿ ಅವರೇ ಪಕ್ಷದ ರಾಜ್ಯಾಧ್ಯಕ್ಷರಾಗಿ ಮುಂದುವರೆಯಲಿ ಎಂಬ ಒತ್ತಾಯವಿದೆ. ಜೆಡಿಎಸ್ ಪಕ್ಷ ಅಧಿಕಾರ ಅನುಭವಿಸಿದ್ದು ಕಡಿಮೆ. ನಮ್ಮ ಕಾರ್ಯಕರ್ತರಿಗೆ ನ್ಯಾಯ ಒದಗಿಸಬೇಕು. ಆ ನಿಟ್ಟಿನಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಜೆಡಿಎಸ್ ನಲ್ಲಿ ಕೆಲ ಬದಲಾವಣೆ ಆಗಬೇಕು, ಆ ಬಗ್ಗೆ ಗಮನ ಹರಿಸಿದ್ದೇನೆ. ಯಾರು ಪಕ್ಷದ ಬೆಳವಣಿಗೆಗೆ ಹೋರಾಟ ಮಾಡ್ತಾರೋ ಅಂತಹ ಸಕ್ರಿಯ ಕಾರ್ಯಕರ್ತರನ್ನು ಈ ಬಾರಿ ಪಾದಧಿಕಾರಿಗಳಾಗಿ ಆಯ್ಕೆ ಮಾಡುತ್ತೇವೆ ಎಂದರು.

---

# 100 ಹಾಸಿಗೆಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ

• ಉದಯವಾಹಿನಿ, ಕುಶಾಲನಗರ

ತಾಲ್ಲೂಕು ಕೇಂದ್ರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ನೂರು ಹಾಸಿಗೆ ಇರುವ ತಾಲ್ಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಗುವುದು, ಪೊನ್ನಂಪೇಟೆಯಲ್ಲಿ ಸಮುದಾಯ ಆರೋಗ್ಯ ಕೇಂದ್ರವನ್ನು ತೆರೆಯಲಾಗುವುದು ಎಂದು ಆರೋಗ್ಯ, ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕನ್ನಡ ಸಿರಿ ಸ್ನೇಹ ಬಳಗ ಕರ್ನಾಟಕ ಸುವರ್ಣ ಸಂಭ್ರಮಾಚರಣೆಯ 50ನೇ ಕಾರ್ಯಕ್ರಮವಾಗಿ ಇಲ್ಲಿ ಮಂಗಳವಾರ ಆಯೋಜಿಸಿದ್ದ ಮಾಜಿ ಸಿಎಂ ದಿ.ಆರ್.ಗುಂಡೂರಾವ್ ಅವರಿಗೆ ನುಡಿನಮನ ಹಾಗೂ ಮಾಜಿ ಮುಖ್ಯಮಂತ್ರಿ ದಿ.ವೀರೇಂದ್ರ ಪಾಟೀಲರ ಜನ್ಮ ಶತಮಾನೋತ್ಸವದ ಕುಶಲೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.



ಉದಯವಾಹಿನಿ ಚಿತ್ರ

ಈ ಎರಡು ಆಸ್ಪತ್ರೆಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿಯೇ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ಬಜೆಟ್‌ನಲ್ಲಿ ಸೇರ್ಪಡೆಯಾಗದಿದ್ದರೂ ಈ ಎರಡೂ ಕಾರ್ಯಗಳನ್ನು ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು. ವಿಪಕ್ಷಗಳು ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಎಲ್ಲಾ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ನೀಡಲಾಗುತ್ತಿದೆ ಎಂದು ದೂರುತ್ತಿದ್ದಾರೆ. ಆದರೆ, ಗ್ಯಾರಂಟಿ ಯೋಜನೆಗಳ ಜೊತೆಗೆ ರಾಜ್ಯದ ಅಭಿವೃದ್ಧಿಗೆ ಸರ್ಕಾರ ವಿಶೇಷ ಒತ್ತು ನೀಡುತ್ತಿದೆ ಎಂದರು.

ಲೇಖಕಿ ಪುಷ್ಪಶಿವರಾಮ್ ರೈ ಅವರು ಬರೆದ ತಂಬೆಲರು ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಹಾರಂಗಿ ಜಲಾಶಯ ನಿರ್ಮಾಣದಿಂದ ಮೈಸೂರು, ಕೊಡಗು ಭಾಗದ ರೈತರಿಗೆ ತುಂಬ ಅನುಕೂಲವಾಗಿದೆ. ಈ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ದಿ.ಆರ್.ಗುಂಡೂರಾವ್ ಅವರ ಹಾಗೂ ದಿ.ವೀರೇಂದ್ರ ಪಾಟೀಲರನ್ನು ಸ್ಮರಣೆ ಮಾಡಬೇಕು ಎಂದರು. ಕನ್ನಡಸಿರಿ ಸ್ನೇಹ ಬಳಗದ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

**ಕೇಂದ್ರ ಸರ್ಕಾರ ಕೊಡಗಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಬಜೆಟ್‌ನಲ್ಲಿ ವಿಶೇಷ ಅನುದಾನ ಕಲ್ಪಿಸಿದೆ. ಕೊಡಗಿನ 50 ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯಗಳೊಂದಿಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುತ್ತಿದೆ. ಪ್ರವಾಸಿಗರಿಗೆ ಎಲ್ಲಾ ರೀತಿ ಅನುಕೂಲ ಮಾಡಿ ಕೊಡಲಾಗುತ್ತದೆ ಎಂದರು.**

---

# ಇ-ಖಾತಾ ಅಭಿಯಾನಕ್ಕೆ ಚಾಲನೆ

• ಉದಯವಾಹಿನಿ, ಬಾಗೇಪಲ್ಲಿ

ಇಲ್ಲಿನ ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಸೋಮವಾರ ಇ-ಖಾತಾ ಅಭಿಯಾನಕ್ಕೆ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ, ಅಧ್ಯಕ್ಷ ಎ.ಶ್ರೀನಿವಾಸ್ ಚಾಲನೆ ನೀಡಿದರು. ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಮಾತನಾಡಿ, ಜನಸಾಮಾನ್ಯರಿಗೆ ಅತಿ ಮುಖ್ಯವಾಗಿ ತಮ್ಮ ನಿವೇಶನ, ಜಮೀನುಗಳು, ಮನೆ ಇದ್ದರೂ, ಅಧಿಕೃತವಾಗಿ ದಾಖಲೆ ಇ-ಖಾತಾ ಇರಲಿಲ್ಲ. ಇ-ಖಾತಾ ಮಾಡಿಸಲು ಜನರು ಅನೇಕ ಸಂಕಷ್ಟ ಎದುರಿಸುತ್ತಿದ್ದರು. ಹೀಗಾಗಿ, ಜನರಿಗೆ ಅನುಕೂಲವಾಗಲೆಂದು ಕಾಂಗ್ರೆಸ್ ಸರ್ಕಾರವು ಇ-ಖಾತಾ ಮಾಡಿಸಲು ಅವಕಾಶ ಕಲ್ಪಿಸಿದೆ. ಪುರಸಭೆ ವ್ಯಾಪ್ತಿಯಲ್ಲಿ ಬರುವ ವಸತಿ ಕಟ್ಟಡ, ವಾಣಿಜ್ಯ ಕಟ್ಟಡ ಮತ್ತು ಖಾಲಿ ನಿವೇಶನ ಆಸ್ತಿಗಳ ಮಾಲೀಕರು ಅಗತ್ಯ ದಾಖಲೆಗಳನ್ನು ಅರ್ಜಿಗಳ ನಮೂನೆಗಳಲ್ಲಿ ವಿತರಿಸಿದರೆ, ಅಧಿಕಾರಿಗಳು ಪರಿಶೀಲಿಸಿ, ಇ-ಖಾತಾ ಮಾಡಿಸಿಕೊಡುತ್ತಾರೆ.

ಯಾವುದೇ ದಲ್ಲಾಳಿಗಳು, ರಾಜಕೀಯ ಮುಖಂಡರ ಜೊತೆ ಬರದೆ ನೇರವಾಗಿ ಕಚೇರಿಗೆ ಬಂದು ಇ-ಖಾತೆ ಮಾಡಿಸಿಕೊಳ್ಳುವಂತೆ ತಿಳಿಸಿದರು.



ಉದಯವಾಹಿನಿ ಚಿತ್ರ

ಪುರಸಭೆ ಅಧ್ಯಕ್ಷ ಎ.ಶ್ರೀನಿವಾಸ್ ಮಾತನಾಡಿ, ಇ-ಖಾತೆಗಳು ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಪುರಸಭೆ ವ್ಯಾಪ್ತಿಯ ಜನರು ತಮ್ಮ ನಿವೇಶನ, ಮನೆ, ಖಾಲಿ ಜಾಗಗಳ ಮಾಲೀಕರು ಇದರ ಅನುಕೂಲ ಪಡೆಯಬೇಕು ಎಂದರು. ಪುರಸಭೆ ಮುಖ್ಯಾಧಿಕಾರಿ ಎಂ.ಶ್ರೀನಿವಾಸ್ ಮಾತನಾಡಿ, ಇ ಖಾತೆಗೆ ಸಲ್ಲಿಸಬೇಕಾದ ಅಗತ್ಯ ದಾಖಲೆಗಳ ಮಾಹಿತಿಯನ್ನು ಕರಪತ್ರಗಳ ಮೂಲಕ ಹಂಚಲಾಗಿದೆ. ಆಸ್ತಿಗಳ ಮಾಲೀಕರು ಆಸ್ತಿಗೆ ಸಂಬಂಧಿಸಿದ ಪತ್ರಗಳನ್ನು ಸಲ್ಲಿಸಬೇಕು. ದಲ್ಲಾಳಿಗಳು, ಮುಖಂಡರ ನೆರವು ಇಲ್ಲದೆ ಆಸ್ತಿಗಳ ಮಾಲೀಕರು ನೇರವಾಗಿ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದರು.


---

# ಪಂಚಲಿಂಗ ಭಕ್ತರ ದರ್ಶನಕ್ಕೆ ಮುಕ್ತ

• ಉದಯವಾಹಿನಿ, ಶಿಡ್ಲಘಟ್ಟ

ಶಿವರಾತ್ರಿ, ಹಬ್ಬ ಪ್ರಯುಕ್ತ ನಗರದಲ್ಲಿರುವ ಪಂಚ ಲಿಂಗವು ಭಕ್ತರ ದರ್ಶನಕ್ಕೆ ಮುಕ್ತವಾಗಿದೆ. ಅಶೋಕ ರಸ್ತೆಯ ಕೋಟೆ ಸೋಮೇಶ್ವರ, ಪೇಟೆ ನಗರೇಶ್ವರ, ಕಾಶಿ ವಿಶ್ವನಾಥೇಶ್ವರ, ಅಗ್ರಹಾರ ಬೀದಿಯ ಶ್ರೀಕಂಠೇಶ್ವರ ಮತ್ತು ಏಕಾಂಬರೇಶ್ವರ ದೇವಾಲಯಗಳಲ್ಲಿ ದರ್ಶನ ಪಡೆಯುವ ಮೂಲಕ ಭಕ್ತರಿಗೆ ಪಂಚಲಿಂಗಗಳನ್ನು ಪೂಜಿಸುವ ಅವಕಾಶವಿದೆ. ನಗರದಿಂದ 2 ಕಿ.ಮೀ ದೂರವಾದರೂ ಭಕ್ತರು ನಡೆದುಕೊಂಡೇ ವೀರಾಪುರದ ಗವಿಗಂಗಾಧರೇಶ್ವರ, ಬೂದಾಳದ ಮಲೆಮಲ್ಲೇಶ್ವರ ದೇವಾಲಯಗಳನ್ನು ಸಂದರ್ಶಿಸುತ್ತಾರೆ. ಆಕಾಶದಿಂದ ವೀಕ್ಷಿಸಿದರೆ, ಈ ಐದು ದೇವಾಲಯಗಳೂ ಸೇರಿ ಲಿಂಗಾಕೃತಿಯಲ್ಲಿ ಗೋಚರವಾಗಲಿದ್ದು, ತನ್ನದೇ ಆದ ಧಾರ್ಮಿಕ ಇತಿಹಾಸ ಮಡಿಲಲ್ಲಿ ಇಟ್ಟುಕೊಂಡಿರುವ ಈ ದೇವಾಲಯಗಳಿಗೂ ಶಿವರಾತ್ರಿ ಮತ್ತು ಶಿವನಿಗೆ ನಂಟು ಇದೆ ಎಂಬುದು ಜನರ ನಂಬಿಕೆ.

ಹಾಗಾಗಿ ಲಿಂಗಾಕಾರದ ಈ ಪಂಚ ದೇವಾಲಯಗಳಲ್ಲಿ ಶಿವರಾತ್ರಿ ಹಬ್ಬದ ಆಚರಣೆ ವಿಶಿಷ್ಟ, ವಿಶೇಷವಾಗಿ ನಡೆಯಲಿದೆ. ನಗರವಲ್ಲದೆ ತಾಲ್ಲೂಕಿನ ಇನ್ನೂ ಹಲವು ಶಿವ ದೇವಾಲಯಗಳಲ್ಲಿ ಶಿವರಾತ್ರಿ ಹಬ್ಬದ ಉತ್ಸವಕ್ಕೆ ಸಕಲ ಸಿದ್ಧತೆ ನಡೆದಿದ್ದು, ಶಿವನಾಮ ಸ್ಮರಣೆ ನಡೆಯಲಿದೆ. ಬೂದಾಳದ ಮಲೆಮಲ್ಲೇಶ್ವರ ದೇವಾಲಯ, ನಲ್ಲರಾಳ್ಳಿ ಬಳಿಯ ಶ್ರೀರಾಮಲಿಂಗನ ಬೋಡು ದೇವಾಲಯದ ಜೊತೆಗೆ ತಲಕಾಯಲಬೆಟ್ಟದ ವೆಂಕಟರಮಣ, ಚಿಕ್ಕದಾಸರಹಳ್ಳಿಯ ಬ್ಯಾಟರಾಯ ದೇವಾಲಯ ಸೇರಿ ಇತರೆ ದೇವಾಲಯಗಳಲ್ಲೂ ವಿಶೇಷ ಪೂಜೆ ನಡೆಯಲಿವೆ.



ಉದಯವಾಹಿನಿ ಚಿತ್ರ

ಚೌಡಸಂದ್ರದ ಸೋಮೇಶ್ವರ ದೇಗುಲದಲ್ಲಿ ಶಿವರಾತ್ರಿಯಂದು ಬೆಳಗ್ಗೆ ಸೂರ್ಯಕಿರಣ ಲಿಂಗ ಸ್ಪರ್ಶಿಸುವುದು ವಿಶೇಷ ಆಕರ್ಷಣೆ. ಸುತ್ತಮುತ್ತಲ ಗ್ರಾಮಸ್ಥರು ಇದನ್ನು ತಂಡೋಪತಂಡವಾಗಿ ಆಗಮಿಸಿ ದರ್ಶನ ಪಡೆಯುವರು.

ಶಿವರಾತ್ರಿ ಆಚರಣೆಗಾಗಿ ಈಗಾಗಲೇ ಈ ದೇವಾಲಯಗಳು ಸುಣ್ಣ ಬಣ್ಣಗಳಿಂದ ಅಲಂಕೃತವಾಗಿದ್ದು, ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿವೆ. ಪೂಜೆ ಜತೆಗೆ ಶಿವನ ಬಗ್ಗೆ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ.

### ಬ್ರಹ್ಮಕುಮಾರಿ ಸಮಾಜದಿಂದ ದ್ವಾದಶ ಲಿಂಗಗಳ ದರ್ಶನ

**ವಿಶೇಷವಾಗಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದಿಂದ ಶಿವರಾತ್ರಿ ಆಚರಣೆಗೆ ಸಿದ್ಧತೆ ನಡೆದಿದೆ. ಶಿವನ ಜೀವನ ಚರಿತ್ರೆ, ಸಾಕ್ಷಾತ್ಕಾರ ಕುರಿತು ವಿಶೇಷ ಉಪನ್ಯಾಸ, ಪ್ರವಚನಗಳೂ ನಡೆಯಲಿವೆ. ಜಾಗರಣೆ, ಉಪವಾಸದ ಮಹಿಮೆ ಕುರಿತು ಮನದಟ್ಟು ಮಾಡಲಿದ್ದಾರೆ. ನಗರದ ಅರಳೇಪೇಟೆಯ ಬಸವೇಶ್ವರ ದೇವಾಲಯದ ಆವರಣದಲ್ಲಿ ಬ್ರಹ್ಮಕುಮಾರಿ ಸಮಾಜದಿಂದ ದ್ವಾದಶ ಲಿಂಗಗಳ ದರ್ಶನ ನಡೆಯಲಿದೆ.**

---

# ಅಸಮರ್ಪಕ ವಿದ್ಯುತ್ ಪೂರೈಕೆ: ರೈತರ ಪ್ರತಿಭಟನೆ

• ಉದಯವಾಹಿನಿ, ಶಿರಾ

ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿಯ ಬೆಸ್ಕಾಂ ಅಧಿಕಾರಿಗಳು ರೈತರಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡುತ್ತಿಲ್ಲ. ಬೆಳೆಗಳು ಒಣಗುತ್ತಿದ್ದರು ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿ ಬೆಸ್ಕಾಂ ಕಚೇರಿ ಮುಂದೆ ರೈತರು ಮಂಗಳವಾರ ಪ್ರತಿಭಟನೆ ನಡೆಸಿದರು.



ಬುಕ್ಕಾಪಟ್ಟಣ ಹೋಬಳಿಯ ಮಂಗನಹಳ್ಳಿ, ಕಂಬದಹಳ್ಳಿ, ಹುಯಿಲ್ ದೊರೆ, ರಂಗನಾಥಪುರ, ಬುಕ್ಕಾಪಟ್ಟಣ ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಡಿಕೆ ಗಿಡ ಉಳಿಸಿಕೊಳ್ಳಲಾಗದೆ ಕಣ್ಣೆದುರಿಗೆ ಬೆಳೆ ಒಣಗುತ್ತಿದೆ. ಓವರ್ ಲೋಡಿಂಗ್ ನೆಪಒಡ್ಡಿ ದಿನದಲ್ಲಿ ಕೇವಲ ಅರ್ಧ ಗಂಟೆ ಮಾತ್ರ ಕರೆಂಟ್ ನೀಡಲಾಗುತ್ತಿದೆ. ಬಿಸಿಲಿಗೆ ಬೆಳೆ ಒಣಗುತ್ತಿವೆ. ಬೆಳೆ ಉಳಿಸಿಕೊಳ್ಳಲು ಹರಸಾಹಸ ಪಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶ್ರೀನಿವಾಸ್ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

---

# ಬೆಳಗಾವಿ ಘಟನೆ ಖಂಡಿಸಿ ಕರವೇ ಪ್ರತಿಭಟನೆ

• ಉದಯವಾಹಿನಿ, ಕೆ.ಆರ್.ಪೇಟೆ

ಬೆಳಗಾವಿಯಲ್ಲಿ ಕೆ.ಎಸ್.ಆರ್.ಟಿ.ಸಿ ಸಾರಿಗೆ ಬಸ್ ನಿರ್ವಾಹಕನ ಮೇಲೆ ಹಾಗೂ ಖಾನಾಪುರದ ಹೋಟೆಲ್‌ನಲ್ಲಿ ಕರವೇ ಉಪಾಧ್ಯಕ್ಷರ ಮೇಲೆ ಹಲ್ಲೆ ನಡೆಸಿರುವ ಮಹಾರಾಷ್ಟ್ರದ ಕಿಡಿಗೇಡಿಗಳ ಗುಂಪನ್ನು ತಕ್ಷಣವೇ ಬಂಧಿಸಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಘಟಕವು ಗ್ರೇಡ್-2 ತಹಶೀಲ್ದಾರ್ ಲೋಕೇಶ್ ಅವರಿಗೆ ಮನವಿ ಸಲ್ಲಿಸಿತು. ತಾಲ್ಲೂಕು ಘಟಕದ ಅಧ್ಯಕ್ಷ ಶ್ರೀನಿವಾಸಗೌಡ ನೇತೃತ್ವದಲ್ಲಿ ಪಟ್ಟಣದ ಮಿನಿವಿಧಾನಸೌಧದ ಮುಂದೆ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ಘೋಷಣೆ ಕೂಗಿದರು.

ಕರವೇ ಪದವೀಧರ ಅಧ್ಯಕ್ಷ ಚಿಕ್ಕೋನಹಳ್ಳಿ ಚೇತನಕುಮಾರ್, ತಾಲ್ಲೂಕು ಕರವೇ ಅಧ್ಯಕ್ಷ ಅಗ್ರಹಾರ ಬಾಚಹಳ್ಳಿ ಶ್ರೀನಿವಾಸಗೌಡ ಕರವೇ ಜಿಲ್ಲಾ ಉಪಾಧ್ಯಕ್ಷ ಶಿವಪ್ರಸಾದ್, ಮುಖಂಡರಾದ ಶಿವಪ್ಪ, ಹೊಸಹೊಳಲು ಗೋಪಿ, ಮದನ್, ಆನಂದ್, ಮನು, ಸ್ವಾಮಿ, ಚೇತನ್, ಹರೀನಹಳ್ಳಿ ಲೋಕೇಶ್, ಹರೀಶ್, ಅಜಯ್, ಕಲಾವಿದ ನಂಜುಂಡಸ್ವಾಮಿ ಕಾರ್ಯಕರ್ತರು ಭಾಗವಹಿಸಿದ್ದರು.




ಉದಯವಾಹಿನಿ ಚಿತ್ರ

### ಕೂಡಲೇ ಅಮಾನತು ಮಾಡಿ

**ಕನ್ನಡ ನೆಲದಲ್ಲಿ ಕರ್ನಾಟಕದ ಸಾರಿಗೆ ಬಸ್ಸಿನಲ್ಲಿ ಕನ್ನಡದಲ್ಲಿ ಮಾತನಾಡಿದ್ದಕ್ಕೆ ಎಂ.ಇ.ಎಸ್. ಹಾಗೂ ಮರಾಠಿ ಪುಂಡರು ನಿರ್ವಾಹಕನ ಮೇಲೆ ಹಲ್ಲೆ ನಡೆಸಿ, ಸುಳ್ಳು ಪೋಕ್ಸೋ ಕೇಸ್ ಹಾಕಿರುವ ಪೊಲೀಸರನ್ನು ಕೂಡಲೇ ಅಮಾನತು ಮಾಡಬೇಕು. ಕನ್ನಡ ನೆಲದಲ್ಲಿ ಆರಂಭಿಸಿರುವ ಮರಾಠ ಅಭಿವೃದ್ಧಿ ನಿಗಮವನ್ನು ರದ್ದು ಮಾಡಬೇಕು' ಎಂದು ಒತ್ತಾಯಿಸಿದರು.**

---

# ಚಿರತೆ ದಾಳಿಗೆ ನಾಯಿ ಬಲಿ

• ಉದಯವಾಹಿನಿ, ಬೆಳಕವಾಡಿ

ಸಮೀಪದ ಐನೋರ ಹುಂಡಿ ಗ್ರಾಮದ ಜಡೇಸ್ವಾಮಿ ಅವರ ಮನೆಯ ಮುಂದೆ ಇದ್ದ ಸಾಕು ನಾಯಿ ಮೇಲೆ ಚಿರತೆ ದಾಳಿ ಮಾಡಿ ಕೊಂದು ಹಾಕಿದೆ.

ಇದರಿಂದಾಗಿ ಗ್ರಾಮದ ಜನರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಸಾಕಷ್ಟು ಬಾರಿ ಈ ಭಾಗದಲ್ಲಿ ಚಿರತೆಗಳು ನಿರಂತರವಾಗಿ ದಾಳಿ ಮಾಡುತ್ತಿದ್ದರೂ ಅರಣ್ಯ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ. ಇನ್ನಾದರೂ ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚೆತ್ತು ಚಿರತೆ ಸೆರೆಗೆ ಮುಂದಾಗಬೇಕು' ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



# ಕಾಡಾನೆ ಉಪಟಳ; ತೆಂಗಿನ ಗಿಡ ನಾಶ

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ವಲಯ ವ್ಯಾಪ್ತಿಯ ಅಲತ್ತೂರು ಗ್ರಾಮದ ರೈತರ ಜಮೀನುಗಳಲ್ಲಿ ಸೋಮವಾರ ರಾತ್ರಿ ಕಾಡಾನೆ ದಾಳಿ ನಡೆಸಿ 10ಕ್ಕೂ ಹೆಚ್ಚಿನ ತೆಂಗಿನ ಗಿಡಗಳನ್ನು ನಾಶ ಪಡಿಸಿದೆ. ಆಲತ್ತೂರು ಗ್ರಾಮದ ಶಾಂತೇಶ್ ಮತ್ತು ಸಿದ್ದೇಗೌಡ ಅವರು ತೆಂಗಿನ ಬೆಳೆ ನಷ್ಟ ಅನುಭವಿಸಿದ ರೈತರು. 'ತೋಟಗಾರಿಕೆ ಬೆಳೆ, ಕಲ್ಪವೃಕ್ಷ ಎಂಬ ಕಾರಣಕ್ಕೆ ತೆಂಗಿನ ಗಿಡಗಳನ್ನು ಕಷ್ಟಪಟ್ಟ ಬೆಳೆಸುತ್ತಿದ್ದೇವೆ.



ಉದಯವಾಹಿನಿ ಚಿತ್ರ

ಆದರೆ ಸಲಗ ಒಂದಿಲ್ಲೊಂದು ಕಡೆ ದಾಳಿ ನಡೆಸುವ ಕಾರಣ ತೆಂಗು ಉಳಿದುಕೊಳ್ಳುವ ಭರವಸೆ ಹೋಗಿದೆ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದರು.

---

## ಮಿನಿ ನ್ಯೂಸ್

# ಕಿಸಾನ್ ಸಮ್ಮಾನ್ ನಿಧಿ ಯೋಜನೆ ವೀಕ್ಷಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಾಗಡಿ

ತಾಲ್ಲೂಕಿನ ಚಂದ್ರಾಯನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಪಿ.ಎಂ.ಕಿಸಾನ್ ಸಮ್ಮಾನ ನಿಧಿ-19ನೇ ಕಂತಿನ ಬಿಡುಗಡೆ ನೇರ ವೀಕ್ಷಣೆ ಸಮಾರಂಭ ನಡೆಯಿತು. ಕೃಷಿ ಮಹಾವಿದ್ಯಾಲಯ ಡೀನ್ ಡಾ.ಎನ್.ಬಿ.ಪ್ರಕಾಶ್ ಮಾತನಾಡಿ, ಕಿಸಾನ್ ಸಮ್ಮಾನ್ ನಿಧಿ ಯೋಜನೆಯು ದೇಶದ ಲಕ್ಷಾಂತರ ರೈತರಿಗೆ ನೇರ ಆದಾಯ ನೀಡುವುದರ ಜತೆಗೆ ಗ್ರಾಮೀಣ ಕುಟುಂಬದ ಬೆನ್ನಲುಬು. ಅದರಲ್ಲೂ ಮಹಿಳೆಯರನ್ನು ಸಬಲೀಕರಣಗೊಳಿಸುವ ಒಂದು ಮಹತ್ತರ ಹೆಜ್ಜೆಯಾಗಿದೆ ಎಂದರು.

ಜಂಟಿ ಕೃಷಿ ನಿರ್ದೇಶಕಿ ಅಂಬಿಕಾ ಮಾತನಾಡಿ, ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಉಪಯೋಗವನ್ನು ಪಡೆಯುವ ರೀತಿ, ಅರ್ಜಿ ಸಲ್ಲಿಸುವ ವಿಧಾನ, ಅಗತ್ಯ ದಾಖಲೆಗಳ ಸಲ್ಲಿಕೆ ವಿವರ ಕುರಿತು ಮಾಹಿತಿ ನೀಡಿದರು. ತಾಲ್ಲೂಕಿನ ಕೃಷಿಕ ಸಮಾಜದ ಅಧ್ಯಕ್ಷ ರಂಗಸ್ವಾಮಿ ಮಾತನಾಡಿ, ರೈತರು ಕೇಂದ್ರ ಸರ್ಕಾರದ ಈ ಯೋಜನೆಯ ಸಂಪೂರ್ಣ ಪ್ರಯೋಜನ ಪಡೆಯಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಪ್ರಗತಿಪರ ಕೃಷಿಕರನ್ನು ಸನ್ಮಾನಿಸಲಾಯಿತು.

# ಸುಳ್ಳು ಸಾಕ್ಷಿ ಹೇಳಿದ್ದ ಪತ್ರ ಬರಹಗಾರನಿಗೆ ಮೂರು ವರ್ಷ ಜೈಲು

• ಉದಯವಾಹಿನಿ, ಪಾವಗಡ

ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದ್ದ ಪತ್ರ ಬರಹಗಾರ ಸುಬ್ಬರಾಯಪ್ಪ ಅವರಿಗೆ ಪಟ್ಟಣದ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಬಿ.ಪ್ರಿಯಾಂಕ ಮೂರು ವರ್ಷ ಜೈಲು ಶಿಕ್ಷೆ ಮತ್ತು 10 ಸಾವಿರ ದಂಡ ವಿಧಿಸಿದ್ದಾರೆ. ಸಿವಿಲ್ ಪ್ರಕರಣವೊಂದರಲ್ಲಿ ಮುಖ್ಯ ವಿಚಾರಣೆ ವೇಳೆ ಕರಾರು ಪತ್ರ ಬರೆದಿದ್ದು, ಸಾಕ್ಷಿಗಳ ಸಮ್ಮುಖದಲ್ಲಿ 31 ಸಾವಿರದ ವ್ಯವಹಾರ ನಡೆದಿತ್ತು. ಸಾಕ್ಷಿಗಳು ಸಹಿ ಹಾಕಿದ್ದರು ಎಂದು ಪತ್ರ ಬರಹಗಾರ ತಿಳಿಸಿದ್ದರು. ಆದರೆ ನ್ಯಾಯಲಯದ ವಿಚಾರಣೆಯಲ್ಲಿ ಅವರು ನೀಡಿದ್ದ ಹೇಳಿಕೆಗೆ ವಿರುದ್ಧವಾಗಿ ಹಣದ ವ್ಯವಹಾರ ನಡೆದಿರಲಿಲ್ಲ ಮತ್ತು ಸ್ಟಾಂಪ್‌ಪೇಪರ್ ನೀಡಿರಲಿಲ್ಲ. ಕೇವಲ 2ರ ದಾಸ್ತಾವೇಜಿನಲ್ಲಿ ಬರೆದು ಕೊಡಲಾಗಿತ್ತು ಎಂದು ತಿಳಿಸಿದ್ದರು. ನ್ಯಾಯಾಧೀಶರು ವಿಚಾರಣೆ ನಡೆಸಿ ಸ್ವಯಂ ಪ್ರಕರಣ ದಾಖಲಿಸಿತ್ತು. ಸರ್ಕಾರಿ ವಕೀಲ ಸಣ್ಣೀರಪ್ಪ ಸರ್ಕಾರದ ಪರ ವಾದ ಮಂಡಿಸಿದ್ದರು. ನ್ಯಾಯಾಧೀಶೆ ಬಿ.ಪ್ರಿಯಾಂಕ ಮಂಗಳವಾರ ಅಪರಾಧಿಗೆಗೆ ಶಿಕ್ಷೆ ಮತ್ತ ದಂಡ ವಿಧಿಸಿದ್ದಾರೆ.

# ಆಗ್ನೇಯ ಪದವೀಧರ ಶಿಕ್ಷಕರ ಕ್ಷೇತ್ರ: ಜೆಡಿಯು ಅಭ್ಯರ್ಥಿ

• ಉದಯವಾಹಿನಿ, ತುಮಕೂರು

ಮುಂದಿನ ವರ್ಷ ನಡೆಯಲಿರುವ ಆಗ್ನೆಯ ಪದವೀಧರ ಶಿಕ್ಷಕರ ಕ್ಷೇತ್ರದ ಸಂಯುಕ್ತ ಜನತಾದಳ (ಜೆಡಿಯು) ಅಭ್ಯರ್ಥಿಯಾಗಿ ವೈದ್ಯ ಕೆ.ನಾಗರಾಜ ಸ್ಪರ್ಧಿಸಲಿದ್ದಾರೆ ಎಂದು ಪಕ್ಷದ ರಾಜ್ಯ ಘಟಕದ ಮಹಿಮಾ ಜೆ.ಪಟೇಲ್ ಹೇಳಿದರು. ಪ್ರತಿ ಮತದಾರರನ್ನು ತಲುಪುವ ಉದ್ದೇಶದಿಂದ ಬೇಗ ಅಭ್ಯರ್ಥಿಯನ್ನು ಘೋಷಿಸಲಾಗಿದೆ. ಹಣ, ಹೆಂಡ, ಆಮಿಷಗಳ ಹೊರತಾಗಿಯೂ ಜನ ವ್ಯಕ್ತಿ ನೋಡಿ ಮತ ಹಾಕುವ ವಾತಾವರಣ ನಿರ್ಮಾಣವಾಗಬೇಕು. ಪ್ರಸ್ತುತ ರಾಜಕೀಯವೆಂದರೆ ಹಣ ಹೂಡಿ, ಹಣ ಮಾಡುವುದು ಎಂಬಂತಾಗಿದೆ. ಈ ಸ್ಥಿತಿ ಬದಲಾಗಬೇಕು ಎಂಬುದು ಜೆಡಿಯು ಆಶಯ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಸರ್ವೋದಯ ಪರಿಕಲ್ಪನೆಯಲ್ಲಿ ಹೊಸ ತಂಡ ಕಟ್ಟಿ ರಾಜ್ಯದಾದ್ಯಂತ ಪ್ರವಾಸ ಮಾಡಲಾಗುತ್ತಿದೆ. ಫೆ. 28ರಂದು ಧಾರವಾಡದಿಂದ ಗದಗವರೆಗೆ ಒಂದು ದಿನದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಏ.3, 4ರಂದು ಸಾಣೇನಹಳ್ಳಿ ಮಠದಲ್ಲಿ ನೈತಿಕ ರಾಜಕಾರಣದ ಬಗ್ಗೆ ಕಾಳಜಿ ಹೊಂದಿರುವ ಎಲ್ಲಾ ಪಕ್ಷದ ಮುಖಂಡರ ಜತೆಗೆ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದರು. ಡಾ.ಕೆ.ನಾಗರಾಜ, 2017ರ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಅಲ್ಪ ಮತಗಳ ಅಂತರದಲ್ಲಿ ಪರಾಭವಗೊಂಡಿದ್ದ. ಈ ಬಾರಿ ಜೆಡಿಯು ಸಹಕಾರದಿಂದ ಚುನಾವಣೆ ಗೆಲ್ಲಲು ಪ್ರವಾಸ ಕೈಗೊಳ್ಳಲಾಗಿದೆ. ಪ್ರತಿ ಮತದಾರರನ್ನು ಭೇಟಿಯಾಗಿ ಮತಯಾಚನೆ ಮಾಡಲಾಗುವುದು ಎಂದು ಹೇಳಿದರು. ಕೆ.ಆರ್.ರಂಗನಾಥ್, ಉಪಾಧ್ಯಕ್ಷೆ ಯಶೋದ, ಮುಖಂಡರಾದ ಶ್ರೀನಿವಾಸಗೌಡ, ಶಾಂತಕುಮಾರಿ, ಬಿ.ಎಂ.ಪ್ರಭು, ಚಂದ್ರಶೇಖರ ಗಂಗು, ಕಲ್ಪನಾಗೌಡ ಇತರರು ಉಪಸ್ಥಿತರಿದ್ದರು.


---

# ಹಲವೆಡೆ ನಳ ಸಂಪರ್ಕವಿಲ್ಲ; ನೀರು ಸೋರಿಕೆ ಕೇಳೋರಿಲ್ಲ

## 24X7 ಕುಡಿಯುವ ನೀರು ಯೋಜನೆ: ನಗರಸಭೆ ತುರ್ತುಸಭೆಯಲ್ಲಿ ಸಮಸ್ಯೆಗಳ ಅನಾವರಣ

• ಉದಯವಾಹಿನಿ, ರಾಮನಗರ

ನಮ್ಮ ವಾರ್ಡ್‌ನ ಗಲ್ಲಿಯಲ್ಲಿರುವ ಹಲವು ಮನೆಗಳಿಗೆ ನೀರಿನ ಸಂಪರ್ಕವನ್ನೇ ಕೊಟ್ಟಿಲ್ಲ. ಈ ಕುರಿತು ಜನ ನಮ್ಮನ್ನು ಏರು ದನಿಯಲ್ಲಿ ಪ್ರಶ್ನಿಸುತ್ತಿದ್ದಾರೆ. ಅಧಿಕಾರಿಗಳ ಗಮನಕ್ಕೆ ತಂದರೆ ಇಂದು, ನಾಳೆ ಎಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಾರೆ. ಹಲವೆಡೆ ಸೋರಿಕೆಯಾಗುತ್ತಿರುವ ನೀರನ್ನು ಕೇಳೋರೇ ಇಲ್ಲ. ನಮ್ಮ ವಾರ್ಡ್‌ನಲ್ಲಿ ನೀರಿನ ಯೋಜನೆ ಕಾಮಗಾರಿ ಸಮರ್ಪಕವಾಗಿ ನಡೆದಿಲ್ಲ.



ನಗರಕ್ಕೆ ನಿರಂತರವಾಗಿ ನೀರು ಕೊಡುವ ಮಹತ್ವಕಾಂಕ್ಷಿ 24X7 ಕುಡಿಯುವ ನೀರು ಯೋಜನೆಯ ಕಾಮಗಾರಿಯ ವಸ್ತುಸ್ಥಿತಿ ಪರಿಶೀಲನೆಗೆ ಸಂಬಂಧಿಸಿದಂತೆ, ನಗರಸಭೆಯು ಇತ್ತೀಚೆಗೆ ರಚಿಸಿದ್ದ ಸಮಿತಿಯು ಸ್ಥಳ ಪರಿಶೀಲನೆ ನಡೆಸಿ ನೀಡಿದ ವರದಿ ಕುರಿತು ನಡೆದ ತುರ್ತುಸಭೆಯಲ್ಲಿ ಬಹುತೇಕ ಸದಸ್ಯರು ವ್ಯಕ್ತಪಡಿಸಿದ ಅಸಮಾಧಾನವಿದು.

ಅಧ್ಯಕ್ಷ ಕೆ. ಶೇಷಾದ್ರಿ ಶಶಿ ಮಾತನಾಡಿ, ಕುಡಿಯುವ ನೀರಿನ ಯೋಜನೆಯಿಂದಾಗಿ ಉದ್ಭವಿಸಿರುವ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಅವುಗಳನ್ನು ಚರ್ಚಿಸಿ ಪರಿಹಾರ ಕ್ರಮಗಳನ್ನು ಕಂಡು ಕೊಳ್ಳಲು ಸದಸ್ಯರು ಹಾಗೂ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿರುವ ಸಮಿತಿಯು ವಸ್ತುಸ್ಥಿತಿಯ ವರದಿ ನೀಡಿದೆ. ಯೋಜನೆ ಜಾರಿ ಹೊಣೆ ಹೊತ್ತಿರುವ ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯುಎಸ್‌ಡಿಬಿ) ಅಧಿಕಾರಿಗಳ ಸಮ್ಮುಖದಲ್ಲಿ ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರಕ್ಕೆ ಸೂಚಿಸುವುದು ಈ ಸಭೆಯ ಉದ್ದೇಶ' ಎಂದು ಸಭೆಗೆ ಪೀಠಿಕೆ ಹಾಕಿದರು.



ಉದಯವಾಹಿನಿ ಚಿತ್ರ

**ಅಳವಡಿಕೆಯಲ್ಲೇ ಸಮಸ್ಯೆ:** ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಪೈಪ್‌ಲೈನ್ ಕಾಮಗಾರಿ ಸರಿಯಾಗಿ ನಡೆದಿಲ್ಲ. ಪೈಪ್‌ಲೈನ್ ಬೇಗನೇ ಹಾನಿಯಾಗುವಷ್ಟೇ ಮೇಲ್ಭಾಗದಲ್ಲೇ ಅಳವಡಿಸಲಾಗಿದೆ. ಮೂರ್ನಾಲ್ಕು ವರ್ಷಗಳ ಹಿಂದೆ ಅಳವಡಿಸಿರುವ ಪೈಪ್‌ಲೈನ್ ಮಾರ್ಗವು, ಬೇರೆ ಉದ್ದೇಶಕ್ಕೆ ವಿವಿಧೆಡೆ ರಸ್ತೆ ಅಗೆದಾಗ ಹಾನಿ ಗೊಂಡಿದೆ. ಇದರಿಂದಾಗಿ ಪ್ರತಿ ರಸ್ತೆಯಲ್ಲೂ ನೀರು ಸೋರಿಕೆಯಾಗಿ ಪೋಲಾಗುತ್ತಿದೆ ಎಂದು ಸಮಿತಿ ಸದಸ್ಯರಲ್ಲೊಬ್ಬರಾದ ಬೈರೇಗೌಡ ಸಮಸ್ಯೆಗಳನ್ನು ಬಿಚ್ಚಿಟ್ಟರು. ಸಮಿತಿಯ ಮತ್ತೊಬ್ಬ ಸದಸ್ಯ ಸಮದ್, ನೀರಿನ ಸಂಪರ್ಕದ ಪೈಪ್‌ಗಳನ್ನು ಫುಟ್‌ಪಾತ್ ಮೇಲೆಯೇ ಅಳವಡಿಸಲಾಗಿದೆ. ಕೆಲವೆಡೆ ಹಳೆ ಪೈಪ್‌ಲೈನ್ ಮಾರ್ಗ, ಹೊಸ ಮಾರ್ಗದಲ್ಲಿ ಸಹ ನೀರು ಪೂರೈಕೆಯಾಗುತ್ತಿದೆ. ಉಳಿದೆಡೆ ಒಂದು ಮಾರ್ಗ ಮಾತ್ರ ಇದೆ. ನೀರಿನ ಪೈಪ್‌ಗೆ ಎಂಡ್ ಕ್ಯಾಪ್ ಅಳವಡಿಸಿಲ್ಲದಿರುವುದು ಸಹ ನೀರು ಪೋಲಾಗಲು ಕಾರಣ. ಹಲವೆಡೆ ಶಾಲೆಗಳಿಗೂ ನೀರು ಪೂರೈಕೆಯಾಗಿಲ್ಲ. ಕುಂಬಾರಗಲ್ಲಿಯಲ್ಲಿ 17ಕ್ಕೂ ಹೆಚ್ಚು ಮನೆಗಳಿಗೆ ನೀರಿನ ಸಂಪರ್ಕವೇ ಇಲ್ಲ ಎಂದು ಬೈರೇಗೌಡರ ಮಾತಿಗೆ ದನಿಗೂಡಿಸಿದರು. ಉಪಾಧ್ಯಕ್ಷೆ ಆಯೇಷಾ ಬಾನು ಮತ್ತು ವಾರ್ಡ್ 13 ಸದಸ್ಯ ಸೈಯದ್ ಅಕ್ಲೀಂ ಇಬ್ರಾರ್, ನನ್ನ ವಾರ್ಡ್ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಸ್ಥಳೀಯರು ಹಳೆ ಪೈಪ್‌ಲೈನ್ ಚನ್ನಾಗಿತ್ತು. ಹೊಸದು ಸರಿ ಇಲ್ಲ ಎನ್ನುತ್ತಿದ್ದಾರೆ.

ಗುತ್ತಿಗೆದಾರರು ಒಂದಿಬ್ಬರು ಕಾರ್ಮಿಕರನ್ನು ಇಟ್ಟು ಕೊಂಡು ಕೆಲಸ ಮಾಡುತ್ತಾರೆ. ಇದರಿಂದಾಗಿ ಸಮಸ್ಯೆ ತಿಂಗಳುಗಳಾದರೂ ಬಗೆಹರಿದಿಲ್ಲ. ಅಧಿಕಾರಿಗಳು, ಗುತ್ತಿಗೆದಾರರ ನಿರ್ಲಕ್ಷ್ಯದಿಂದಾಗಿ ಜನ ರಿಂದ ನಾವು ಮಾತು ಕೇಳಬೇಕಾಗಿದೆ ಎಂದು ಅಸಮಾಧಾನ ವ್ಯಕ್ತ ಪಡಿಸಿದರು.

ಯೋಜನೆಯ ಕಾಮಗಾರಿ, ದುರಸ್ತಿ ಕುರಿತು ಮಂಡಳಿ ಅಧಿಕಾರಿಗಳು ವಿಡಿಯೋ ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು. ಮಂಡಳಿ ಎಇಇ ಕುಸುಮ, ಎಂಜಿನಿಯರ್ ಶಿವರಾಜ್, ಮೇಲ್ವಿಚಾರಕ ಸುರೇಶ್, ನಗರಸಭೆ ಎಇಇ ನರಸಿಂಹರಾಜು, ನಟರಾಜೇಗೌಡ ಸೇರಿದಂತೆ ವಿವಿಧ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

**ಪೈಪ್‌ಲೈನ್ ಕಾಮಗಾರಿ ಸರಿಯಾಗಿ ನಡೆದಿಲ್ಲ**

### ಶೇ 20ರಷ್ಟು ಮನೆಗಳಿಗಿಲ್ಲ ನೀರು

**ನಾನಿರುವ ಬೀದಿಯಲ್ಲೇ ನೀರು ಬರುತ್ತಿಲ್ಲ. ಶೇ 20ರಷ್ಟು ಮನೆಗಳಿಗೆ ಇದುವರೆಗೆ ನೀರಿನ ಸಂಪರ್ಕವನ್ನೇ ಕೊಟ್ಟಿಲ್ಲ. ಹಳೆ ವ್ಯವಸ್ಥೆ ಇದ್ದಾಗ ಕನಿಷ್ಠ ಐದಾರು ದಿನಗಳಿಗೆ ನೀರು ಬರುತ್ತಿತ್ತು. ಈಗ ವಾರವಾದರೂ ಬರುತ್ತಿಲ್ಲ. ಹೊಸ ಯೋಜನೆಯಿಂದ ನಿರಂತರ ನೀರು ಕೊಡುತ್ತೇವೆ ಎಂದು ಹೇಳಿಕೊಂಡು ತಿರುಗಿದ್ದ ನಾವೀಗ ಜನರಿಗೆ ಮುಖ ತೋರಿಸದ ಸ್ಥಿತಿ ಬಂದಿದೆ. ನೀರಿನ ಸಮಸ್ಯೆ ಮತ್ತಷ್ಟು ಉಲ್ಬಣಿಸದಂತೆ ನೋಡಿಕೊಳ್ಳುವ ಜೊತೆಗೆ, ನಿತ್ಯ ನೀರು ಕೊಡುವತ್ತ ಅಧಿಕಾರಿಗಳು ಚಿತ್ತ ಹರಿಸಬೇಕು ಎಂದು ವಾರ್ಡ್ 14ರ ಸದಸ್ಯ ನಿಜಾಮುದ್ದೀನ್ ಷರೀಫ್ ಒತ್ತಾಯಿಸಿದರು. ನಿತ್ಯ ನೀರು ಕೊಟ್ಟರೂ ಸಣ್ಣದಾಗಿ ಬರುತ್ತಿದೆ. ಅದು ಸಾಲುತ್ತಿಲ್ಲ. ಯಾವ ವೋಲ್ಟ್ ತಿರುಗಿಸಿದರೆ ಎಲ್ಲಿಗೆ ನೀರು ಹೋಗುತ್ತದೆ ಎಂದು ವಾಟರ್ ಮ್ಯಾನ್‌ಗಳಿಗೆ ಗೊತ್ತಿಲ್ಲದ ಪರಿಸ್ಥಿತಿ ಇದೆ. ನೀರು ಪೋಲಾಗಲು ಇದು ಸಹ ಕಾರಣ. ಅಧಿಕಾರಿಗಳು ಈ ಕುರಿತು ಗಮನ ಹರಿಸಬೇಕು. ನೀರು ಸಮರ್ಪಕವಾಗಿ ಸಿಗುವಂತೆ ಮಾಡಬೇಕು' ಎಂದು ವಾರ್ಡ್ 30ರ ಸದಸ್ಯೆ ಬಿ.ಸಿ. ಪಾರ್ವತಮ್ಮ ಸಲಹೆ ನೀಡಿದರು.**

**ಯೋಜನೆಯಡಿ 216 ಕಿ.ಮೀ. ಪೈಪ್‌ಲೈನ್ ಅಳವಡಿಸಲಾಗಿದೆ. ಟಿ.ಕೆ. ಹಳ್ಳಿಯಿಂದ ನಗರ ಪ್ರವೇಶದವರೆಗೆ 54 ಕಿ.ಮೀ. ಪೈಕಿ ಮೂರ್ನಾಲ್ಕು ಕಡೆ ಮಾತ್ರ ಸೋರಿಕೆ ಇತ್ತು. ವಾರ್ಡ್ ಮಟ್ಟದಲ್ಲಿ ಪೂರೈಕೆ ಶುರು ಮಾಡಿದಾಗಲೇ ಹಲವೆಡೆ ಪೈಪ್‌ಲೈನ್ ಹಾನಿಯಾಗಿ ಸೋರುತ್ತಿರುವುದು ನಮ್ಮ ಗಮನಕ್ಕೆ ಬಂತು. ಸೋರಿಕೆ ಹೆಚ್ಚಾಗಿರುವುದರಿಂದ ನಾವು ಎಲ್ಲಾ ವಾಲ್ಟ್ ಓಪನ್ ಮಾಡಿಲ್ಲ. ಹಾಗೆ ಮಾಡುವುದರಿಂದ ಮತ್ತಷ್ಟು ಹಾನಿಯಾಗುವ ಸಾಧ್ಯತೆಗಳಿರುತ್ತವೆ. ಬಹುತೇಕ ಸೋರಿಕೆ ನಿಂತರೆ ವಾಲ್ಸ್ ಓಪನ್ ಮಾಡುತ್ತೇವೆ**

**–ಪವಿತ್ರ, ಜಲಮಂಡಳಿ ಇಇ**


ಅಂತರಾಳದಿಂದ..
EDITORIAL

# ಜನಗಣತಿಗೆ ವಿಳಂಬ: ಕೇಂದ್ರದ ನಡೆ ಆತಂಕಕಾರಿ

ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರದ ಎನ್‌ಡಿಎ ಸರಕಾರಕ್ಕೆ ರಾಷ್ಟ್ರಮಟ್ಟದ ಜನಗಣತಿಯನ್ನು ನಡೆಸುವ ಆಸಕ್ತಿ ಇದೆಯೇ ಎಂಬ ಸಂದೇಹ ಸಹಜವಾಗಿ ಬರುತ್ತದೆ. ಹತ್ತು ವರ್ಷಕ್ಕೊಮ್ಮೆ ನಡೆಯಬೇಕಾದ ಜನಗಣತಿಗೆ ಈಗಾಗಲೇ ಸಾಕಷ್ಟು ವಿಳಂಬವಾಗಿದೆ. 2021ರಲ್ಲಿ ನಡೆಸ ಬೇಕಾಗಿದ್ದ ಜನಗಣತಿಯನ್ನು 2025ರಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಹೇಳಲಾಗುತ್ತಿದೆ. ಪ್ರತೀ ಹತ್ತು ವರ್ಷಕ್ಕೊಮ್ಮೆ ನಡೆಸಲಾಗುವ ಜನಗಣತಿಯ ಮೂಲಕ ಲಭ್ಯವಾಗುವ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಫಲಾನುಭವಿಗಳನ್ನು ಲೆಕ್ಕ ಹಾಕಲಾಗುತ್ತದೆ. ಆದರೆ ಜನಗಣತಿಯನ್ನೇ ಮಾಡದಿರುವಾಗ ಅಂಕಿ-ಸಂಖ್ಯೆಗಳನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ? ಇದರ ಪರಿಣಾಮವಾಗಿ ಈ ಕಾಯ್ದೆಯ ಅನ್ವಯ ಸರಕಾರಿ ಸವಲತ್ತುಗಳು ಹಾಗೂ ಪ್ರಯೋಜನಗಳನ್ನು ಪಡೆಯುವ ದೊಡ್ಡ ಸಂಖ್ಯೆಯ ಜನರಿಗೆ ಇವುಗಳನ್ನು ನಿರಾಕರಿಸಿದಂತಾಗುತ್ತದೆ. ದೇಶದ ಜನಸಂಖ್ಯೆಯನ್ನು ಲೆಕ್ಕ ಹಾಕುವ ಅತಿ ದೊಡ್ಡ ಮತ್ತು ಸಮಗ್ರವಾದ ಕಾರ್ಯಕ್ರಮ ಜನಗಣತಿಯಾಗಿದೆ. ಭಾರತದ ಜನಸಂಖ್ಯೆ ಎಷ್ಟು ಎಂಬುದನ್ನು ತಿಳಿಸುವುದು ಮಾತ್ರವಲ್ಲ, ಇದು ದೇಶದ ಜನ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಹಿಂದಿನ ಜನಗಣತಿಯ ನಂತರದಲ್ಲಿ ದೇಶದ ಹಲವಾರು ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ತಿಳಿದುಕೊಳ್ಳಲು ಈ ಜನಗಣತಿಯಿಂದ ಸಾಧ್ಯವಾಗುತ್ತದೆ ಹಿಂದಿನ ಸಲ ಜನಗಣತಿ ನಡೆದಿರುವುದು 2011ರಲ್ಲಿ ಆನಂತರದ ಕಾಲಾವಧಿಯಲ್ಲಿ ದೇಶವು ಸಾಕಷ್ಟು ಬದಲಾವಣೆಗಳನ್ನು ಕಂಡಿದೆ. 2011ರಲ್ಲಿ ಭಾರತದ ಜನಸಂಖ್ಯೆ 121 ಕೋಟಿ ಇತ್ತು ಈಗ ಅದು 145 ಕೋಟಿ ಆಗಿರಬಹುದು ಎಂದು ಅಂದಾಜು ಮಾಡಲಾಗಿದೆ. 2021ರಲ್ಲಿ ನಡೆಯಬೇಕಿದ್ದ ಜನಗಣತಿಯನ್ನು ಕೋವಿಡ್ ಕಾರಣದಿಂದ ಮುಂದಕ್ಕೆ ಹಾಕಲಾಗಿತ್ತು. ಈ ಸಂದರ್ಭದಲ್ಲಿ ಜಗತ್ತಿನ ಇತರ ದೇಶಗಳಲ್ಲಿ ನಡೆಯಬೇಕಿದ್ದ ಜನಗಣತಿ ಯನ್ನೂ ಮುಂದೂಡಲಾಗಿತ್ತು. ಆದರೆ ನಂತರದ ಕಾಲಾವಧಿಯಲ್ಲಿ ಜಗತ್ತಿನ ಕೆಲವು ದೇಶಗಳು ಜನಗಣತಿ ಕಾರ್ಯವನ್ನು ಪೂರೈಸಿವೆ. ಆದರೆ ಜಗತ್ತಿನಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಭಾರತ ಇನ್ನಷ್ಟೇ ಜನಗಣತಿ ನಡೆಸಬೇಕಾಗಿದೆ.

**ಆದರೆ ಈ ವರ್ಷವಾದರೂ ನಡೆಯುತ್ತದೆ ಎಂಬ ಖಾತರಿಯಿಲ್ಲ, ಕಾರಣವೇನೆಂದರೆ 2025-26ನೇ ವರ್ಷದ ಮುಂಗಡ ಪತ್ರದಲ್ಲಿ ಜನಗಣತಿಗಾಗಿ ಕೇವಲ ರೂ. 574.80 ಕೋಟಿ ಮಾತ್ರ ನಿಗದಿಪಡಿಸಲಾಗಿದೆ. ಈ ಅಲ್ಪಮೊತ್ತದಲ್ಲಿ ಜನಗಣತಿ ನಡೆಸಲು ಸಾಧ್ಯವಾಗುವುದೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಈ ಬಗ್ಗೆ ರಾಜ್ಯಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯವರು ಜನಗಣತಿ ನಡೆಯದೇ ಇದ್ದರೆ, 14 ಕೋಟಿ ಜನರಿಗೆ ಆಹಾರದ ಭದ್ರತೆಯನ್ನು ನಿರಾಕರಿಸಿದಂತಾಗುವುದು ಎಂದು ಕಳವಳವನ್ನು ವ್ಯಕ್ತಪಡಿಸಿದ್ದಾರೆ.**

ಯಾವುದೇ ದೇಶದಲ್ಲಿ ಜನಸಂಖ್ಯೆಯ ನಿಖರ ಅಂಕಿಅಂಶಗಳು ಇಲ್ಲದಿದ್ದಾಗ ದೇಶದ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳು ಹಾಗೂ ನೀತಿ ನಿರೂಪಣೆಗಳ ಮೇಲೆ ಅತ್ಯಂತ ಗಂಭೀರವಾದ ಪರಿಣಾಮವನ್ನು ಉಂಟು ಮಾಡುತ್ತದೆ. ಸರಕಾರ ಸಂಪನ್ಮೂಲಗಳನ್ನು ವಿನಿಯೋಗಿಸುವಾಗ ದೊಡ್ಡ ಸಮಸ್ಯೆಗೆ ಕಾರಣವಾಗುತ್ತದೆ. ಸರಕಾರದ ಸಾರ್ವಜನಿಕ ನೀತಿ ಕಾರ್ಯಕ್ರಮಗಳು ಪ್ರಯೋಜನಕಾರಿ ಹಾಗೂ ಪರಿಣಾಮಕಾರಿಯಾಗಬೇಕೆಂದಿದ್ದರೆ ದತ್ತಾಂಶಗಳು ನಿಖರವಾಗಿ ಲಭ್ಯವಾಗಬೇಕು. ಆಗ ಮಾತ್ರ ಸರಕಾರ ನೀತಿ ಕಾರ್ಯಕ್ರಮಗಳನ್ನು ಸರಿಯಾಗಿ ರೂಪಿಸಲು, ಫಲಾನುಭವಿಗಳಿಗೆ ಅವು ಲಭ್ಯವಾಗುವಂತೆ ಮಾಡಲು ಸಾಧ್ಯವಾಗುತ್ತದೆ. ಸರಕಾರದ ಕಾರ್ಯಕ್ರಮ ಹಾಗೂ ನೀತಿ, ನಿರೂಪಣೆಯಲ್ಲಿ ನೆರವಾಗುವ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಪರಿಸ್ಥಿತಿ ಮತ್ತು ಸಮೀಕ್ಷೆ, ಕಾರ್ಮಿಕರ ಸಮಸ್ಯೆ ಜನಸಂಖ್ಯೆಯ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆ ಇವೆಲ್ಲವೂ ಜನಸಂಖ್ಯೆಯ ಖಚಿತ ದತ್ತಾಂಶಗಳಿಂದ ಗೊತ್ತಾಗುತ್ತದೆ. ಭಾರತದ ಜನಸಂಖ್ಯೆಯ ಪ್ರಮಾಣ ಇಳಿಮುಖವಾಗುತ್ತಿರುವ ಬಗ್ಗೆ ಜಾಗತಿಕವಾಗಿ ಎಲಾನ್ ಮಸ್ಕ್ ಸೇರಿದಂತೆ ಅನೇಕರು ಆತಂಕಕ್ಕೊಳಗಾಗಿದ್ದಾರೆ.ಇದರಿಂದ ಅವರ ಮಾರುಕಟ್ಟೆ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಖರೀದಿಸುವವರ ಸಂಖ್ಯೆ ಕಡಿಮೆಯಾಗುವುದರಿಂದ ಮಾರುಕಟ್ಟೆ ತನ್ನಿಂದ ತಾನೆ ಕುಸಿಯುತ್ತದೆ. ಆದ್ದರಿಂದ ಭಾರತ ಜನಸಂಖ್ಯೆಯನ್ನು ನಿಯಂತ್ರಿಸಿ ಪ್ರಗತಿಯನ್ನು ಸಾಧಿಸುವುದು ಅನಿವಾರ್ಯವಾಗಿದೆ. ಅನಿಯಂತ್ರಿತ ವಲಸೆ ಸೇರಿದಂತೆ ಹಲವಾರು ಸಮಸ್ಯೆಗಳು ಎದುರಾಗಿರುವುದರಿಂದ ಮಾರುಕಟ್ಟೆ ಶಕ್ತಿಗಳು ಜನಸಂಖ್ಯೆ ಹೆಚ್ಚಾಗಬೇಕೆಂದು ಬಯಸುತ್ತವೆ. ಈ ಹಿನ್ನೆಲೆಯಲ್ಲಿ ಜನಗಣತಿಗಾಗಿ ಕೇಂದ್ರದ ಮೋದಿ ಸರಕಾರ ಮುಂಗಡಪತ್ರದಲ್ಲಿ ನಿಗದಿಪಡಿಸಿದ ಮೊತ್ತ ಯಾವುದಕ್ಕೂ ಸಾಲದು, 1951ರಿಂದ ಹತ್ತು ವರ್ಷಕ್ಕೊಮ್ಮೆ ನಿಯಮಿತವಾಗಿ ನಡೆಯುತ್ತಾ ಬಂದಿದ್ದ ಜನಗಣತಿ ಈಗ ಮೂಲೆ ಗುಂಪಾಗಿದೆ. ಹಾಗಾಗಿ ಕೇಂದ್ರ ಸರಕಾರ ಈ ಕುರಿತು ತನ್ನ ನೀತಿ, ಧೋರಣೆಯನ್ನು ಸ್ಪಷ್ಟಪಡಿಸುವುದು ಅಗತ್ಯವಾಗಿದೆ. ಕಳೆದ ಒಂದೂವರೆ ದಶಕದಿಂದ ಅಂದರೆ 2011ರ ನಂತರದ ಭಾರತದ ಜನಸಂಖ್ಯಾ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ನಗರೀಕರಣ ಹೆಚ್ಚಾಗುತ್ತಿದ್ದಂತೆ ಜನರ ದೈನಂದಿನ ಜೀವನ ಶೈಲಿಯಲ್ಲಿ ಬದಲಾವಣೆಯಾಗತೊಡಗಿತು. ಇದರ ಪರಿಣಾಮವಾಗಿ ದೇಶದ ಆರ್ಥಿಕ, ಸಾಮಾಜಿಕ ಸ್ವರೂಪವೂ ಮುಂಚಿನಂತಿಲ್ಲ. ಸಾಕಷ್ಟು ಬದಲಾವಣೆಗಳು ಆಗಿವೆ. ಈ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಜನ ಕಲ್ಯಾಣ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ರೂಪಿಸಬೇಕಾಗಿದೆ.





# ರಾಮಾಯಣ

## ಶ್ರೀರಾಮನ ಪಟ್ಟಾಭಿಷೇಕಕ್ಕೆ ಪುರೋಹಿತರ ಸಿದ್ಧತೆ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ವಸಿಷ್ಠನು ಆ ಪಟ್ಟಣ ವನ್ನೂ ಅದರ ಸೌಭಾಗ್ಯವನ್ನೂ ನೋಡುತ್ತ ದಶರಥರಾಯನ ಅರಮನೆಯ ಬಾಗಿಲಿಗೆ ಬಂದು ಪ್ರಧಾನಿಯಾದ ಸುಮಂತ್ರನನ್ನು ಕಂಡು ಹೀಗೆ ನುಡಿದನು : '' ಸುಮಂತ್ರ, ನಾನು ಬಂದ ವಿಷಯ ವನ್ನು ಅಂತಃಪುರದಲ್ಲಿರುವ ದಶರಥರಾಯನಿಗೆ ತಿಳಿಸು. ಶ್ರೀರಾಮನ ಪಟ್ಟಾಭಿಷೇಕಾರ್ಥವಾಗಿ ಸುವರ್ಣಕಲಶಗಳಲ್ಲಿ ಗಂಗಾ ಮೊದಲಾದ ಪುಣ್ಯನದಿಗಳ ತೀರ್ಥಗಳು, ನಾಲ್ಕು ಸಮುದ್ರಗಳ ತೀರ್ಥಗಳು, ಅತ್ತಿಯಮರದಿಂದ ಮಾಡಿದ ಹಸೆಯಮಣೆ, ನವಧಾನ್ಯಗಳು, ನವರತ್ನಗಳು, ತುಪ್ಪ, ಜೇನುತುಪ್ಪ, ಹಾಲು, ಮೊಸರು ಮೊದಲಾದವು, ಕೋಮಲವಾದ ದರ್ಭೆಗಳು, ಮಾಂಗಲ್ಯಾರ್ಥವಾದ ಅರಳುಗಳಿಂದ ಸೇಸೆಯಿಡುವದಕ್ಕೆ ಎಂಟು ಮಂದಿ ಹೆಣ್ಣು ಮಕ್ಕಳು, ಮದ್ದಾನೆ. ನಾಲ್ಕು ಉತ್ತಮಾಶ್ವಗಳಿಂದ ಯುಕ್ತವಾದ ರಥ ಲಕ್ಷಣವುಳ್ಳ ಅಶ್ವ, ಛತ್ರ, ಬಿಳಿಯ ಚಾಮರ, ಸುವರ್ಣಮಯವಾದ ಗಿಂಡಿ, ಚಿನ್ನದ ಸರಪಣಿಗಳಿಂದ ಕಟ್ಟಲ್ಪಟ್ಟ ಉತ್ತಮವಾದ ಬಿಳಿಯ ಎತ್ತು, ನಾಲ್ಕು ಕೋರೆದಾಡೆ ಗಳುಳ್ಳ ಸಿಂಹ, ರತ್ನಖಚಿತವಾದ ಸಿಂಹಾಸನ, ವ್ಯಾಘ್ರಚರ್ಮ, ಹೋಮಯೋಗ್ಯವಾದ ಸಮಿತ್ತುಗಳು, ಗೋವುಗಳು, ಹಂಸ ಗಿಣಿ ಕೋಗಿಲೆ ನವಿಲು ಪಾರಾವತ ಗರುಡ ಮೊದಲಾದ ಪುಣ್ಯ ಪಕ್ಷಿಗಳು, ಇನ್ನೂ ಬೇಕಾದ ಇತರ ಸಮಸ್ತ ಸಾಮಗ್ರಿಗಳೂ ಸಿದ್ಧವಾಗಿವೆ. ಸರ್ವಾಭರಣ ಭೂಷಿತರಾದ ವೇಶ್ಯಾಸ್ತ್ರಿಯರೂ ವೇದಸೂಕ್ತಗಳನ್ನು ಬಲ್ಲ ಬ್ರಾಹ್ಮಣರೂ ದೊರೆಗಳೂ ಕೂಡಿದ್ದಾರೆ. ಶುಭಲಗ್ನದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಬೇಕು. ಈ ವೃತ್ತಾಂತ ವನ್ನು ನೀನು ದಶರಥರಾಯನಿಗೆ ತಿಳಿಸು.''

ಮಹಾತ್ಮನಾದ ಸುಮಂತ್ರನು ಅರಮನೆಯ ಒಳಗೆ ಹೋಗುತ್ತಿರಲು ದ್ವಾರಪಾಲಕರು ತಡೆಯಲಿಲ್ಲ. ಏಕಂದರೆ, ಸುಮಂತ್ರನು ಅನೇಕ ವರುಷಗಳಿಂದ ಪ್ರಧಾನಿಯಾಗಿದ್ದು ವೃದ್ಧನಾದವನು: ದಶರಥರಾಯನಿಗೆ ಅತ್ಯಂತ ಆಪ್ತನು. ಆತನು ಮುಹೂರ್ತವು ತಪ್ಪುವುದೆಂಬ ಭಯದಿಂದ ಶೀಘ್ರವಾಗಿ ಅಂತಃಪುರಕ್ಕೆ ಹೋದನು. ದಶರಥರಾಯನು ಕೈಕೇಯಾದೇವಿಯ ದೆಸೆಯಿಂದ ದೈನ್ಯಾವಸ್ಥೆಯಲ್ಲಿದ್ದುದು ಸುಮಂತ್ರನಿಗೆ ತಿಳಿಯಲಿಲ್ಲ. ಆತನು ಎಂದಿನಂತೆ ಕೈ ಮುಗಿದುಕೊಂಡು ದಶರಥಮಹಾರಾಜ, ಪ್ರಾತಃಕಾಲದಲ್ಲಿ ಸೂರ್ಯನು ಉದಯಿಸಿದಾಗ ಸಮುದ್ರವು ಜನರಿಗೆ ಹರ್ಷವನ್ನುಂಟುಮಾಡುವಂತೆ ನಮಗೆ ನೀನು ಹರ್ಷವನ್ನುಂಟುಮಾಡು, ಪೂರ್ವದಲ್ಲಿ ಸಾರಥಿಯಾದ ಮಾತಲಿಯು ಕಾಲೋಚಿತವಾಗಿ ಹಿತವನ್ನು ತಿಳಿಸಲು ಆತನ ಮಾತನ್ನು ಕೇಳಿ ದೇವೇಂದ್ರನು ಸಮಸ್ತದಾನವರನ್ನೂ ಜಯಿಸಿದಂತೆ ನೀನು ನನ್ನ ಬಿನ್ನಹವನ್ನು ಕೇಳಿ ಶ್ರೀರಾಮನ ಪಟ್ಟಾಭಿಷೇಕವನ್ನು ತಾಮಸವಿಲ್ಲದೆ ಮಾಡು. ಶಿಕ್ಷಾ ಕಲ್ಪ ವ್ಯಾಕರಣ ನಿರುಕ್ತ, ಜ್ಯೋತಿಷ ಛಂದಸ್ಸುಗಳೆಂಬ ಷಡಂಗ ಸಹಿತವಾದ ವೇದಗಳು ಪರಮಪುರುಷನಾದ ಬ್ರಹ್ಮದೇವನನ್ನು ಎಚ್ಚರಗೊಳಿಸುವಂತೆ ನಿನ್ನನ್ನು ನಾನು ಎಚ್ಚರಗೊಳಿಸುತ್ತಿದ್ದೇನೆ. ಚಂದ್ರಸೂರ್ಯರು ಸಮುದ್ರಕಾನನಸಹಿತವಾದ ಸಮಸ್ತ ಭೂಮಂಡಲವನ್ನೂ ಬೆಳಗಿಸುವಂತೆ ನಾನು ನಿನಗೆ ಶ್ರೇಯಸ್ಸನ್ನು ಬಯಸುತ್ತೇನೆ.

ಮುಂದುವರಿಯುವುದು...

# ಓಂ ನಮಃ ಶಿವಾಯ ಮಂತ್ರ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಶಿವ ಪಂಚಾಕ್ಷರಿ ಮಂತ್ರವನ್ನು ಭಕ್ತಿಯಿಂದ ಜಪಿಸಿದರೆ ಮನಸ್ಸು, ದೇಹ ಮತ್ತು ಆತ್ಮವು ಶುದ್ಧವಾಗುವುದು. ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನೂ ನೀಡುವುದು. ಮಹಾ ಮೃತ್ಯುಂಜಯ ಮಂತ್ರ' ಮತ್ತು 'ಓಂ ನಮಃ ಶಿವಾಯ' ಮಂತ್ರ ಇವೆರಡೂ ಸನಾತನ ಧರ್ಮದಲ್ಲಿ ಮಹಾ ರುದ್ರನಿಗೆ ಅರ್ಪಿತವಾದ ಪವಿತ್ರ ಮಂತ್ರಗಳಾಗಿವೆ. ಓಂ ನಮಃ ಶಿವಾಯ ಮಂತ್ರವು ಸೆಕೆಂಡಿಗೆ ಹಲವಾರು ಧ್ವನಿ ತರಂಗಗಳನ್ನು ಉತ್ಪಾದಿಸುತ್ತದೆ. ಈ ಅಲೆಗಳು ಮಾನವನ ಬುದ್ಧಿಮತ್ತೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುತ್ತವೆ. ಧ್ಯಾನದ ಸಮಯದಲ್ಲಿ ಓಂ ನಮಃ ಶಿವಾಯ ಮಂತ್ರವನ್ನು ನಿಧಾನವಾಗಿ ಜಪಿಸುವುದರಿಂದ ಸಾಮರಸ್ಯ, ಏಕಾಗ್ರತೆ ಮತ್ತು ಶಕ್ತಿಯನ್ನು ನೀಡುತ್ತದೆ. ಋಗ್ವೇದವು ಮಹಾರುದ್ರನನ್ನೇ ಸರ್ವಸ್ವ ಎಂದು ವ್ಯಾಖ್ಯಾನಿಸಿದೆ. ಶಿವನ ಕುರಿತು ನಿಜ ಭಕ್ತಿಯಿಂದ ಮಂತ್ರವನ್ನು ಜಪಿಸಿದರೆ, ಅವರ ಮನಸ್ಸು, ದೇಹ ಮತ್ತು ಆತ್ಮವು ಹಗುರವಾಗುತ್ತದೆ. ಅವರು ತಮ್ಮ ಬದುಕಿನ ಆಯಾಮಗಳನ್ನು ಸಹ ಬದಲಾಯಿಸಬಹುದು. ಈ ಮಂತ್ರವು ತ್ರಿಮೂರ್ತಿಗಳ ಮುಕ್ತಾಯದ ಭಾಗವೆಂದು ಪರಿಗಣಿಸಲಾದ ಶಿವನನ್ನು ಕೇಂದ್ರೀಕರಿಸುತ್ತದೆ, ಇದರಲ್ಲಿ ಬ್ರಹ್ಮ ಮತ್ತು ವಿಷ್ಣು ಸೇರಿದ್ದಾರೆ. ಮಂತ್ರದ ಪುನರಾವರ್ತನೆಯೆಂದರೆ, ಮಂತ್ರದ ಕೊನೆಯ ಉಚ್ಚಾರಾಂಶವು ಶಿವ - ಪ್ರಜ್ಞೆಯ ದ್ವಾರವಾಗಿದ್ದು, ಅಂತ್ಯದಿಂದ ಹೊಸ ಆರಂಭಕ್ಕೆ ಚಲಿಸುತ್ತದೆ.

ಓಂ ನಮಃ ಶಿವಾಯ ಎನ್ನುವ ಮಂತ್ರದಲ್ಲಿ ಓಂಕಾರವು ಪಂಚಾಕ್ಷರಿ ಮಂತ್ರದ ಭಾಗವಾಗಿದೆ. ನಮಃ ಶಿವಾಯ ಎಂಬುದು ಭೌತಿಕ ಪ್ರಪಂಚದ ಐದು ಅಗತ್ಯ ಅಂಶಗಳನ್ನು ಒಳಗೊಂಡಿದೆ.

**ನ - ಪೃಥ್ವಿ ತತ್ವ**
**ಮಃ -ಜಲ ತತ್ವ**
**ಶಿ -ಅಗ್ನಿ ತತ್ವ**
**ವಾ - ವಾಯು ತತ್ವ**
**ಯ - ಆಕಾಶ ತತ್ವ**

ಓಂ ನಮಃ ಶಿವಾಯ ಎನ್ನುವ ಮಂತ್ರದ ಪಠಣ ದೇಹಕ್ಕೆ ಅತೀಂದ್ರಿಯ ಬದಲಾವಣೆಗಳನ್ನು ತರುತ್ತದೆ. ಪ್ರಪಂಚದಾದ್ಯಂತದ ಋಷಿಮುನಿಗಳು ಶುಭ ಮಂತ್ರವನ್ನು ಪಠಿಸುವುದರಲ್ಲಿ ನಿರತರಾಗಿದ್ದಾರೆ, ಅದರ ಮೂಲಕ ಅವರು ತಮ್ಮ ಸಾಮರ್ಥ್ಯವನ್ನು ಅನಂತ ಮಟ್ಟಕ್ಕೆ ಹೆಚ್ಚಿಸಿಕೊಂಡಿದ್ದಾರೆ.

ಇದರರ್ಥ ಆ ಯೋಗಿಗಳು ಪ್ರಕೃತಿ ಅಥವಾ ಭವ್ಯವಾದ ಶಕ್ತಿಯ ಹರಿವಿನ ಅಸ್ತಿತ್ವದ ಪ್ರಾಥಮಿಕ ಸ್ವರೂಪದೊಂದಿಗೆ ತಮ್ಮನ್ನು ಸಂಪರ್ಕಿಸಿಕೊಂಡಿದ್ದಾರೆ.

ಶಕ್ತಿ ದೇವಿಯು ಆ ಶಕ್ತಿಯ ಹರಿವಿನಲ್ಲಿ ವಾಸಿಸುತ್ತಾಳೆ ಮತ್ತು ನಿಮ್ಮನ್ನು ಶಿವನ ಬಳಿಗೆ ಕರೆದೊಯ್ಯುತ್ತಾಳೆ. ಇದು ನೈಜತೆಗಳ ಆಧಾರದ ಮೇಲೆ ಯೋಗಿಗಳ ಗಮನಾರ್ಹ ಪ್ರಾಚೀನ ವಿಜ್ಞಾನವಾಗಿದೆ. ಸರಿಯಾಗಿ ಜಪಿಸಿದರೆ, ಶಿವನೊಂದಿಗೆ ಸಂಪರ್ಕ ಹೊಂದಲು ಮಂತ್ರವು ಸಹಾಯ ಮಾಡುತ್ತದೆ. ಶಿವನೊಂದಿಗೆ ಸಂಪರ್ಕ ಸಾಧಿಸುವುದು ಎಂದರೆ ಸ್ವಯಂ-ಗುಣಪಡಿಸುವ ಕ್ರಮಕ್ಕೆ ಹೋಗುವುದು. ಇದು ಶಾಶ್ವತ ಆನಂದದ ಅಂತಿಮ ಸ್ಥಿತಿ. ಶಿವನು ಯಾವುದೇ ಪ್ರಾರಂಭ ಮತ್ತು ಅಂತ್ಯವನ್ನು ಹೊಂದಿರದವನು. ಎಲ್ಲವೂ ಅವನಿಂದ ಹೊರಹೊಮ್ಮುತ್ತದೆ ಮತ್ತು ಕೊನೆಯಲ್ಲಿ, ಅವನಲ್ಲಿ ಕರಗುತ್ತದೆ. ಆದ್ದರಿಂದ, ಶಿವ ಅನನ್ಯ; ಶಿವನಂತೆ ಯಾರೂ ಇಲ್ಲ, ಅಮರ, ಅಜೇಯ, ಶ್ರೇಷ್ಠ ಅಘೋರಿ, ಅನಂತ, ಸರ್ವಜ್ಞ, ಶ್ರೇಷ್ಠ ಪರಿವರ್ತಕ, ಆದಿ ಪುರುಷ.


**ಓಂ ನಮಃ ಶಿವಾಯ ಮಂತ್ರ ಜಪಿಸುವುದರಿಂದ ಆಗುವ ಲಾಭಗಳು** ಮಂತ್ರವು ಮೋಕ್ಷ ಪಡೆಯುವ ನಿಮ್ಮ ಆಲೋಚನೆಗಳನ್ನು ಸ್ಥಿರಗೊಳಿಸುತ್ತದೆ:

ಓಂ ನಮಃ ಶಿವಾಯ ಮಂತ್ರ ಪಠಣವು ಕೇವಲ ಮೋಕ್ಷ ನೀಡುವ ಮಂತ್ರವಲ್ಲ; ಇದು ನಮ್ಮ ಆಂತರಿಕ ಆಲೋಚನೆಗಳ ಪ್ರಕ್ರಿಯೆಯನ್ನು ಸಹ ಪ್ರಬುದ್ಧಗೊಳಿಸುತ್ತದೆ ಮತ್ತು ನರಕೋಶಗಳ ರಕ್ತ ಪರಿಚಲನೆ ಸುಧಾರಿಸುತ್ತದೆ. ವೈದ್ಯಕೀಯ ಪದದಲ್ಲಿ, ಈ ಪರಿಕಲ್ಪನೆಯನ್ನು ನ್ಯೂರೋಪ್ಲ್ಯಾಸ್ಟಿಕ್ ಎಂದು ಕರೆಯಲಾಗುತ್ತದೆ. **ಮಂತ್ರದ ಶಕ್ತಿ:** ಯಾರಾದರೂ ಓಂ ನಮಃ ಶಿವಾಯ ಎನ್ನುವ ಮಂತ್ರವನ್ನು ಜಪಿಸಿದಾಗ, ಆ ಕ್ಷಣದಲ್ಲಿ ಶಿವನು ನಿಮ್ಮ ಹೃದಯದೊಳಗೆ ಬೆಳಕು ಅನುಭವಿಸುವಂತೆ ಮಾಡುತ್ತಾನೆ.

ಮನಸ್ಸಿನ ಉಪಪ್ರಜ್ಞೆಯು ಜಾಗೃತಗೊಳ್ಳುವುದು

ಗಮನಾರ್ಹವಾದ ಕಂಪನವು ಮನಸ್ಸಿನ ಉಪಪ್ರಜ್ಞೆ ಭಾಗದಲ್ಲಿ ಹುಟ್ಟುತ್ತದೆ, ಅದು ಆಂತರಿಕ ಭಾವಪರವಶತೆಯ ಭಾವನೆಯನ್ನು ನೀಡುತ್ತದೆ. ಓಂ ನಮಃ ಶಿವಾಯ ಮಂತ್ರವು ದೈವಿಕ ಮಂತ್ರದ ನಿರಂತರ ಪುನರಾವರ್ತನೆಯು ದೀರ್ಘಕಾಲಿಕ ಸಂತೋಷದ ಹಾದಿಯಾಗಿದೆ. **ನಿದ್ರಾಹೀನತೆ ಸಮಸ್ಯೆಯನ್ನು ನಿವಾರಿಸುವುದು:** ಓಂ ನಮಃ ಶಿವಾಯ ಎನ್ನುವ ಮಂತ್ರವು ಮಿದುಳಿನಲ್ಲಿ ಒಂದು ರಾಸಾಯನಿಕವನ್ನು ಹೆಚ್ಚಿಸುತ್ತದೆ. ಗಾಬಾ ಎನ್ನುವ ಈ ರಾಸಾಯನಿಕವು ಸಂತೋಷವನ್ನು ಉಂಟು ಮಾಡುತ್ತದೆ. ಇದರ ಕೊರತೆಯಿಂದ ಮಾನವರಲ್ಲಿ ನಿದ್ರೆ ಕಡಿಮೆಇರುತ್ತದೆ. ಅಂತಹ ರಾಸಾಯನಿಕ ಕೊರತೆಯಿರುವ ಜನರು ಯಾವಾಗಲೂ ನಿಷ್ಕಾಸವನ್ನು ಅನುಭವಿಸುತ್ತಾರೆ. ಮಾನವನ ಮೆದುಳಿನ ಮುಂಭಾಗದ ಪ್ರದೇಶವು ಆರ್ಬಿಟೋ ಪ್ರಿಫ್ರಂಟಲ್ ಕಾರ್ಟೆಕ್ಸ್‌ನಲ್ಲಿದೆ, ಇದು ನಿರ್ಧಾರಗಳನ್ನು ತೆಗೆದುಕೊಳ್ಳುವ, ಸಮಸ್ಯೆಯನ್ನು ಪರಿಹರಿಸುವ ಮತ್ತು ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. **ಮಕ್ಕಳ ಬುದ್ಧಿಶಕ್ತಿ ಹೆಚ್ಚಾಗುವುದು:** ಓಂ ನಮಃ ಶಿವಾಯ ಜಪಿಸಿದ ನಂತರ ವಿದ್ಯಾರ್ಥಿಗಳಲ್ಲಿ ಬುದ್ಧಿ ಶಕ್ತಿ ಹೆಚ್ಚಾಗುತ್ತದೆ. ನಿಮ್ಮ ಮಗು ಕಡಿಮೆ ಬುದ್ಧಿಶಕ್ತಿಯಿಂದ ನರಳುತ್ತಿದ್ದರೆ ಈ ಮಂತ್ರ ಪಠಿಸಬಹುದು.

**ಮಕ್ಕಳ ಬುದ್ಧಿಶಕ್ತಿ ಹೆಚ್ಚಾಗುವುದು**



**ಶಿವನ ರಕ್ಷಣೆ ದೊರೆಯುವುದು:** ಓಂ ನಮಃ ಶಿವಾಯ ಮಂತ್ರವನ್ನು ಜಪಿಸುವುದರಿಂದ ನಿಮಗೆ ಶಾಶ್ವತ ಸಂತೋಷ ಸಿಗುತ್ತದೆ. ಶಿವನು ನಿಮ್ಮ ರಕ್ಷಕನಾಗುತ್ತಾನೆ, ಪ್ರತಿಯೊಂದು ರೀತಿಯ ಭೀತಿ, ಒತ್ತಡ, ಖಿನ್ನತೆ, ಹುಚ್ಚುತನವು ನಿಧಾನವಾಗಿ ಮರೆಯಾಗಲು ಪ್ರಾರಂಭಿಸುತ್ತದೆ.

**ದೈಹಿಕ ಪ್ರಯೋಜನ:** ಓಂ ನಮಃ ಶಿವಾಯ ಮಂತ್ರವು ನಿಮ್ಮ ಪ್ರಾಣಿಗಳ ಉತ್ಸಾಹ ಮತ್ತು ಅಸಭ್ಯ ವರ್ತನೆಯಿಂದ ನಿಮ್ಮನ್ನು ಮುಕ್ತಗೊಳಿಸುತ್ತದೆ. ಇದು ನಿಮ್ಮಲ್ಲಿ ಸಕಾರಾತ್ಮಕ ಶಕ್ತಿಯನ್ನು ಬೆಳೆಸುತ್ತದೆ, ಅದು ನಿಮ್ಮ ದೇಹದ ಚಯಾಪಚಯವನ್ನು ಸುಧಾರಿಸುತ್ತದೆ ಮತ್ತು ದೇಹದ ವಿಷತ್ವವನ್ನು ಕಡಿಮೆ ಮಾಡುತ್ತದೆ. **ಸೌಂದರ್ಯ ಹೆಚ್ಚಿಸುವುದು:** ನಿಮ್ಮ ದೇಹ ಮತ್ತು ಚರ್ಮವು ನಿಮ್ಮ ರಂಧ್ರಗಳನ್ನು ಸ್ವಾಭಾವಿಕವಾಗಿ ಬಿಗಿಗೊಳಿಸುವ ಮೂಲಕ ಹೊಳಪನ್ನು ಹೆಚ್ಚಿಸಲು ಪ್ರಾರಂಭಿಸುತ್ತದೆ. ಓಂ ನಮಃ ಶಿವಾಯ ಪ್ರಬಲ ಮಹಾ-ಮಂತ್ರ. **ಕುಂಡಲಿಯಲ್ಲಿ ಯೋಗ ಶಕ್ತಿಗೆ:** ಸಿದ್ಧಿಗಳನ್ನು (ಉರ್ಜಾ ಅಥವಾ ಶಕ್ತಿ) ಪಡೆಯಲು ನಿರಂತರ 108-ಬಾರಿ ಪುನರಾವರ್ತನೆಯು ಹೆಚ್ಚು ಪ್ರಯೋಜನಕಾರಿಯಾಗಿದೆ. ಕುಂಡಲಿನಿ ಯೋಗ ಶಕ್ತಿಯನ್ನು ಜಾಗೃತಗೊಳಿಸಲು ಇದು ಸಹಾಯಕವಾಗಿದೆ. **ಓಂ ನಮ ಶಿವಯ ಮಂತ್ರದ ಆರೋಗ್ಯ ಪ್ರಯೋಜನಗಳು:** ಓಂ ನಮಃ ಶಿವಾಯ ಮಂತ್ರ ಪಠಣವು ನಿಮ್ಮ ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ ಮತ್ತು ಹೃದಯ ಬಡಿತವನ್ನು ಸ್ಥಿರಗೊಳಿಸುತ್ತದೆ. ಮಂತ್ರವು ನಿಮ್ಮ ರಕ್ತ ಶುದ್ಧೀಕರಣ ವ್ಯವಸ್ಥೆಯನ್ನು ಹೆಚ್ಚಿಸುತ್ತದೆ. ಮಂತ್ರವನ್ನು ಜಪಿಸುವುದರಿಂದ ನಿಮ್ಮ ತರ್ಕಬದ್ಧಗೊಳಿಸುವ ಪ್ರಕ್ರಿಯೆಯನ್ನು ಸಹ ಶುದ್ಧೀಕರಿಸುತ್ತದೆ, ಅದು ನಿಮ್ಮ ದೈಹಿಕ ಮತ್ತು ಬೌದ್ಧಿಕ ಯೋಗಕ್ಷೇಮವನ್ನು ಸುಧಾರಿಸುತ್ತದೆ. ಇದು ಹೃದಯದ ಪಾರ್ಶ್ವವಾಯು ಮತ್ತು ಅಂಗಾಂಗ ವೈಫಲ್ಯದ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ ಇದು ನಿಮ್ಮ ಮನೆಯಲ್ಲಿ ಸಕಾರಾತ್ಮಕತೆಯನ್ನು ಹರಡುತ್ತದೆ ಮನೆಯಲ್ಲಿ ಶಿವನನ್ನು ಪೂಜಿಸುವುದು ಕುಟುಂಬದಲ್ಲಿ ಸಂತೋಷವನ್ನು ತರುತ್ತದೆ. ಶಿವ ಮತ್ತು ಶಕ್ತಿ ಇಬ್ಬರೂ ಆ ಮನೆಯಲ್ಲಿ ಸ್ಥಾಪಿತರಾಗುತ್ತಾರೆ. ನೀವು ಇತರರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತೀರಿ ಮತ್ತು ಇತರರಿಗೆ ಸಹಾಯ ಹಸ್ತ ನೀಡಲು ಸಿದ್ಧರಾಗುತ್ತೀರಿ. ಇದಲ್ಲದೆ, ಮಕ್ಕಳಲ್ಲಿ ನೈತಿಕ ಮೌಲ್ಯಗಳು ಬೆಳೆಯಲು ಪ್ರಾರಂಭವಾಗುತ್ತದೆಸಕಾರಾತ್ಮಕ ಕಂಪನಗಳು ಆ ಮನೆಯಿಂದ ಮತ್ತು ಆ ಮನೆಯಲ್ಲಿ ವಾಸಿಸುವ ಜನರಿಂದ ಹೊರಸೂಸಲ್ಪಡುತ್ತವೆ.

ಓಂ ನಮಃ ಶಿವಾಯವನ್ನು ಜಪಿಸುವುದರಿಂದ ಆಕರ್ಷಣೆಯ ನಿಯಮವು ನಿಮ್ಮ ಪರವಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ. ಓಂ ನಮಃ ಶಿವಾಯ ಮಂತ್ರದ ಶಕ್ತಿ ಎಂದರೆ ಅದು ನಿಮ್ಮ ಹಿಂದಿನ ಪಾಪಗಳಿಂದ ನಿಮ್ಮನ್ನು ಮುಕ್ತಗೊಳಿಸುತ್ತದೆ.

### ಇಂದ್ರಿಯಗಳ ನಿಯಂತ್ರಣ

**ಓಂ ನಮಃ ಶಿವಾಯ ಮಂತ್ರವು ಸಂವೇದನೆ ಮತ್ತು ಆತಂಕಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಇಂದ್ರಿಯಗಳ ನಿಯಂತ್ರಣಕ್ಕೆ ನೆರವಾಗುತ್ತದೆ. ಓಂ ನಮಃ ಶಿವಾಯ ನಿಮ್ಮ ಮನಸ್ಸಿಗೆ ಶಾಂತತೆಯನ್ನು ನೀಡುತ್ತದೆ ಶಿವನು ಚಂದ್ರನ ಅರ್ಧಚಂದ್ರಾಕಾರವನ್ನು ತನ್ನ ತಲೆಯ ಮೇಲೆ ಹಿಡಿದಿದ್ದಾನೆ. ಇದು ಮಂತ್ರ ಪಠಣದ ನಂತರ ದೇಹದ ಮೇಲೆ ಪರಿಣಾಮ ಬೀರುತ್ತದೆ. ಯಾರಾದರೂ ಓಂ ನಮಃ ಶಿವಾಯ ಜಪವನ್ನು ಪ್ರಾರಂಭಿಸಿದಾಗ ಅವರ ಮನಸ್ಸು ಶಾಂತವಾಗುತ್ತದೆ.**

### ಓಂ ನಮಃ ಶಿವಾಯ..! ನಮ್ಮ ಭಾರತದಲ್ಲಿರುವ ಪ್ರಮುಖ ಶಿವಾಲಯಗಳು


| ರಾಜ್ಯ | ಸ್ಥಳ | ಶಿವಾಲಯಗಳು |
|---|---|---|
| ಕರ್ನಾಟಕ | ನಂಜನಗೂಡ | ಶ್ರೀ ಶ್ರೀಕಂಠೇಶ್ವರ |
| ಕರ್ನಾಟಕ | ಗೋಕರ್ಣ | ಶ್ರೀ ಮಹಾಬಲೇಶ್ವರ |
| ಕರ್ನಾಟಕ | ಧರ್ಮಸ್ಥಳ | ಶ್ರೀ ಮಂಜುನಾಥ |
| ಕರ್ನಾಟಕ | ಹಂಪಿ | ಶ್ರೀ ವಿರೂಪಾಕ್ಷ |
| ತಮಿಳುನಾಡು | ಮಾಯಾವರಂ | ಶ್ರೀ ಅಂಬಿಕೇಶ್ವರ |
| ಆಂಧ್ರಪ್ರದೇಶ | ಶ್ರೀಶೈಲ | ಶ್ರೀ ಮಲ್ಲಿಕಾರ್ಜುನ |
| ಆಂಧ್ರಪ್ರದೇಶ | ದ್ರಾಕ್ಷಾರಾಮ | ಶ್ರೀ ಬೀಮೇಶ್ವರ |
| ಆಂಧ್ರಪ್ರದೇಶ | ಕಾಳಹಸ್ತಿ | ಶ್ರೀ ಕಾಳಹಸ್ತಿಶ್ವರ |
| ತಮಿಳುನಾಡು | ಕಂಚಿ | ಶ್ರೀ ಏಕಾಂಬರೇಶ್ವರ |
| ತಮಿಳುನಾಡು | ತಂಜಾವೂರು | ಶ್ರೀ ಬೃಹದೀಶ್ವರ |
| ತಮಿಳುನಾಡು | ಕುಂಭಕೋಣಂ | ಶ್ರೀ ಕುಂಭೇಶ್ವರ |
| ತಮಿಳುನಾಡು | ರಾಮೇಶ್ವರ | ಶ್ರೀರಾಮೇಶ್ವರ |
| ತಮಿಳುನಾಡು | ಚಿದಂಬರಂ | ಶ್ರೀ ನಟರಾಜ |
| ತಮಿಳುನಾಡು | ತಿರುವಣ್ಣಾಮಲೈ | ಶ್ರೀ ಅರುಣಾಚಲೇಶ್ವರ |
| ತಮಿಳುನಾಡು | ಮಧುರೈ | ಶ್ರೀ ಸುಂದರೇಶ್ವರ |
| ಮಹಾರಾಷ್ಟ್ರ | ನಾಸಿಕ್ | ಶ್ರೀ ತ್ರ್ಯಂಬಕೇಶ್ವರ |
| ಮಧ್ಯಪ್ರದೇಶ | ಉಜ್ಜಯಿನಿ | ಶ್ರೀ ಮಹಾಕಾಳೇಶ್ವರ |
| ಗುಜರಾತ್ | ಸೋಮನಾಥ್ | ಶ್ರೀ ಸೋಮನಾಥ |
| ಉತ್ತರಪ್ರದೇಶ | ಕಾಶಿ | ಶ್ರೀ ವಿಶ್ವೇಶ್ವರ |
| ಉತ್ತರಪ್ರದೇಶ | ಪ್ರಯಾಗ | ಶ್ರೀ ನೀಲಕಂಠೇಶ್ವರ |
| ಉತ್ತರ ಪ್ರದೇಶ | ಕೇದಾರ | ಶ್ರೀ ಕೇದಾರೇಶ್ವರ |
| ಜಮ್ಮು ಕಾಶ್ಮೀರ | ಕಾಶ್ಮೀರ | ಶ್ರೀ ಅಮರನಾಥ. |





ವಿ.ಎಂ.ಎಸ್.ಗೋಪಿ
• ಉದಯವಾಹಿನಿ, ವಿಶೇಷ

# ಪ್ರತೀ ವರ್ಷದಂತೆ ಬೆಂಗಳೂರಿನ ವಿವಿಧ ದೇವಸ್ಥಾನಗಳಲ್ಲಿ ಶಿವನ ಪೂಜೆ



ಶ್ರೀ. ವಿನೋದ್ ಕಾಮತ್
• ಉದಯವಾಹಿನಿ, ಬೆಂಗಳೂರು

ಮಹಾಶಿವರಾತ್ರಿಯ ನಿಮಿತ್ತ ದಿನಾಂಕ 26 ಫೆಬ್ರವರಿ 2025ನೇ ಬುಧವಾರದಂದು ಸನಾತನ ಸಂಸ್ಥೆಯ ವತಿಯಿಂದ ಪ್ರತೀ ವರ್ಷದಂತೆ ಬೆಂಗಳೂರಿನ ವಿವಿಧ ದೇವಸ್ಥಾನಗಳಲ್ಲಿ ಶಿವನ ಪೂಜೆಗೆ ಸಂಬಂಧಿಸಿದ ಸಾತ್ತ್ವಿಕ ಉತ್ಪಾದನೆಗಳು ಹಾಗೂ ಆಧ್ಯಾತ್ಮಿಕ ಗ್ರಂಥಗಳ ಪ್ರದರ್ಶನಿಯನ್ನು ಆಯೋಜಿಸಲಾಗಿದೆ. ಮಲ್ಲೇಶ್ವರಂ ನ ಶ್ರೀ ಕಾಡು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ವಿಜಯನಗರ ಶ್ರೀ ಆದಿಚುಂಚನಗಿರಿ ಮಠ, ಸಂಜಯನಗರದ ಶ್ರೀ ಸಿದ್ಧಿವಿನಾಯಕ ದೇವಸ್ಥಾನ, ಬನಶಂಕರಿಯ ಕೆ.ಆರ್ ರಸ್ತೆಯಲ್ಲಿರುವ ಶ್ರೀ ಉಮಾಮಹೇಶ್ವರಿ ದೇವಸ್ಥಾನ, ಆನೇಕಲ್ ತಾಲ್ಲೂಕು ಬೊಮ್ಮಸಂದ್ರದ -ಶ್ರೀ ಸೋಮೇಶ್ವರ ದೇವಸ್ಥಾನ, ಟಿ. ದಾಸರಹಳ್ಳಿಯ ಮಹೇಶ್ವರಿ ನಗರದ ಶಿವ ದೇವಸ್ಥಾನ, ಕೋಣನಕುಂಟೆ ಹರಿನಗರ ಶ್ರೀ ಬೀರೇಶ್ವರ ದೇವಸ್ಥಾನ ಸೇರಿದಂತೆ ನಗರದ 20ಕ್ಕೂ ಅಧಿಕ ಕಡೆಗಳಲ್ಲಿ ಆಧ್ಯಾತ್ಮಿಕ ಗ್ರಂಥಗಳು ಹಾಗೂ ಸಾತ್ತ್ವಿಕ ಉತ್ಪಾದನೆಗಳ ಪ್ರದರ್ಶನಿಯನ್ನು ಆಯೋಜಿಸಲಾಗಿದ್ದು, ಸಾರ್ವಜನಿಕರು ಈ ಪ್ರದರ್ಶನಗಳ ಲಾಭ ಪಡೆದುಕೊಳ್ಳಬೇಕೆಂದು ಸನಾತನ ಸಂಸ್ಥೆಯು ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದೆ.

**ವಿವಿಧೆಡೆಗಳಲ್ಲಿ ಆಧ್ಯಾತ್ಮಿಕ ಗ್ರಂಥಗಳ ಪ್ರದರ್ಶನಿ**

# ಹಠಾತ್ ಬಕ್ಕ ತಲೆಗೆ ಗೋಧಿ ಕಾರಣವಂತೆ..!

• ಉದಯವಾಹಿನಿ, ಬೆಂಗಳೂರು



ರಾಷ್ಟ್ರಾದ್ಯಂತ ಸಂಚಲನ ಮೂಡಿಸಿದ್ದ ಮಹಾರಾಷ್ಟ್ರದ ಬುಲ್ಡಾನಾ ಜಿಲ್ಲೆಯ ಹಠಾತ್ ಕೂದಲುರುವ ಘಟನೆಗಳಿಗೆ ಪಂಜಾಬ್, ಹರಿಯಾಣದಿಂದ ಪೂರೈಕೆಯಾದ, ಸ್ಥಳೀಯ ನ್ಯಾಬೆಲೆ ಅಂಗಡಗಳಿಂದ ವಿತರಣೆಯಾದ ಗೋಧಿಯಲ್ಲಿನ ಅಧಿಕ ಸೆಲೆನಿಯಂ ಅಂಶವೇ ಕಾರಣ ಎಂದು ವೈದ್ಯಕೀಯ ತಜ್ಞರ ವರದಿ ತಿಳಿಸಿದೆ. ಸೆಲೆನಿಯಂ ಮಣ್ಣು ಮತ್ತು ನೈಸರ್ಗಿಕವಾಗಿ ನೀರಿನಲ್ಲಿ ಮತ್ತು ಕೆಲವು ಆಹಾರ ಪದಾರ್ಥಗಳಲ್ಲಿ ಕಂಡುಬರುವ ಒಂದು ಖನಿಜವಾಗಿದೆ. ಚಯಪಚಯ ಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸೆಲೆನಿಯಂ ಸಣ್ಣ ಪ್ರಮಾಣವಷ್ಟೇ ವ್ಯಕ್ತಿಗಳಲ್ಲಿದ್ದರೆ ಸಾಕಾಗುತ್ತದೆ. 2024ರ ಡಿಸೆಂಬ್‌ನಿಂದ ಈ ವರ್ಷದ ಜನವರಿ ನಡುವೆ ಬುಲ್ಡಾನಾದ 18 ಗ್ರಾಮಗಳ 279 ವ್ಯಕ್ತಿಗಳಲ್ಲಿ ಹಠಾತ್ ಕೂದಲು ಉದುರುವಿಕೆ ಬಗ್ಗೆ ವರದಿಯಾಗಿತ್ತು. ಬಾಧಿತ ವ್ಯಕ್ತಿಗಳಲ್ಲಿ ಅನೇಕರು ಕಾಲೇಜು ವಿದ್ಯಾರ್ಥಿಗಳು ಮತ್ತು ಯುವತಿಯರಆಗಿದ್ದು, ಈ ಸಮಸ್ಯೆಯಿಂದಾಗಿ ಶೈಕ್ಷಣಿಕ ವ್ಯಾಸಂಗ ಮುಂದುವರಿಸಲಾಗದಿರುವಂತೆ ಮತ್ತು ಮದುವೆ ರದ್ದತಿಯಂತಹ ಗಣನೀಯ ಸಾಮಾಜಿಕ ಸವಾಲುಗಳನ್ನು ಎದುರಿಸಬೇಕಾಗಿತ್ತು. ಮುಜುಗರ ತಪ್ಪಿಸಿಕೊಳ್ಳಲು ಅಲೋಪೇಶಿಯಾ ಬಾಧಿತರಲ್ಲಿ ಹಲವು ತಮ್ಮ ಇಡೀ ತಲೆಯ ಕೇಶ ಮುಂಡನ ಮಾಡಿಸಿಕೊಂಡಿದ್ದರು. ಬಾಧಿತ ಸ್ಥಳಗಳಿಗೆ ತಲುಪಿ ಮಾದರಿಗಳನ್ನು ಸಂಗ್ರಹಿಸಿದ ಬಳಿಕ ವ್ಯಕ್ತಿಗಳಲ್ಲಿ ಮುಖ್ಯವಾಗಿ ಯುವತಿಯರಲ್ಲಿ ತಲೆ ನೋವು, ಜ್ವರ, ತಲೆಕೆರೆತ, ಕೆಲವು ಪ್ರಕರಣಗಳಲ್ಲಿ ವಾಂತಿ ಮತ್ತು ಬೇಧಿಯಂತರ ರೋಗಲಕ್ಷಣಗಳು ಕಂಡುಬಂದಿದ್ದವು ಎಂದು ರಾಯಘಡದ ಬವಾಸ್ಕರ್ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಎಂಡಿ ಡಾಹಿಮ್ಮತ್ ರಾವ್ ಬವಾಸ್ಕರ್ ತಿಳಿಸಿದ್ದಾರೆ.


**ಎಂಡಿ ಡಾಹಿಮ್ಮತ್ ರಾವ್ ಬವಾಸ್ಕರ್ ಹೇಳಿಕೆ**

### ಓಂ ನಮಃ ಶಿವಾಯ

ಜಗತ್ ರಕ್ಷಕನ
ನೆನೆಯುವ ದಿನ
ವರುಷವಿಡೀ
ಊರ್ಧ್ವ ಮುಖನಾಗಿ
ತಪೋ ನಿರತನಾದ
ಹಲವು ನಾಮಾಂಕಿತ
ಕೈಲಾಸ ವಾಸಿ
ಶಿವಾತ್ಮನನ್ನು
ಭೂಲೋಕದಲ್ಲಿ
ಕುಳಿತು ಭಜಿಸಿ ಭುಜಿಸಿ
ಧರೆಗಿಳಿದ ಶಿವನಿಗೆ
ಅಲಂಕರಿಸಿ, ಪುಷ್ಪವನಿರಿಸಿ
ಬಿಲ್ವದ ಉಯ್ಯಾಲೆಯಲ್ಲಿ
ತೂಗಿ ತೂಗಿ ,
ಜಾಗರೂಕರಿದ್ದು
ಶಿವ ದರುಷನವ ಪಡೆದು
ಜನುಮ ಸಾರ್ಥಕಗೊಳಿಸಿ
ಅಭಯ ಹಸ್ತದಲಿ
ಆಶೀರ್ವದಿಸುವ
ಶಿವನಿಗೆ ಸ್ಮರಣೆ ಮಾಡಿ
ಪಾದ ಸ್ಪರ್ಶಿಸುವ ರಾತ್ರಿಯೇ
ಮಹಾ ಶಿವರಾತ್ರಿ

ಓಂ ನಮಃ ಶಿವಾಯ
ಶಿವಾಯ ನಮಃ

ಗುಜ್ಜರ್ ದಾವಣಗೆರೆ



# ಹೋಟೆಲ್‌ನಲ್ಲಿ ನೀಡುವ ಹತ್ತಿಯಂತ ಅಕ್ಕಿ ರೊಟ್ಟಿ ಮನೆಯಲ್ಲೇ ಮಾಡಿ.!

• ಉದಯವಾಹಿನಿ, ಬೆಂಗಳೂರು

ನೀವು ಹೋಟೆಲ್, ರೆಸ್ಟೋರೆಂಟ್ ಹಾಗೆ ಡಾಬಾದಲ್ಲಿ ಊಟ, ತಿಂಡಿಗೆ ತೆರಳಿದಾಗ ನೀವು ಅಕ್ಕಿ ರೊಟ್ಟಿ ಆರ್ಡರ್ ಮಾಡಿ ಸವಿದಿರುತ್ತೀರಿ. ಅಕ್ಕಿ ರೊಟ್ಟಿ ಮೃದುವಾಗಿ 4ರಿಂದ 5ರ ವರೆಗೂ ಕೆಲವರು ಸವಿಯುವಷ್ಟು ರುಚಿಯಾಗಿರುತ್ತೆ. ಆದ್ರೆ ಮನೆಯಲ್ಲಿ ಈ ರೊಟ್ಟಿ ಮಾಡಿದ್ರೆ ಈ ರೀತಿಯಾಗಿ ಬರುವುದಿಲ್ಲ ಎಂಬ ದೂರು ನೋಡಬಹುದು. ಹಾಗೆ ಈ ಅಕ್ಕಿ ರೊಟ್ಟಿಯನ್ನು ಸುಲಭವಾಗಿ ಮಾಡಬಹುದು ಎಂಬುದು ಕೂಡ ತಿಳಿದಿರೋದಿಲ್ಲ. ಅಕ್ಕಿ ರೊಟ್ಟಿಯ ಜೊತೆಗೆ ಮಶ್ರೂಮ್ ಗ್ರೇವಿ, ಬದನೆಕಾಯಿ ಎಣ್ಣೆಗಾಯಿ ಇದ್ದರೆ ರುಚಿ ಮತ್ತಷ್ಟು ಅದ್ಭುತವಾಗುತ್ತೆ. ನೀವು ಕೂಡ ಈ ರೊಟ್ಟಿಯನ್ನು ಸವಿಯಲು ಇಷ್ಟಪಡುವವರಾಗಿದ್ದರೆ, ಮನೆಯಲ್ಲೇ ಮಾಡಿ ಸವಿಯುವುದು ಹೇಗೆ ಅನ್ನೋದನ್ನು ನಾವಿಂದು ತಿಳಿದುಕೊಳ್ಳೋಣ. ಚಪಾತಿ ಮಾಡಿದಂತೆ ಮೃದುವಾದ, ಹತ್ತಿಯಷ್ಟು ಹಗುರವಾಗಿ ಈ ಅಕ್ಕಿ ರೊಟ್ಟಿ ಮಾಡುವ ಕುರಿತು ತಿಳಿಯೋಣ. ಈ ಅಕ್ಕಿ ರೊಟ್ಟಿಯು ಆರೋಗ್ಯದ ದೃಷ್ಟಿಯಿಂದಲೂ ಬಹಳ ಉತ್ತಮ. ಫೈಬರ್ ತುಂಬಿರುವ ಈ ರೊಟ್ಟಿಯನ್ನು ಕಡಿಮೆ ಎಣ್ಣೆ ಬಳಸಿ ಮಾಡುವುದರಿಂದ ನಿಮ್ಮ ಆರೋಗ್ಯದ ದೃಷ್ಟಿಯಿಂದ ಉತ್ತಮ ಖಾದ್ಯ, ಹಾಗೆ ಇದನ್ನು ಬ್ರೇಕ್‌ಫಾಸ್ಟ್‌ಗೆ ಊಟದ ಜೊತೆಗೆ ರಾತ್ರಿ ಖಾಲಿ ರೊಟ್ಟಿಯನ್ನೇ ಸವಿಯಬಹುದು. ಹಾಗಾದ್ರೆ ಈ ಅಕ್ಕಿ ರೊಟ್ಟಿ ಮಾಡೋದು ಹೇಗೆ ಅಕ್ಕಿ ರೊಟ್ಟಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು?, ಮಾಡುವ ವಿಧಾನವೇನು? ಮಾಡಲು ಎಷ್ಟು ಸಮಯ ಹಿಡಿಯಲಿದೆ? ಮಾಡುವ ವಿಧಾನವೇನು ಎಂಬುದನ್ನು ಇಲ್ಲಿ ತಿಳಿದುಕೊಳ್ಳೋಣ.

**ಅಕ್ಕಿ ರೊಟ್ಟಿ ಮಾಡಲು ಬೇಕಾಗುವ ವಸ್ತುಗಳು**

ಅಕ್ಕಿ ಇಟ್ಟು 4 ಕಪ್ ಅನ್ನ - 1 ಕಪ್ ಉಪ್ಪು ಎಣ್ಣೆ ಅಕ್ಕಿ ರೊಟ್ಟಿ ಮಾಡುವ ವಿಧಾನವೇನು?

ಮೊದಲು ಬಾಣಲೆಯಲ್ಲಿ 1 ಗ್ಲಾಸ್ ನೀರು ಹಾಕಿಕೊಂಡು ನಂತರ 1 ಸ್ಪೂನ್ ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು ಹಾಕಿಕೊಳ್ಳಿ. ನಂತರ ಈ ನೀರು ಚೆನ್ನಾಗಿ ಕುದಿಯಲು ಬಿಡಿ. ನೀರು ಕುದಿಯಲು ಆರಂಭಿಸಿದಾಗ ಅದಕ್ಕೆ ನೀರು ತೆಗೆದುಕೊಂಡ ಗ್ಲಾಸ್‌ನಲ್ಲೇ 1 ಗ್ಲಾಸ್ ಅಕ್ಕಿ ಹಿಟ್ಟನ್ನು ಇದಕ್ಕೆ ಹಾಕಿಕೊಂಡು ಕಲಸಿಕೊಳ್ಳಿ. ನೀರು ಡ್ರೈ ಆಗುವವರೆಗೂ ಕಲಸಿಕೊಳ್ಳಬೇಕು. ನಂತರ ಒಂದು ಬೌಲ್‌ಗೆ ಈ ಹಿಟ್ಟು ಹಾಕಿಕೊಂಡು ಕೈಯಿಂದ ಚೆನ್ನಾಗಿ ಕಲಸಿಕೊಳ್ಳಬೇಕು. ಚಪಾತಿ ಹಿಟ್ಟಿನ ಹದಕ್ಕೆ ಬರುವಂತೆ ಹದ ಮಾಡಿಕೊಳ್ಳಿ. ಅದೇ ರೀತಿ ಈ ಹಿಟ್ಟು ಕಲಸಿದರೆ ಬರುತ್ತದೆ. ಈಗ ಚಪಾತಿ ಲಟ್ಟಿಸಿದಂತೆ ಲಟ್ಟಿಸಿಕೊಳ್ಳಬೇಕು. ಚಪಾತಿ ಮಣೆಯ ಮೇಲೆ ಅಕ್ಕಿ ಇಟ್ಟು ಹಾಕಿಕೊಂಡು ಅದರ ಮೇಲೆ ಸ್ವಲ್ಪ ಉಂಡೆ ಹಿಟ್ಟು ತೆಗೆದುಕೊಂಡು ಲಟ್ಟಿಸಿಕೊಳ್ಳಿ. ಚಪಾತಿ ಯಂತೆಯೇ ಲಟ್ಟಿಸಿ. ನಂತರ ಒಲೆ ಮೇಲೆ ಕಾವಲಿ ಇಟ್ಟು ಎಣ್ಣೆ ಹಾಕದೆಯೇ ಬಿಸಿಮಾಡಿಕೊಳ್ಳಿ. ನಂತರ ಈ ರೊಟ್ಟಿಯನ್ನು ಅದರ ಮೇಲೆ ಹಾಕಿ ಚೆನ್ನಾಗಿ ಕಾಯಿಸಿಕೊಳ್ಳಿ, ಸಣ್ಣ ಉರಿಯಲ್ಲಿ ಕಾಯಿಸಿಕೊಂಡರೆ ಮೃದುವಾಗಿ ಬರುತ್ತದೆ. ಕಾವಲಿ ಇಲ್ಲದಿದ್ದರೆ ಅಥವಾ ಹಾಗೆ ಮೆಷ್ ಮೇಲೆ ಹಾಕಿ ಕಾಯಿಸಿಕೊಳ್ಳಬಹುದು. ಹಾಗೆ ಬಿಸಿಯಾಗಿದ್ದಾಗಲೆ ಸವಿಯಲು ನೀಡಬಹುದು. ಇಲ್ಲದಿದ್ದರೆ ಮತ್ತೆ ಗಟ್ಟಿಯಾಗುತ್ತದೆ. ಇಷ್ಟಾದರೆ ನಿಮ್ಮ ಮುಂದೆ ಹೂವಿನಂತೆ ಮೃದುವಾದ ಅಕ್ಕಿ ರೊಟ್ಟಿ ರೆಡಿಯಾಗುತ್ತದೆ. ನೀವು ಕೂಡ ಒಮ್ಮೆ ಮನೆಯಲ್ಲಿ ಇದನ್ನು ಟ್ರೈ ಮಾಡಿ ನೋಡಿ.



ಹೋಟೆಲ್, ರೆಸ್ಟೋರೆಂಟ್‌ನಲ್ಲೂ ಕೂಡ ಇದೇ ರೀತಿ ವಿಧಾನವಾಗಿ ಮಾಡುತ್ತಾರೆ. ಹಾಗೆ ಅಷ್ಟೇ ಮೃದುವಾಗಿ ಮನೆಯಲ್ಲಿ ನಾವು ಇದನ್ನು ಮಾಡಬಹುದು. ಮಾಡೋದು ಕೂಡ ಬಹಳ ಸುಲಭ.

# ಶಾಲಾ ಕೊಠಡಿಗಳ ದುರಸ್ತಿಗೆ ಮೂರು ತಿಂಗಳ ಗಡುವು

● ಶಾಲೆಗಳ ದುರಸ್ತಿಗಾಗಿ ಒದಗಿಸಲಾಗಿರುವ ಅನುದಾನದ ಖರ್ಚು ವೆಚ್ಚದ ಮಾಹಿತಿ ನೀಡಬೇಕು: ಗೋವಿಂದ ಎಂ.ಕಾರಜೋಳ

• ಉದಯವಾಹಿನಿ ಚಿತ್ರದುರ್ಗ



ಉದಯವಾಹಿನಿ ಚಿತ್ರ

ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಾಲಾ ಕೊಠಡಿಗಳ ದುರಸ್ತಿ ಕಾರ್ಯವನ್ನು ಮೂರು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಸಂಸದರಾದ ಗೋವಿಂದ ಎಂ.ಕಾರಜೋಳ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ನೀರಿನ ಸಮಸ್ಯೆಗೆ ಅಗತ್ಯ ಕ್ರಮ**

ಜಿಲ್ಲೆಯ ವಿವಿಧೆಡೆ ಬಹುತೇಕ ಸರ್ಕಾರಿ ಶಾಲಾ ಕೊಠಡಿಗಳು ಶಿಥಿಲಾವ್ಯಸ್ಥೆಯಲ್ಲಿರುವುದನ್ನು ಗಮನಿಸಿದ್ದೇನೆ. ಸರ್ಕಾರಿ ಶಾಲೆಗಳಿಗೆ ಕಡು ಬಡುವರ ಮಕ್ಕಳು ಬರುತ್ತಾರೆ. ಶಾಲಾ ಕೊಠಡಿಗಳ ದುರಸ್ತಿಗಾಗಿ ಕೆಎಂಇಆರ್ಸಿ, ಡಿಎಂಎಫ್ ಅನುದಾನ ಸೇರಿದಂತೆ ಜಿಲ್ಲೆಗೆ 3,700 ಕೋಟಿ ಅನುದಾನ ದೊರೆತಿದೆ. ಆದಾಗ್ಯೂ ಶಾಲೆಗಳ ಅಭಿವೃದ್ಧಿ ಕಾಮಗಾರಿಗಳು ಆಗುತ್ತಿಲ್ಲ. ಇದಕ್ಕೆ ನಿಮ್ಮ ವೈಫಲ್ಯವೇ ಕಾರಣ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಅವರ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಜಿಲ್ಲೆಯ ಶಾಲಾ-ಕಾಲೇಜು, ವಿದ್ಯಾರ್ಥಿನಿಲಯ, ಆಸ್ಪತ್ರೆ ಹಾಗೂ ಅಂಗನವಾಡಿ ಕೇಂದ್ರಗಳ ಕಟ್ಟಡ ಕಾಮಗಾರಿಗಳನ್ನು ಸುಸಜ್ಜಿತವಾಗಿ ಹಾಗೂ ಅತ್ಯಾಧುನಿಕವಾಗಿ ನಿರ್ಮಿಸಬೇಕು. ಈ ನಿಟ್ಟಿನಲ್ಲಿ ಮೂರು ತಿಂಗಳೊಳಗೆ ತ್ವರಿತವಾಗಿ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಬೇಕು. ಜಿಲ್ಲೆಯಲ್ಲಿ ಒಟ್ಟು 609 ಸರ್ಕಾರಿ ಪ್ರಾಥಮಿಕ ಶಾಲೆಗಳು ಇದ್ದು, ಈ ಪೈಕಿ ಆರ್ಸಿಸಿ ಮೇಲ್ಚಾವಣಿ, ಶೀಟ್ ಹಾಗೂ ಹೆಂಚಿನ ಮೇಲ್ಚಾವಣಿ ಹೊಂದಿರುವ ಶಾಲೆಗಳು ಎಷ್ಟು ಎಂಬುದರ ಬಗ್ಗೆ ತಾಲ್ಲೂಕುವಾರು ವಿವರ ನೀಡಬೇಕು. ಶಾಲೆಗಳ ದುರಸ್ತಿಗಾಗಿ ಒದಗಿಸಲಾಗಿರುವ ಅನುದಾನದ ಖರ್ಚು ವೆಚ್ಚದ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಟ್ರಸ್ಟ್ ಮೂಲಕ ಶಾಲಾ ಬ್ಯಾಗ್, ಪುಸ್ತಕ, ಅತ್ಯುತ್ತಮವಾದ ಬಟ್ಟೆಗಳನ್ನು ವಿತರಣೆ ಮಾಡಿಸಲು ಕ್ರಮ ವಹಿಸಲಾಗುವುದು. ಮುಂಬರುವ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ತಾಲ್ಲೂಕುವಾರು ಪ್ರಾಥಮಿಕ ಶಾಲೆಗಳ ಸಂಪೂರ್ಣ ಮಾಹಿತಿ ನೀಡುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಹೇಳಿದರು. ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಕೋಲ್ಡ್ ಸ್ಟೋರೇಜ್ ತೀರಾ ಅವಶ್ಯಕವಾಗಿದ್ದು, ಕೋಲ್ಡ್ ಸ್ಟೋರೇಜ್ಗೆ ರೂ.10 ಲಕ್ಷ ಅನುದಾನವನ್ನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಈ ಕುರಿತು ಜಿಲ್ಲಾ ಶಸ್ತ್ರಚಿಕಿತ್ಸಕರು ಅನುಷ್ಠಾನಕ್ಕೆ ಕ್ರಮವಹಿಸಬೇಕು ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದರು.

ಎರಡು ವರ್ಷ ಪೂರ್ಣಗೊಂಡರೂ ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಗಳು ಮುಕ್ತಾಯಗೊಂಡಿಲ್ಲ. ಗ್ರಾಮಗಳಲ್ಲಿ ರಸ್ತೆ ಅಗೆದಿರುವುದರಿಂದ ಜನರ ಸಂಚಾರಕ್ಕೆ ತೊಂದರೆಯಾಗುತ್ತಿದೆ. ನೀವು ಕಾಮಗಾರಿಯನ್ನು ಸರಿಯಾಗಿ ಮೇಲ್ವಿಚಾರಣೆ ಮಾಡುತ್ತಿಲ್ಲ ಎಂದು ತಿಳಿಸಿದ ಸಂಸದರು, ಜಲಜೀವನ್ ಮಿಷನ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳು ನಿಗಧಿತ ಅವಧಿಯೊಳಗೆ ಪೂರ್ಣಗೊಳ್ಳಬೇಕು.

ಒಂದು ವೇಳೆ ನಿಗಧಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸದ ಗುತ್ತಿಗೆದಾರರನ್ನು ವಜಾಗೊಳಿಸಬೇಕು ಎಂದು ತಾಕೀತು ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಬಸವನಗೌಡ ಪಾಟೀಲ್, ಕಾಮಗಾರಿ ವಿಳಂಬವಾದ ಕಡೆ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು ಎಂದರು. ಬೇಸಿಗೆ ಕಾಲದಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು.

ಜಿಲ್ಲೆಯಲ್ಲಿ 1056 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಈ ಪೈಕಿ ಕೆಟ್ಟುಹೋಗಿರುವ ಘಟಕಗಳನ್ನು ರಿಪೇರಿ ಮಾಡಿಸಿ, ನೀರು ಪೂರೈಸುವಂತೆ ಮಾಡಬೇಕು. ಚಾಲ್ತಿಯಲ್ಲಿರುವ ಘಟಕಗಳ ನಿರ್ವಹಣೆ ಸಮರ್ಪಕವಾಗಿರಬೇಕು ಎಂದು ಸಂಸದರು ತಿಳಿಸಿದರು.

### ತಜ್ಞ ವೈದ್ಯರ ನೇಮಕಕ್ಕೆ ಕ್ರಮ ವಹಿಸಿ

ಜಿಲ್ಲೆಯ ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳ ಭರ್ತಿಗೆ ಅಗತ್ಯ ಕ್ರಮ ವಹಿಸಬೇಕು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಜಿ.ಪಿ.ರೇಣುಪ್ರಸಾದ್ ಅವರಿಗೆ ತಿಳಿಸಿದರು. ಜಿಲ್ಲೆಯಲ್ಲಿ 29 ತಜ್ಞ ವೈದ್ಯರ ಕೊರತೆ ಇದೆ. ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳಿಗೆ ಮೂರು ಬಾರಿ ಪತ್ರಿಕೆ ಪ್ರಕಟಣೆ ನೀಡಿದ್ದು, ಇಬ್ಬರು ಸ್ತ್ರೀರೋಗ ತಜ್ಞರು ಮಾತ್ರ ಹಾಜರಾಗಿದ್ದು, ಸಮುದಾಯ ಆರೋಗ್ಯ ಕೇಂದ್ರ ಸಿರಿಗೆರೆ-1 ಹಾಗೂ ಬೆಲಗೂರು-1 ಹುದ್ದೆಗೆ ನೇಮಕ ಮಾಡಲಾಗಿದೆ. ಉಳಿದಂತೆ ಯಾವ ತಜ್ಞ ವೈದ್ಯರು ಹಾಜರಾಗಿರುವುದಿಲ್ಲ. ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗೆ ಮೊತ್ತೊಮ್ಮೆ ಪತ್ರಿಕಾ ಪ್ರಕಟಣೆ ನೀಡಿ ನೇರ ಸಂದರ್ಶನ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ.ಪಿ.ರೇಣುಪ್ರಸಾದ್ ಸಭೆಗೆ ಮಾಹಿತಿ ನೀಡಿದರು. ತಜ್ಞ ವೈದ್ಯರ ನೇಮಕವನ್ನು ಗಂಭೀರವಾಗಿ ಪರಿಗಣಿಸಿ, ಜಿಲ್ಲಾಧಿಕಾರಿಗಳ ಮೂಲಕ ಆರೋಗ್ಯ ಇಲಾಖೆ ಆಯುಕ್ತರಿಗೆ ಪತ್ರ ಬರೆದು, ಕನಿಷ್ಠ ಆರೋಗ್ಯ ಸೇವೆ ಒದಗಿಸಲು ಅಗತ್ಯ ಕ್ರಮವಹಿಸಬೇಕು ಎಂದು ಸಂಸದರು ಸೂಚನೆ ನೀಡಿದರು.

### ಕಾಟಾಚಾರದ ಕೆಲಸ ಸಲ್ಲದು

ಜಲಜೀವನ್ ಮಿಷನ್ ಯೋಜನೆಯಡಿ ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಯಾವುದೇ ಕಾರಣಕ್ಕೂ ಕಾಟಾಚಾರದ ಕೆಲಸ ಆಗಬಾರದು ಎಂದು ಸಂಸದ ಗೋವಿಂದ ಕಾರಜೋಳ ಅವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಬಸವನಗೌಡ ಪಾಟೀಲ್ಗೆ ಸೂಚಿಸಿದರು.

## ಮಿನಿ ನ್ಯೂಸ್

### ತರಬೇತಿಯ ಜ್ಞಾನ ವೃತ್ತಿಯಲ್ಲಿ ಅಳವಡಿಸಿಕೊಳ್ಳಿ

• ಉದಯವಾಹಿನಿ, ಸೈದಾಪುರ

ಉತ್ತಮ ಶಿಕ್ಷಕರಾಗಲು ತರಬೇತಿಯಲ್ಲಿನ ಜ್ಞಾನವನ್ನು ವೃತ್ತಿಯಲ್ಲಿ ಅಳವಡಿಸಿಕೊಂಡಾಗ ಮಾತ್ರ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಿದೆ ಎಂದು ಡಿ.ಎಲ್.ಇಡಿ ಕಾಲೇಜಿನ ಪ್ರಾಂಶುಪಾಲ ಕರಬಸಯ್ಯ ದಂಡಿಗಿಮಠ ಅಭಿಪ್ರಾಯಪಟ್ಟರು.

ಸಮೀಪದ ಬಾಡಿಯಾಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾ ವರ್ಧಕ ಡಿ.ಎಲ್.ಇಡಿ ಕಾಲೇಜಿನ ಪ್ರಶಿಕ್ಷಣಾರ್ಥಿಗಳಿಗೆ ಹಮ್ಮಿಕೊಂಡ ನಿಕಟ ಸೇವಾ ತರಬೇತಿಯ ಬೀಳ್ಕೊಡಿಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಸ್ಪರ್ಧಾತ್ಮಕ ಯುಗದಲ್ಲಿ ಸತತ ಪ್ರರಿಶ್ರಮ ಅತಿ ಮುಖ್ಯವಾಗಿದೆ. ಟಿಇಟಿ ನಂತರದ ಸಿಇಟಿಯಲ್ಲಿ ಉತ್ತೀರ್ಣರಾದಾಗ ಮಾತ್ರ ಶಿಕ್ಷಕರಾಗಲು ಸಾಧ್ಯ. ಈ ದಿಸೆಯಲ್ಲಿ ನಾವು ಸತತ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು. ಕೇವಲ ಪ್ರಮಾಣ ಪತ್ರ ಪಡೆಯುವ ಶಿಕ್ಷಕರಾಗದೆ. ಮಕ್ಕಳು ನಿಮ್ಮನ್ನು ಗುರುತಿಸುವ ಉತ್ತಮ ಗುರುಗಳಾಗಬೇಕು. ಇದಕ್ಕಾಗಿ ಅನುಭವಿ ಹಾಗೂ ಸೇವಾನಿರತ ಶಿಕ್ಷಕರ ಸಲಹೆ ಮಾರ್ಗದರ್ಶನನ ಪಡೆದುಕೊಳ್ಳಬೇಕು ಎಂದು ಕಿವಿ ಮಾತುಗಳನ್ನು ಹೇಳಿದರು.

### ಧೈರ್ಯದಿಂದ ಪರೀಕ್ಷೆ ಎದುರಿಸಿ

• ಉದಯವಾಹಿನಿ, ಆಳಂದ

ವಾರ್ಷಿಕ ಪರೀಕ್ಷೆಯನ್ನು ಭಯಮುಕ್ತರಾಗಿ ಜಾಣ್ಮೆಯಿಂದ ಎದುರಿಸುವ ಕಲೆಯನ್ನು ರೂಢಿಸಿಕೊಳ್ಳಬೇಕು. ಇದರಿಂದ ಶಾರೀರಿಕ ಮತ್ತು ಮಾನಸಿಕ ಚೈತನ್ಯತೆ ವೃದ್ಧಿಸಿ ಹೆಚ್ಚಿನ ಅಂಕಗಳಿಸಲು ಅನುಕೂಲವಾಗುತ್ತದೆ ಎಂದು ಎಸ್ಆರ್ಜಿ ಫೌಂಡೇಷನ್ ಅಡಿಯ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಡಾ. ರಾಘವೇಂದ್ರ ಚಿಂಚನಸೂರ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಪಟ್ಟಣದ ಎಂಎಆರ್ಜಿ ಪದವಿ ಪೂರ್ವ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಹಮ್ಮಿಕೊಂಡ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಸಕ್ತ ಸಾಲಿನಲ್ಲಿ ಎಂಎಆರ್ಜಿ ಸಂಸ್ಥೆಯ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲಾ ಪ್ರಥಮ ಸ್ಥಾನ ಪಡೆದರೆ ಲಕ್ಷ ರೂಪಾಯಿ ಹಾಗೂ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆಯುವ ವಿದ್ಯಾರ್ಥಿಗೆ 25 ಸಾವಿರ ರೂಪಾಯಿ ಪ್ರೋತ್ಸಾಹಧನ ನೀಡುವ ಕುರಿತು ಸಂಸ್ಥೆಯ ಅಧ್ಯಕ್ಷರು ಘೋಷಿಸಿದ್ದಾರೆ. ಇದರ ಸದ್ಬಳಕೆ ಮಾಡಿಕೊಳ್ಳಲು ಮುಂದಾಗಬೇಕು ಎಂದು ಹೇಳಿದರು. ಬರುವ ದ್ವಿತೀಯ ಪಿಯುಸಿ ಪರೀಕ್ಷೆ ನಡೆಯಲಿದ್ದು, ಇದುವರೆಗೆ ಮಾಡಿದ ತಯಾರಿಯ ಪರಿಪೂರ್ಣವಾಗಿದ್ದು, ಇದರ ಆಧಾರದ ಮೇಲೆ ಇನ್ನಷ್ಟ ಶ್ರಮದಿಂದ ಭಯ ಪಡೆದ ಧೈರ್ಯದಿಂದ ಪರೀಕ್ಷೆಯನ್ನು ಎದುರಿಸಿ ಎಂದರು.

### 26 ರಂದು ಪೋಚಮ್ಮದೇವಿ ಕಾಂಡ

• ಉದಯವಾಹಿನಿ, ಜೇವರ್ಗಿ

ಶಿವರಾತ್ರಿ ನಿಮಿತ್ಯವಾಗಿ 26 ರಂದು ಪೋಚಮ್ಮದೇವಿ ಕಾಂಡ ಮತ್ತು ರೇಣುಕಾ ಯಲ್ಲಮ್ಮ ದೇವಿಯ ನಾಟಕ ಪ್ರದರ್ಶನ ಹಮ್ಮಿಕ್ಕೊಳ್ಳಲಾಗಿದೆ ಎಂದು ಮಲ್ಲು ಸರಡಗಿ, ಸಿದ್ದು ಗುಳ್ಯಾಳ, ನಾರಾಯಣ ಸ್ವಾಮಿ ಮತ್ತು ತಿಪ್ಪಣ್ಣ ಮುಡಬೂಳ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪಟ್ಟಣದ ಶಾಸ್ತ್ರಿ ಚೌಕ ಬಡಾವಣೆಯ ಶ್ರೀ ಪೋಚಮ್ಮ ದೇವಿ ದೇವಸ್ಥಾನದ ಹತ್ತಿರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು.

ಇದೆ ತಿಂಗಳ 26 ಬುಧವಾರದಂದು ಪೋಚಮ್ಮ ದೇವಿಯ ಕಾಂಡ ಮಾಡಲಾಗುತ್ತಿದೆ. ಶೀವರಾತ್ರಿ ನಿಮಿತ್ಯವಾಗಿ ಬೆಳಿಗ್ಗೆ ವಿಶೇಷ ಪೂಜೆ ನಡೆಯಲಿದೆ. ಸಂಜೆ ಶ್ರೀ ರೇಣುಕಾ ಯಲ್ಲಮ್ಮ ದೇವಿಯ ನಾಟಕ ಪ್ರದರ್ಶನ ನಡೆಯಲಿದೆ. 27 ಗುರುವಾರದಂದು ಅನ್ನಪ್ರಸಾದ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಶಾಸಕ ಡಾ. ಅಜಯಸಿಂಗ್, ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಬಿಜೆಪಿ ಮುಖಂಡ ಶಿವರಾಜ ಪಾಟೀಲ್ ರದ್ದೆವಾಡಗಿ, ರಾಜಶೇಖರ ಸೀರಿ, ಮರೆಪ್ಪ ಬಡಿಗೇರ, ರಾಮಣ್ಣ ಪೂಜಾರಿ, ಪುರಸಭೆ ಅಧ್ಯಕ್ಷ ಗುರುಲಿಂಗಪ್ಪಗೌಡ ಮಾಲಿಪಾಟೀಲ್ ಸೇರಿದಂತೆ ಅನೇಕರು ಬಾಗವಹಿಸಲಿದ್ದರೆ.

## 2024-25ನೇ ಸಾಲಿನ ವಾಹನಗಳ ಸಂಚಾರ ಗಣತಿ

• ಉದಯವಾಹಿನಿ ಧಾರವಾಡ




ಉದಯವಾಹಿನಿ ಚಿತ್ರ

2024-25 ನೇ ಸಾಲಿನ ರಸ್ತೆ ಸಂಚಾರ ಗಣತಿಯನ್ನು ಸತತವಾಗಿ ಏಳು ದಿನಗಳ ಕಾಲ ಇಲಾಖೆಯ ಎಲ್ಲಾ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಕೈಗೊಳ್ಳಲಾಯಿತು. ಈ ಸಮೀಕ್ಷೆಯಿಂದ ಸಂಗ್ರಹಿಸಲಾಗುವ ರಸ್ತೆಯ ವಾಹನ ಸಾಂದ್ರತೆ, ರಸ್ತೆಯನ್ನು ಉಪಯೋಗಿಸುವ ಸವಾರರ ಸಂಖ್ಯೆ. ರಸ್ತೆಯ ಸಂಚಾರ ತೀವ್ರತೆಯಂತಹ ಉಪಯುಕ್ತ ಮಾಹಿತಿಯಿಂದ ಮುಂಬರುವ ದಿನಮಾನಗಳಲ್ಲಿ ಕೈಗೊಳ್ಳಲಾಗುವ ರಸ್ತೆಯ ಅಗಲೀಕರಣ, ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ ಅಭಿವೃದ್ಧಿ ಯೋಜನೆಗಳ ಮುಖಾಂತರ ರಸ್ತೆಗಳನ್ನು ಉತ್ತಮ ಸಂಚಾರಕ್ಕೆ ಅನುವು ಮಾಡಿ ಕೊಡಲು ಅನಕೂಲಕರವಾಗಿರುತ್ತವೆ.

ಪ್ರಸ್ತುತ ಗಣತಿಯನ್ನು ಲೋಕೋಪಯೋಗಿ ಇಲಾಖೆಯ ರಸ್ತೆಗಳ ಬದಿಗಳಲ್ಲಿ ತಾತ್ಕಾಲಿಕವಾಗಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಫೆಬ್ರವರಿ 19, 2025 ರಂದು ಉತ್ತರವಲಯದ ಇಲಾಖೆಯ ಮುಖ್ಯ ಇಂಜಿನಿಯರ್ ಎಚ್.ಸುರೇಶ, ಧಾರವಾಡ ವೃತ್ತದ ಅಧೀಕ್ಷಕ ಇಂಜಿನಿಯರ್ ಸಂಜೀವ ಕುಮಾರ ಹುಲಕಾಯಿ ಹಾಗೂ ಧಾರವಾಡ ವಿಭಾಗದ ಕಾರ್ಯನಿರ್ವಾಹಕ ಇಂಜನೀಯರ ಪ್ರಶಾಂತ ಪಿ.ಆರ್., ಇವರು ಜಂಟಿಯಾಗಿ ಧಾರವಾಡ ತಾಲ್ಲೂಕಿನ ರಾಜ್ಯ ಹೆದ್ದಾರಿ -28 ರ ಸೂಪಾ ಅಣ್ಣಿಗೇರಿ ರಸ್ತೆ ಕಿ.ಮೀ. 64.20 ತಪೋವನ ಕ್ರಾಸ್‌ನಲ್ಲಿ ಅಳವಡಿಸಲಾದ ಗಣತಿ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

## ಎಸ್‌ಸಿಪಿ-ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆ

• ಉದಯವಾಹಿನಿ, ಯಾದಗಿರಿ



ಉದಯವಾಹಿನಿ ಚಿತ್ರ

**ಕಾಲಮಿತಿಯಲ್ಲಿ ಆರ್ಥಿಕ ಪ್ರಗತಿ ಸಾಧಿಸುವ ಮೂಲಕ ವ್ಯಕ್ತಿಗತ ಸೌಲಭ್ಯ ಕಲ್ಪಿಸಿ -ಡಾ. ಸುಶೀಲಾ ಬಿ.**

ವಿಶೇಷ ಘಟಕ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಆಯಾ ಇಲಾಖೆಗೆ ಪ್ರಸಕ್ತ 2024-25ನೇ ಸಾಲಿಗೆ ಹಂಚಿಕೆಯಾದ ಅನುದಾನವನ್ನು ಕಾಲಮಿತಿಯಲ್ಲಿ ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧಿಸುವ ಮೂಲಕ ವ್ಯಕ್ತಿಗತ ಸೌಲಭ್ಯವನ್ನು ಸಮುದಾಯದ ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ. ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೃಷಿ ಇಲಾಖೆ ಮೂಲಕ ಬೀಜಗಳ ಪೂರೈಕೆ ಕಾರ್ಯಕ್ರಮ, ಕೃಷಿ ಉತ್ಪನ್ನಗಳ ಸಂಸ್ಕರಣೆ, ಸಾವಯವ ಇಂಗಾಲ ಹೆಚ್ಚಿಸುವಿಕೆ ಅಭಿಯಾನ, ಕೃಷಿ ಭಾಗ್ಯ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಅಂತಿಮಗೊಳಿಸಿ ಸೌಲಭ್ಯ ನೀಡಬೇಕು ಎಂದರು.

ರೈತ ಸಮುದಾಯ ಕೇಂದ್ರಿತ ಇಲಾಖೆಗಳಾದ ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಇಲಾಖೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆ ಸರ್ಕಾರ ರೂಪಿಸಿರುವ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಬೇಕು ಎಂದ ಅವರು, ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ಕೂಲಂಕುಷವಾಗಿ ಕೈಗೊಂಡರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚನ್ನಬಸಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವೀರನಗೌಡ, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕ ರಾಜು ದೇಶಮುಖ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಸೇರಿದಂತೆ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಿಸಿ ರಸ್ತೆ ಕ್ರಿಯಾಯೋಜನೆಗೆ ತಕ್ಕಂತೆ ಕೆಲಸ ಮಾಡುವಂತೆ ಕೇಳಿದಕ್ಕೆ ಬಿಜೆಪಿ ಕಾರ್ಯಕರ್ತರ ಮೇಲೆ ದಬ್ಬಾಳಿಕೆ, ಸಚಿವರ ಅಧಿಕಾರಿಗಳ ಕುಮ್ಮಕ್ಕು: ಶರಣು ಮೆಡಿಕಲ್ ಆರೋಪ

• ಉದಯವಾಹಿನಿ, ಚಿಂಚೋಳಿ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಗಣಾಪೂರದಲ್ಲಿ ನಿರ್ಮಿಸುತ್ತಿದ ಎಸ್.ಸಿ.ಪಿ ಯೋಜನೆಯ ಸಾರ್ವಜನಿಕ ಸೀಮೆ ಹಣಾದಿಯ ಸಿಸಿರಸ್ತೆ ಕಾಮಗಾರಿಯ ಸ್ಥಳ ಪರಿಶೀಲನೆ ಮಾಡದೆ ಅಂದಾಜು ಪ್ರತಿ ತೈಯಾರು ಮಾಡಿದ ಅಧಿಕಾರಿಯ ವಿರುದ್ಧ ಸೂಕ್ತ ಕ್ರಮ ತೆಗೆದುಕೊಂಡು ಹಿಂದೆ ಮಾಡಿದ ಸಿಸಿರಸ್ತೆ ಸಮಾನವಾಗಿ ಮಾಡಿ ಹಾಗೂ ಕೆಲವರು ಹಣಾದಿ ಒತ್ತುವರಿ ಮಾಡಿಕೊಂಡಿದ್ದು ತೆರವುಗೊಳಿಸಿವವರೆಗೆ ಸಿಸಿರಸ್ತೆ ಕಾಮಗಾರಿ ನಿಲ್ಲಿಸುವಂತೆ ಜಿಲ್ಲಾಧಿಕಾರಿಗಳು, ತಹಸೀಲ್ದಾರ್, ಸಹಾಯಕ ಆಯುಕ್ತರು, ಎಇ, ಎಇಇ, ಎಲ್ಲಾ ಅಧಿಕಾರಿಗಳಿಗೂ ದೂರು ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಆದರೆ ಗ್ರಾಮಸ್ಥರು ಬಿಜೆಪಿ ಕಾರ್ಯಕರ್ತರು ಸಿಸಿರಸ್ತೆ ಕಾಮಗಾರಿ ಚನ್ನಾಗಿ ಮಾಡಿ ಎಂದು ಹೇಳಿದಕ್ಕೆ ಸಚಿವರ ಕುಮ್ಮುಕ್ಕಿನಿಂದ ಬಿಜೆಪಿ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದು ಸೇಡಂ ಬಿಜೆಪಿ ಮಂಡಲ ಅಧ್ಯಕ್ಷ ಶರಣು ಮೆಡಿಕಲ್ ಆರೋಪಿಸಿದ್ದಾರೆ. ನಗರದ ಹೊರವಲಯದಲ್ಲಿರುವ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ,2020ರಲ್ಲಿ ಸಿಸಿರಸ್ತೆ 2 ಅಡಿ ಎತ್ತರ ಮಾಡಲಾಗಿದ್ದು ಈಗ ಮಾಡುತ್ತಿರುವ ರಸ್ತೆ ಕೇವಲ 6 ಇಂಚು ಹಾಗಾಗಿ ರಸ್ತೆ ಕೆಳಗೆ ಮೇಲೆ ಆಗುತ್ತಿರುವುದರಿಂದ ಚರಂಡಿ ನೀರು ರಸ್ತೆಮೇಲೆ ನಿಲ್ಲುವ ಅವಕಾಶವಿದ್ದು ರಸ್ತೆ ಹಿಂದಿನ ರಸ್ತೆಯ ಸಮಾನವಾಗಿ ಮಾಡಿ ಎಂದು ಗ್ರಾಮಸ್ಥರು ಬಿಜೆಪಿಯ ಕಾರ್ಯ ಕರ್ತರು ಹೇಳಿದಕ್ಕೆ ಸಚಿವರ ಕುಮ್ಮುಕ್ಕಿನಿಂದ ಕಾಂಗ್ರೇಸ್ ಕಾರ್ಯಕರ್ತರು ಬಿಜೆಪಿಗರ ಮೇಲೆ ನಿರಂತರ ದಬ್ಬಾಳಿಕೆ ನಡೆಸುತ್ತಿದ್ದಾರೆ ತಕ್ಷಣವೇ ಸರ್ಕಾರ ಮತ್ತು ಜಿಲ್ಲಾಧಿಕಾರಿಗಳು ಏಚ್ಚೆತುಕೊಂಡು ಸಂಬಧಪಟ್ಟ ಅಧಿಕಾರಿಗಳಿಗೆ ಅಮಾನತು ಮಾಡಬೇಕು ಮತ್ತು ಸುಳ್ಳು ಪ್ರಕರಣ ದಾಖಲು ಮಾಡಿದ್ದು ರದ್ದು ಪಡಿಸಬೇಕು ಎಂದು ಒತ್ತಾಯಿಸಿದರು. ಗಣಾಪೂರದಿಂದ ತೆಲಂಗಾಣ ಹೋಗುವ ಹಣಾದಿ 7ಕಿಮೀ ಫೀಸ್ ವರ್ಕ್ ಕೆಲಸ ಇಟ್ಟಿದ್ದಾರೆ ಒತ್ತುವರಿ ಕೂಡ ಆಗಿದ್ದು ಸರ್ವೆ ಕೆಲಸ ಮುಗಿದ ನಂತರ ಸಿಸಿರಸ್ತೆ ಮಾಡಬೇಕು ಎಂದಿದಕ್ಕೆ ಬಿಜೆಪಿಯ ದೌಲಪ್ಪ ನವದಗಿ, ಶೇಖಪ್ಪ, ಬಾಬುಮಿಯ್ಯ, ಪಿತಾಂಬರ್ ನಾಲ್ಕು ಜನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಬಿಜೆಪಿಗರಿಗೆ ಅಂಜಿಸುವ ತಂತ್ರ ದಬ್ಬಾಳಿಕೆ ಮಾಡುವ ಕೆಲಸ ಸೇಡಂ ವಿಧಾನಸಭಾ ಮತಕ್ಷೇತ್ರದಲ್ಲಿ ನಿರಂತವಾಗಿ ನಡೆಯುತ್ತಿದೆ ಎಂದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅತೀಷ್ ಪವ್ವಾರ, ಬಿಜೆಪಿ ಚಿಂಚೋಳಿ ಮಂಡಲ ಅಧ್ಯಕ್ಷ ವಿಜಯಕುಮಾರ ಚೇಂಗಟಾ, ಸುರೇಶ ವೈದ್ಯ ರಾಜ, ರುದ್ರಮುನಿ ರಾಮತೀರ್ಥಕರ್, ಬಸಪ್ಪಾ ಕರ್ಚಖೇಡ, ಸಂಜುಕುಮಾರ, ನಸಿರೋದ್ದಿನ್, ಅಶೋಕ, ಶಂಕ್ರಯ್ಯಸ್ವಾಮಿ, ಭದ್ರಪ್ಪಾ ಗುಲಗಂಜಿ, ಅನೇಕರಿದ್ದರು.

### ಫೆ.28ರಂದು ಬೃಹತ್ ಪ್ರತಿಭಟನೆ

ಇದನ್ನು ಖಂಡಿಸಿ ಇದೆ ಫೆ.28ರಂದು ಸುಲೇಪೇಟ ಬಸವೇಶ್ವರ ವೃತ್ತದಲ್ಲಿ ಸೇಡಂ ಮಾಜಿ ಶಾಸಕರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ರಸ್ತಾರೋಕೊ ಮಾಡುತ್ತಿದ್ದೇವೆ ಅನ್ಯಾಯದ ವಿರುದ್ಧ ನ್ಯಾಯಕ್ಕಾಗಿ ಮಾಡುತ್ತಿದ್ದು ಬಿಜೆಪಿ ಮುಖಂಡರು ಸಾರ್ವಜನಿಕರು ನ್ಯಾಯಕ್ಕಾಗಿ ಪ್ರತಿಭಟನೆ ಆಗಮಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ.

## ಕಬ್ಬು ಬೆಳೆ ಎಕರೆಗೆ 100 ಟನ್ ಇಳುವರಿ ಪ್ರಯತ್ನ ಅಗತ್ಯ

• ಉದಯವಾಹಿನಿ, ಇಂಡಿ





ಉದಯವಾಹಿನಿ ಚಿತ್ರ

ಇಂಡಿ ತಾಲ್ಲೂಕಿನಲ್ಲಿ ರೈತರು ಒಂದು ಎಕರೆ ಕಬ್ಬು ಪ್ರದೇಶದಲ್ಲಿ ಕೇವಲ 30 ರಿಂದ 40 ಟನ್ ಇಳುವರಿ ಮಾತ್ರ ಕಬ್ಬು ಬೆಳೆ ಪಡೆಯುತ್ತಿದ್ದು ಪ್ರತಿ ಎಕರೆಗೆ 100 ಟನ್ ಇಳುವರಿ ಪಡೆಯಲು ಪ್ರಯತ್ನಿಸುವ ಅಗತ್ಯತೆ ಇದೆ ಎಂದು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಶಿವಶಂಕರಮೂರ್ತಿ ಹೇಳಿದರು.

ಪಟ್ಟಣದ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕಬ್ಬಿನಲ್ಲಿ ಸಮಗ್ರ ಬೆಳೆ ನಿರ್ವಹಣೆ ಹಾಗೂ ಅತ್ಯಾಧಿಕ ಇಳುವರಿ ಮತ್ತು ಕಿಸಾನ ಸಮ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಕಬ್ಬು ಬೆಳೆಗೆ ಮಣ್ಣು ಪರೀಕ್ಷೆ ಮತ್ತು ಮಣ್ಣಿನಲ್ಲಿ ಸವಳು ಅಥವಾ ಪಿಎಚ್ ಪರೀಕ್ಷೆಗಳು ಮುಖ್ಯ. ಅದರ ಆಧಾರದ ಮೇಲೆ ಇಳುವರಿ ಹೆಚ್ಚು ಬರುವ ಹಾಗೆ ವ್ಯವಸ್ಥೆ ಮಾಡಬೇಕು. ಕಬ್ಬು ಗಾಳಿ ಮತ್ತು ಬೆಳಕು ಬಯಸುವ ಬೆಳೆ. ಹಾಗಿದ್ದರೆ ಮಾತ್ರ ಪ್ರತಿ ಕಬ್ಬಿನ ತೂಕವೂ ಹೆಚ್ಚು ಬರುತ್ತದೆ. ಗ್ಲೂಕೋಸ್ ಮತ್ತು ಸಾರಜನಕ ಪೂರೈಕೆ ಇದ್ದರೆ ಮೊಳಕೆ ಬರುತ್ತದೆ. 30 ರಿಂದ 120 ದಿನಗಳ ವರೆಗೆ ಮರಿ ಒಡೆಯುವ ಹಂತ. ಆಗ ನೀರು ಕಡಿಮೆ ಬಿಡಬೇಕು. ರಂಜಕ, ಸಾವಯುವ ತಿಪ್ಪೆ ಗೊಬ್ಬರ, ಡಿಎಪಿ ಸರಿಯಾದ ವೇಳೆಯಲ್ಲಿ ನೀಡಬೇಕು ಎಂದರು. ಜೈವಿಕ ಜೀವಾಣು ಎಕರೆಗೆ ಅಜೋಸ್ಪರಿಲಂ ಅಜಟೊಬ್ಯಾಕ್ಟಾರ್ ಪ್ರತಿ ಎಕರೆಗೆ 4 ಕೆಜಿ ಮತ್ತು ಡಿ.ಎಸ್.ಬಿ, ಕೆ.ಎಸ್.ಬಿ, ಪ್ರತಿ ಎಕರೆಗೆ 4 ಕೆಜಿ ನೀಡಬೇಕು. ಪೋಷಕಾಂಶಗಳ ಸಿಂಪರಣೆ, ಬಯೋಜಮ ಹರಳು ಮತ್ತು ಜೀವಾಮೃತ ದ್ರವರೂಪದ ಗೊಬ್ಬರ ನೀಡುವದರಿಂದ ಕಬ್ಬಿನ ಬೆಳೆಯಲ್ಲಿ ಅಧಿಕ ತೂಕ ಪಡೆಯಬಹುದು ಎಂದರು.

ಕೃಷಿ ವಿದ್ಯಾಲಯದ ಸಲಹಾ ಸಮಿತಿ ಸದಸ್ಯ ನಿಂಗನಗೌಡ ಪಾಟೀಲ, ಸಾವಯುವ ರೈತ ಎಸ್.ಟಿ.ಪಾಟೀಲ, ಡಾ. ಪ್ರಸಾದ ಮತ್ತು ಡಾ. ವೀಣಾ ಚಂದಾವರಿ ಮಾತನಾಡಿದರು. ಇದೇ ವೇಳೆ ಪ್ರಗತಿ ಪರ ರೈತರಾದ ಸುನೀಲ ನಾರಾಯಣಕರ, ಶಿವು ಕುಂಬಾರ, ರಮೇಶ ದೇಸಾಯಿ, ಬಸೀರ್ ಅಹಮ್ಮದ ಬಳಿಗಾರ, ರೇವತಿ ಮಜ್ಜಗೆ, ರಾಯಪ್ಪ ಹರಳಯ್ಯ ಇವರನ್ನು ಸನ್ಮಾನಿಸಲಾಯಿತು.

## ಶಾಲೆಗೆ ಮಾಟ ಮಂತ್ರ ದೇವಸ್ಥಾನದಲ್ಲಿ ಪಾಠ ಮಾಡುತ್ತಿರುವ ಶಿಕ್ಷಕರು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಸೇಡಂ

ತಾಲ್ಲೂಕಿನ ಬೀಜನಳ್ಳಿ ಗ್ರಾಮದಲ್ಲಿರುವ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಗಳ ಮುಂದೆ ನಿಂಬೆ ಕುಂಕುಮದಿಂದಾ ಪೂಜೆ ಮಾಡಿದ್ದರಿಂದ ಶಿಕ್ಷಕರು ಶಾಲಾ ಮಕ್ಕಳು ಬೆದರಿದ್ದು, ಪಕ್ಕದಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಕ್ಕಳಿಗೆ ಪಾಠ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ, ಮಾಡಿದವರ ವಿರುದ್ಧ ಗ್ರಾಮಸ್ಥರು ತೀವ್ರವಾಗಿ ಖಂಡಿಸಿದ್ದಾರೆ. ಶಿಕ್ಷಣ ಇಲಾಖೆ ಪೊಲೀಸ್ ಇಲಾಖೆಯು ತಕ್ಷಣ ತಪ್ಪಿತಸ್ಥರನ್ನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

## ಅಂಬೇಡ್ಕರ್‌ರಿಗೆ ಅವಹೇಳನ: ಓರ್ವನ ಬಂಧನ

• ಉದಯವಾಹಿನಿ, ಚಿತ್ತಾಪುರ

ಸಂವಿಧಾನ ಶಿಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಕುರಿತು ಅವಹೇಳನ ಹಾಗೂ ಅನ್ಯ 'ಧರ್ಮಿಯರ ಕುರಿತು ಟೀಕೆ ಮತ್ತು ದಲಿತರಿಗೆ ಜಾತಿ ನಿಂದನೆ' ಮಾಡಿದ ಆರೋಪದ ಮೇಲೆ ಪೊಲೀಸರು ಆರೋಪಿಯೊಬ್ಬನಿಗೆ ಬಂಧಿಸಿದ್ದಾರೆ. ಬಂಧಿತನು ತಾಲ್ಲೂಕಿನ ದಂಡೋತಿ ಗ್ರಾಮದ ಹಿಟ್ಟಿನ ಗಿರಣಿ ವ್ಯಾಪಾರಿ ಮತ್ತು ರೇಷನ್ ಡೀಲರ್ ಜಗನ್ನಾಥ್ (ತಂದೆ:ಶಿವುಕುಮಾರ್ ಗಾಣಿಗೇರ್)(32) ಎಂದು ಗುರುತಿಸಲಾಗಿದೆ.




ಉದಯವಾಹಿನಿ ಚಿತ್ರ

ಪತ್ರಕರ್ತ ಪೃಥ್ವಿರಾಜ್ ತಂದೆ ಉದಯಕುಮಾರ್. ಸಾಗರ್ ಅವರು ನೀಡಿದ ದೂರಿನ ಮೇಲೆ ಪೊಲೀಸರು ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಟ್ಟಣದ ಮಳಖೇಡದ ರಸ್ತೆಯಲ್ಲಿರುವ ಐಬಿ ಗೋಪಾಲ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಒಬ್ಬ ವ್ಯಕ್ತಿಯು ಅಂಬೇಡ್ಕರ್ ಅವರ ಕುರಿತು ಅವಹೇಳನಕಾರಿಯಾಗಿ ತನ್ನ ಮೊಬೈಲ್‌ನಲ್ಲಿ ಧ್ವನಿ ಸಂದೇಶವನ್ನು ಮಾಡಿ ಯಾರಿಗೋ ಕಳಿಸುತ್ತಿದ್ದಾಗ ಅಲ್ಲಿಯೇ ಇದ್ದ ಅಭಿಷೇಕ್ ಆಕ್ಷೇಪಿಸಿದಾಗ ಆತ ಕಿರಿಕಿರಿ ಮಾಡಿರುವ ಕುರಿತು ಪರಿಚಯಸ್ಥ ವಿಜಯ್ ಕಲ್ಲಕ್ ಪತ್ರಕರ್ತ ಪೃಥ್ವಿರಾಜ್ ಅವರಿಗೆ ತಿಳಿಸಿದ್ದಾನೆ.

## ಅಭಿವೃದ್ಧಿಗೆ ಹಣ ಬಿಡುಗಡೆ ಮಾಡದ ಡಿಸಿ: ಎಚ್.ಡಿ.ರೇವಣ್ಣ ಗರಂ

• ಉದಯವಾಹಿನಿ, ಹಾಸನ



**ಉಗ್ರ ಹೋರಾಟದ ಎಚ್ಚರಿಕೆ**

ಡಿಸಿ ಖಾತೆಗೆ ಸರ್ಕಾರದಿಂದ ಹಾಕಿರುವ ಹಣ ಜಿಲ್ಲಾ ಅಭಿವೃದ್ಧಿಗೆ ಬಿಡುಗಡೆ ಮಾಡುತ್ತಿಲ್ಲ. ಖಜಾನೆಯಲ್ಲಿ ಇಟ್ಟುಕೊಂಡು ಹಣ್ಣು ಇಟ್ಟು, ಕಾಯಿ ಹೊಡೆದು, ದೀಪ ಹಚ್ಚಿ ಪೂಜೆ ಮಾಡಲಿ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದು ಹೋಗಿದೆ.

ಸರ್ಕಾರ ಜಿಲ್ಲೆಗೆ ಅತಿವೃಷ್ಟಿ ಪರಿಹಾರವಾಗಿ 12 ಕೋಟಿ ಹಣ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿಗಳು ಅದನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ರಸ್ತೆ ಗುಂಡಿ ಮುಚ್ಚಲು ಜಿಲ್ಲಾಧಿಕಾರಿ ಹಣ ಕೊಡುತ್ತಿಲ್ಲ. ಬಿಡುಗಡೆಯಾಗಿರುವ ಹಣವನ್ನು ಖಜಾನೆಯಲ್ಲಿ ಇಟ್ಟುಕೊಂಡಿದ್ದಾರೆ ಇದೇ ರೀತಿ ಮುಂದುವರೆದರೆ ಜಿಲ್ಲಾಧಿಕಾರಿ ಕಚೇರಿ ಎದುರು ಉಗ್ರ ಹೋರಾಟ ಮಾಡುತ್ತೇನೆ ಎಂದು ಎಚ್ಚರಿಸಿದರು.

ರಾಜ್ಯ ಸರ್ಕಾರ ಸಂಪೂರ್ಣ ದ್ವೇಷದ ರಾಜಕಾರಣ ಮಾಡುತ್ತಿದೆ. ಜಿಲ್ಲೆಯಲ್ಲಿ ಕಾಮಗಾರಿಗಳೆಲ್ಲ ನಿಂತು ಹೋಗಿದೆ. ಹಾಸನ ವಿಶ್ವವಿದ್ಯಾಲಯ ಮುಚ್ಚಲು ಹೊರಟಿದ್ದಾರೆ. ಮುಚ್ಚುವ ಬದಲು ಅದಕ್ಕೆ ಬೇಕಾದ ಸೌಲಭ್ಯ ಒದಗಿಸಲಿ ಎಂದು ಒತ್ತಾಯಿಸಿದರು.

ಹಾಸನ ಜಿಲ್ಲಾ ಆಸ್ಪತ್ರೆಯಲ್ಲಿ ಲೂಟಿ ನಡೆಯುತ್ತಿದ್ದು ಹಿಮ್ಸ್ ನಿರ್ದೇಶಕರ ಮಾತು ನಡೆಯುತ್ತಿಲ್ಲ. ಹಾಸನ ಕೃಷಿ ಕಾಲೇಜನ್ನು ಮಂಡ್ಯ ಯುನಿವರ್ಸಿಟಿಗೆ ಸೇರಿಸುತ್ತಿದ್ದೀರಿ. ಕೃಷಿ ಕಾಲೇಜು, ಬೆಂಗಳೂರು ಯೂನಿವರ್ಸಿಟಿ ವ್ಯಾಪ್ತಿಯಲ್ಲಿ ಇರಲಿ ಎಂದು ಆಗ್ರಹಿಸಿದ ಅವರು. ವಿಧಾನಸಭೆ ಅಧಿವೇಶನದಲ್ಲಿ ಈ ಬಗ್ಗೆ ಹೋರಾಟ ಮಾಡುತ್ತೇನೆ. ಜೆಡಿಎಸ್ ನ ನಾಲ್ಕು ಶಾಸಕರು ಒಟ್ಟಾಗಿ ಇದನ್ನು ಪ್ರಶ್ನೆ ಮಾಡುತ್ತೇವೆ ನಮ್ಮ ಹೋರಾಟಕ್ಕೆ ಬಿಜೆಪಿ ಶಾಸಕರ ಸಹಕಾರವು ಕೋರುತ್ತೇನೆ ಎಂದರು.


> ಕುಮಾರಸ್ವಾಮಿಗೆ ಮಂಡ್ಯ ಜಿಲ್ಲೆ ಜನರು ರಾಜಕೀಯವಾಗಿ ಶಕ್ತಿ ಕೊಟ್ಟಿದ್ದಾರೆ. ಮಂಡ್ಯಕ್ಕೆ ಏನು ಮಾಡಿದ್ದೇನೆ ಎಂದು ಚರ್ಚೆಗೆ ಬರಲಿ ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿಗೆ ರೇವಣ್ಣ ತಿರುಗೇಟು ನೀಡಿದ ಅವರು, ಅಭಿವೃದ್ಧಿ ಮಾಡಲಿ ಇಲ್ಲ, ಜನರು ನಮಗೆ ಶಕ್ತಿ ಕೊಟ್ಟಾಗ ಮಾಡುತ್ತೇವೆ -ಎಚ್.ಡಿ.ರೇವಣ್ಣ

# ಗಂಡಸರಿಂದ ಲೂಟಿ ಮಾಡಿ ಹೆಂಗಸರಿಗೆ ಹಂಚುವುದೇ ಗ್ಯಾರಂಟಿ ಯೋಜನೆ

● ಕಾಂಗ್ರೇಸ್ ಸರ್ಕಾರ ಗ್ಯಾರಂಟಿ ಯೋಜನೆ ಜಪ ಬಿಡಲಿ: ಜೆಡಿಎಸ್ ಶಾಸಕ ಸುರೇಶ್ ಬಾಬು

• ಉದಯವಾಹಿನಿ, ಧಾರವಾಡ

- ಗ್ಯಾರಂಟಿ ಯೋಜನೆಗಳ ಬಗ್ಗೆ ಜೆಡಿಎಸ್ ಶಾಸಕ ಸುರೇಶ್ ಬಾಬು ಕಿಡಿ
- 'ಗಂಡಸರಿಂದ ಹಣ ಕಿತ್ತು ಹೆಂಗಸರಿಗೆ ಕೊಡುವುದರಲ್ಲಿ ಅರ್ಥವಿಲ್ಲ'
- ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆ ಜಪ ಬಿಡಲಿ ಎಂದ ಸುರೇಶ್ ಬಾಬು
- ಜೆಡಿಎಸ್-ಬಿಜೆಪಿ ಮೈತ್ರಿ ಗಟ್ಟಿಯಾಗಿದೆ ಎಂದ ಸುರೇಶ್ ಬಾಬು



ಉದಯವಾಹಿನಿ ಚಿತ್ರ

**ಸರ್ಕಾರದ ಬಳಿ ಹಣವೇ ಇಲ್ಲ**

ರಾಜ್ಯ ಕಾಂಗ್ರೇಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿರುವ ಜೆಡಿಎಸ್ ಶಾಸಕ ಸುರೇಶ್ ಬಾಬು, ಕಾಂಗ್ರೇಸ್ ಸರ್ಕಾರ ಕೇವಲ ಗ್ಯಾರಂಟಿ ಯೋಜನೆಗಳಿಗೆ ಮಾತ್ರ ಒತ್ತು ನೀಡುತ್ತಿದೆ ಎಂದು ಆರೋಪ ಮಾಡಿದ್ದಾರೆ.

ಧಾರವಾಡದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಭಿವೃದ್ಧಿ ಯೋಜನೆಗಳನ್ನು ಮರೆತಿರುವ ಕಾಂಗ್ರೇಸ್ ಸರ್ಕಾರ ಕೇವಲ ಗ್ಯಾರಂಟಿ ಜಪ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೇಸ್ ಸರ್ಕಾರ ಗಂಡಸರಿಂದ ಹಣ ಲೂಟಿ ಮಾಡಿ, ಅದನ್ನೇ ರಾಜ್ಯದ ಮಹಿಳೆಯರಿಗೆ ಗ್ಯಾರಂಟಿ ರೂಪದಲ್ಲಿ ನೀಡುತ್ತಿದೆ. ಇದನ್ನೇ ದೊಡ್ಡ ಅಭಿವೃದ್ಧಿಯಂತೆ ಬಿಂಬಿಸಲಾಗುತ್ತಿದ್ದು, ಅಸಲು ಅಭಿವೃದ್ಧಿ ಕಾರ್ಯಗಳಿಗೆ ರಾಜ್ಯ ಸರ್ಕಾರದ ಬಳಿ ಹಣವೇ ಇಲ್ಲ.. ಎಂದು ಜೆಡಿಎಸ್ ಶಾಸಕ ಸುರೇಶ್ ಬಾಬು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ರಾಜ್ಯ ಕಾಂಗ್ರೇಸ್ ನಾಯಕರು ಗ್ಯಾರಂಟಿ ಯೋಜನೆಗಳ ಹೊರತಾಗಿ ಬೇರೆ ಏನನ್ನೂ ಮಾತನಾಡುತ್ತಿಲ್ಲ. ಬೇರೆ ಏನನ್ನು ಮಾತ ನಾಡಲು ಅವರ ಬಳಿ ವಿಷಯಗಳೇ ಇಲ್ಲ.

ಬೆಂಗಳೂರು ಅಭಿವೃದ್ಧಿ ಅಸಾಧ್ಯ ಎಂದು ಒಂದು ಸಾಲಿನ ಹೇಳಿಕೆ ನೀಡುವ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಗ್ಯಾರಂಟಿ ಯೋಜನೆಗಳ ಬಗ್ಗೆ ಗಂಟೆಗಟ್ಟಲೇ ಮಾತನಾಡುತ್ತಾರೆ. ಕಾಂಗ್ರೇಸ್ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿ ಎನ್ನುವುದು ಮರೀಚಿಕೆಯಾಗಿದೆ.. ಎಂದು ಜೆಡಿಎಸ್ ಶಾಸಕ ಹರಿಹಾಯ್ದರು.

ಭಗವಂತ ಕೆಳಗಿಳಿದು ಬಂದರೂ ಬೆಂಗಳೂರನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಈ ಮೂಲಕ ರಾಜಧಾನಿ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಬಳಿ ಹಣವಿಲ್ಲ ಎಂದು ಅವರೇ ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ.

ಎಲ್ಲಾವನ್ನೂ ಗ್ಯಾರಂಟಿ ಯೋಜನೆಗಳಿಗೆ ಸುರಿದರೆ, ಇತರ ಅಬಿವೃದ್ಧಿ ಕಾರ್ಯಗಳಿಗೆ ಹಣ ಎಲ್ಲಿಂದ ಬರುತ್ತದೆ ಎಂದು ಸುರೇಶ್ ಗೌಡ ಖಾರವಾಗಿ ಪ್ರಶ್ನಿಸಿದರು.


ರಾಜ್ಯ ಕಾಂಗ್ರೇಸ್ ಸರ್ಕಾರದ ವಿರುದ್ಧ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಒಟ್ಟಾಗಿ ಹೋರಾಟ ಮಾಡಲಿದೆ. ಸರ್ಕಾರದ ವಿರುದ್ಧದ ಜನಾಂದೋಲನದ ರೂಪುರೇಷೆಗಳ ಬಗ್ಗೆ ಚರ್ಚಿಸಲು ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಮತ್ತು ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಸಭೆ ನಡೆಸಲಿದ್ದಾರೆ.. ಎಂದು ಸುರೇಶ್ ಬಾಬು ಸ್ಪಷ್ಟಪಡಿಸಿದರು.

### ಪಂಚ ಗ್ಯಾರಂಟಿ ಬಡವರಿಗೆ ಓಕೆ ಸ್ಥಿತಿವಂತರಿಗೆ ಯಾಕೆ? ಸರ್ಕಾರದಲ್ಲೇ ಭಿನ್ನ ನಿಲುವು

ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಗಟ್ಟಿಯಾಗಿದ್ದು, ಮುಂದಿನ ಬಜೆಟ್ ಅಧಿವೇಶನದಲ್ಲಿ ಜನವಿರೋಧಿ ರಾಜ್ಯ ಸರ್ಕಾರದ ವಿರುದ್ಧ ಜಂಟಿಯಾಗಿ ಧ್ವನಿ ಎತ್ತಲಾಗುವುದು. ಈ ಕುರಿತು ಉಭಯ ಪಕ್ಷಗಳ ನಾಯಕರು ಚರ್ಚೆ ನಡೆಸುತ್ತಿದ್ದು, ಅಧಿವೇಶನದಲ್ಲಿ ಕಾಂಗ್ರೇಸ್ ಸರ್ಕಾರದ ವೈಫಲ್ಯದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಟ ನಡೆಸಲಾಗುವುದು.. ಎಂದು ಸುರೇಶ್ ಬಾಬು ಭರವಸೆ ನೀಡಿದರು.

> ಎಸ್‌ಸಿಪಿ, ಟಿಸಿಪಿಗೆ ಮೀಸಲಾದ ಹಣವನ್ನು ರಾಜ್ಯ ಕಾಂಗ್ರೇಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿದೆ. ಇದು ರಾಜ್ಯದ ಖಜಾನೆ ಸಂಪೂರ್ಣವಾಗಿ ಖಾಲಿಯಾಗಿದೆ ಎಂಬುದಕ್ಕೆ ಸಾಕ್ಷಿ. ಶಾಸಕರ ಅನುದಾನ ಕೊಡಲು ಹಿಂದೇಟು ಹಾಕಲಾಗುತ್ತಿದ್ದು, ಸರ್ಕಾರ ವಾಮ ಮಾರ್ಗದಲ್ಲಿ ಹಣ ಸಂಗ್ರಹಣೆಗೆ ಮುಂದಾಗಿದೆ.. ಎಂದು ಸುರೇಶ್ ಬಾಬು ಇದೇ ವೇಳೆ ಗಂಭೀರ ಆರೋಪ ಮಾಡಿದರು.

# ನಿಗೂಢ ರೋಗಕ್ಕೆ 48 ಗಂಟೆಗಳಲ್ಲೇ 50 ಬಲಿ



**ಕಾಂಗೋ:** ವಾಯುವ್ಯ ಕಾಂಗೋದಲ್ಲಿ ಪತ್ತೆಯಾಗದ ಕಾಯಿಲೆಯೊಂದು ಕಾಣಿಸಿಕೊಂಡ ಕೆಲವೇ ಗಂಟೆಗಳಲ್ಲಿ 50ಕ್ಕೂ ಅಧಿಕ ಜನರು ಮರಣ ಹೊಂದಿರುವುದು ಆತಂಕ ಸೃಷ್ಟಿಸಿದೆ ಎಂದು ಸ್ಥಳೀಯ ವೈದ್ಯರು ಮತ್ತು ವಿಶ್ವ ಆರೋಗ್ಯ ಸಂಸ್ಥೆಯಿಂದ ತಿಳಿದುಬಂದಿದೆ. ಬಹುತೇಕ ಪ್ರಕರಣಗಳಲ್ಲಿ ರೋಗ ಲಕ್ಷಣಗಳು ತಲೆದೋರಿದ 48 ಗಂಟೆಗಳಲ್ಲೇ ಮರಣ ಸಂಭವಿಸಿದೆ ಎಂದು ನಿರ್ವಹಣಾ ಕೇಂದ್ರವಾದ ಬಿಕೋರೋ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಸೆರ್ಗೆ ನಗಾಲೆಬಾತೋ ಅವರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಈ ಕಾಯಿಲೆ ಜನವರಿ 21 ರಿಂದ ಸ್ಫೋಟಗೊಂಡಿದ್ದು ಇದುವರೆಗೆ 419 ಪ್ರಕರಣಗಳು ದಾಖಲಾಗಿವೆ. 53 ಜನರು ಸಾವನ್ನಪ್ಪಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯ ಆಫ್ರಿಕಾ ಕಚೇರಿಯ ಪ್ರಕಾರ ಮೊದಲನೆಯ ಬಾರಿಗೆ ಈ ಕಾಯಿಲೆ ಬಾವಲಿಯನ್ನು ತಿಂದ ಮೂವರು ಮಕ್ಕಳಲ್ಲಿ ಕಾಣಿಸಿಕೊಂಡಿತು. ಈ ಮೂರು ಮಕ್ಕಳು ಮಿದುಳು ಜ್ವರದಂತಹ ಲಕ್ಷಣಗಳಿಂದ 48 ಗಂಟೆಗಳೊಳಗೇ ಮರಣಿಸಿದರು. ವನ್ಯ ಮೃಗಗಳನ್ನು ತಿನ್ನುವ ಪ್ರವೃತ್ತಿ ಹೆಚ್ಚಾಗಿರುವೆಡೆ ಪ್ರಾಣಿಗಳಿಂದ ಮನುಷ್ಯರಿಗೆ ಕಾಯಿಲೆಗಳು ಹರಡುವುದು ಆತಂಕವನ್ನುಂಟುಮಾಡಿದೆ. ಆಫ್ರಿಕಾದಲ್ಲಿ ಇಂಥ ರೋಗಗಳ ಸಾಂಕ್ರಾಮಿಕತೆ ಕಳೆದ ದಶಕದಲ್ಲಿ ಶೇ. 60ಕ್ಕಿಂತ ಹೆಚ್ಚಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ 2022ರಲ್ಲಿ ತಿಳಿಸಿತ್ತು.

> ಪ್ರಸಕ್ತ ರೋಗದ ಎರಡನೇ ಅಲೆ ಫೆ. 9ರಂದು ಬೊಮಾಟೆ ಪಟ್ಟಣದಲ್ಲಿ ಆರಂಭವಾದಾಗಿನಿಂದ 13 ರೋಗಿಗಳ ರಕ್ತದ ಮಾದರಿಗಳನ್ನು ಕಾಂಗೋದ ರಾಜಧಾನಿ ಕಿನ್ಷಾಸಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ ಬಯೋಮೆಡಿಕಲ್ ರಿಸರ್ಚ್‌ಗೆ ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ಡಬ್ಲ್ಯೂ ಹೆಚ್‌ಓ ತಿಳಿಸಿದೆ.

ಕಳೆದ ವರ್ಷ, ಪೂನಂತಹ ಮತ್ತೆಯ ನಿಗೂಢ ಕಾಯಿಲೆ ಕಾಂಗೋದ ಮತ್ತೊಂದು ಭಾಗದಲ್ಲಿ ಕಾಣಿಸಿಕೊಂಡು ಹತ್ತಾರು ಜನರು ಬಲಿಯಾಗಿದ್ದರು. ಈ ಸಾವುಗಳಿಗೆ ಮಲೇರಿಯಾ ಕಾರಣ ಎಂದು ನಿರ್ಧರಿಸಲಾಗಿತ್ತು. ಈ ಸಾರಿ ಕಳುಹಿಸಲಾಗಿರುವ ಎಲ್ಲಾ ಮಾದರಿಗಳಲ್ಲಿ ಎಬೋಲಾ ಅಥವಾ ಮಾರ್ಬರ್ಗ್ ನಂತಹ ಸಾಮಾನ್ಯ ಮಿದುಳು ಜ್ವರದಂಥ ಕಾಯಿಲೆಗಳ ಲಕ್ಷಣಗಳಿಲ್ಲ. ಆದರೆ ಕೆಲವು ಮಾದರಿಗಳಲ್ಲಿ ಮಲೇರಿಯಾದಂಥ ಲಕ್ಷಣಗಳಿವೆ ಎಂದು ಹೇಳಲಾಗಿದೆ.

# ಮದ್ಯನೀತಿಯಿಂದ 2002 ಕೋಟಿ ರೂ. ಆದಾಯ ನಷ್ಟ

**ನವದೆಹಲಿ:** ಹಿಂದಿನ ಎಎಪಿ ಸರ್ಕಾರದ ಅವಧಿಯಲ್ಲಿ ಈಗ ರದ್ದುಪಡಿಸಿರುವ ಮದ್ಯನೀತಿ ಅನುಷ್ಠಾನದಿಂದಾಗಿ ಒಟ್ಟು 2002 ಕೋಟಿ ರೂ. ಆದಾಯ ನಷ್ಟವಾಗಿದೆ ಎಂಬುದನ್ನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ(ಸಿಎಜಿ) ವರದಿಯಲ್ಲಿ ಬಹಿರಂಗಗೊಂಡಿದೆ. (ಸಿಎಜಿ) ವರದಿಯನ್ನು ವಿಧಾನಸಭೆಯಲ್ಲಿ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮಂಡಿಸುತ್ತಿದ್ದಂತೆ ಪ್ರತಿಪಕ್ಷ ಎಎಪಿ ಶಾಸಕರು ಭಾರೀ ಗದ್ದಲ, ಕೋಲಾಹಲ ಉಂಟು ಮಾಡಿದರು. ಅವರ ಪ್ರತಿಭಟನೆಯನ್ನು ಲೆಕ್ಕಿಸದೆ ಸಿಎಂ ಗುಪ್ತಾ ಅವರು ಸಿಎಜಿ ವರದಿಯನ್ನು ಮಂಡನೆ ಮಾಡಿದರು. ವರದಿಯಲ್ಲಿ ಎಎಪಿ ಸರ್ಕಾರ ಅನುಷ್ಠಾನ ಮಾಡಿದ್ದ ಮದ್ಯ ನೀತಿಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ 2002 ಕೋಟಿ ನಷ್ಟವಾಗಿದೆ ಎಂಬುದನ್ನು ಉಲ್ಲೇಖ ಮಾಡಿದೆ. 2017-18ರಿಂದ 2020-21ರವರೆಗೆ ನಾಲ್ಕು ವರ್ಷಗಳ ಅವಧಿಯಲ್ಲಿ ಈಗಾಗಲೇ ಸರೆಂಡರ್ ಮಾಡಿದ್ದ ಪರಾವನಿಗೆಗಳನ್ನು ಮರು ಟೆಂಡರ್ ಮಾಡುವಲ್ಲಿ ಸರ್ಕಾರ ವಿಫಲವಾದ ಕಾರಣ ಅಂದಾಜು 890 ಕೋಟಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ ಎಂಬುದು ಬಹಿರಂಗಗೊಂಡಿದೆ. ಸರ್ಕಾರದ ವಿಳಂಬದ ನೀತಿಯಿಂದಾಗಿ 941 ಕೋಟಿ ನಷ್ಟವಾಗಿದೆ. ಸರ್ಕಾರದ ದೂರದೃಷ್ಟಿ ಇದರಲ್ಲಿ ಇಲ್ಲದಿರುವುದು ಸ್ಪಷ್ಟವಾಗಿದೆ ಎಂದು ವರದಿ ಹೇಳಿದೆ. ರದ್ದಾದ ವರದಿಗಳನ್ನು ಸರಿಪಡಿಸುವಂತೆ ಸರ್ಕಾರವೇ ರಚಿಸಿದ್ದ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಅಂದಿನ ಉಪಮುಖ್ಯಮಂತ್ರಿ ಹಾಗೂ ಅಬಕಾರಿ ಸಚಿವ ಮನೀಶ್ ಸಿಸೋಡಿಯ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆ ಎಂಬುದನ್ನು ಸಹ ಪತ್ತೆ ಮಾಡಿದೆ. ಸಿಎಜಿ ವರದಿಯನ್ನು ನಮ್ಮ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ. ಈ ಪ್ರಕರಣದಲ್ಲಿ ಯಾರೇ ಭಾಗಿಯಾದ್ದರೂ ಕಾನೂನು ಪ್ರಕಾರವೇ ಕ್ರಮ ಕೈಗೊಳ್ಳುತ್ತೇವೆ. ಯಾರನ್ನೂ ಕೂಡ ರಕ್ಷಣೆ ಮಾಡುವುದಿಲ್ಲ. ಎಷ್ಟೇ ದೊಡ್ಡವರಾಗಿದ್ದರೂ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಖಚಿತ ಎಂದು ಗುಪ್ತಾ ಎಚ್ಚರಿಕೆ ಕೊಟ್ಟಿದ್ದಾರೆ. ಇದರಲ್ಲಿ ಭಾರೀ ಕಿಕ್ ಬ್ಯಾಕ್ ನಡೆದಿದೆ ಎಂಬ ಕಾರಣಕ್ಕಾಗಿಯೇ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರವಾಲ್, ಮಾಜಿ ಡಿಸಿಎಂ ಮನೀಶ್ ಸಿಸೋಡಿಯ, ಮಾಜಿ ಸಚಿವ ಸತ್ಯೇಂದ್ರ ಜೈನ್, ರಾಜ್ಯ ಸಭಾ ಸದಸ್ಯ ಸಂಜಯ್ ಸಿಂಗ್ ಸೇರಿದಂತೆ ಎಎಪಿಯ ಅನೇಕ ನಾಯಕರು ಜೈಲು ಪಾಲಾಗಿದ್ದರು.

ಪ್ರಸ್ತುತ ದೆಹಲಿ ವಿಧಾನಸಭೆಯಲ್ಲಿ ಅಧಿವೇಶನ ನಡೆಯುತ್ತಿದ್ದು, ಈ ಅಧಿವೇಶನದಲ್ಲಿ ಒಟ್ಟು 14 ಸಿಎಜಿ ವರದಿಯನ್ನು ಮಂಡಿಸುವುದಾಗಿ ರೇಖಾ ಗುಪ್ತ ಹೇಳಿದರು.

**ಸಿಎಜಿ ವರದಿಯಲ್ಲಿ ಬಹಿರಂಗ**




## ಮಿನಿ ನ್ಯೂಸ್

### ಮಹಾಕುಂಭ ಟೀಕಿಸಿದವರಿಗೆ ಖಡಕ್ ಉತ್ತರ ಕೊಟ್ಟ ಯೋಗಿ



**ಲಖ್ನೋ:** ಇಲ್ಲಿನ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭ ಮೇಳ ದಲ್ಲಿ ಪವಿತ್ರ ಸ್ನಾನ ಮಾಡುತ್ತಿರುವವರ ಬಗ್ಗೆ ಲಘುವಾಗಿ ಟೀಕೆ ಮಾಡಿರುವ ವಿಪಕ್ಷಗಳ ಆರೋಪಕ್ಕೆ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ಮುಟ್ಟಿನೋಡಿಕೊಳ್ಳುವ ಹಾಗೆ ತಿರುಗೇಟು ನೀಡಿದ್ದಾರೆ. ಪ್ರಸ್ತುತ ಉತ್ತರಪ್ರದೇಶದಲ್ಲಿ ಬಜೆಟ್ ಅಧಿವೇಶನ ನಡೆಯುತ್ತಿದ್ದು, ಅಧಿಕೃತ ವಿರೋಧ ಪಕ್ಷ ಸಮಾಜವಾದಿ ಪಕ್ಷ, ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳ ಆರೋಪಕ್ಕೆ ಯೋಗಿ ಆದಿತ್ಯನಾಥ್ ತಮ್ಮದೇ ಶೈಲಿಯಲ್ಲಿ ತಿರುಗೇಟು ಕೊಟ್ಟಿದ್ದಾರೆ. ತಮ್ಮ ಮಾತಿನುದ್ದಕ್ಕೂ ಸನಾತನ ಧರ್ಮ, ಹಿಂದೂ ಆಚಾರವಿಚಾರ, ನಂಬಿಕೆ, ಪ್ರಯಾಗ್‌ರಾಜ್‌ನ ಕುಂಭಮೇಳದ ಬಗ್ಗೆಯೂ ಟೀಕೆ ಮಾಡುತ್ತಿರುವವರಿಗೆ ತಕ್ಕ ಉತ್ತರ ಕೊಟ್ಟಿದ್ದಾರೆ.

ಯದ್ಭಾವಂ ತದ್ಭವತಿ ಎನ್ನುವ ಉಕ್ತಿಯಂತೆ ಕುಂಭಮೇಳದಲ್ಲಿ ಯಾರ್‍ಯಾರಿಗೆ ಏನೇನೆಲ್ಲಾ ಕಂಡಿತು, ದೊರಕಿತು ಎಂಬ ಪ್ರಶ್ನೆಗೆ ಯೋಗಿ ಆದಿತ್ಯನಾಥ್ ತೀಕ್ಷ್ಣವಾಗಿ ಪ್ರತ್ಯುತ್ತರ ನೀಡಿದ್ದಾರೆ. ಕುಂಭಮೇಳದಲ್ಲಿ ರಣಹದ್ದುಗಳಿಗೆ ಶವಗಳೇ ಕಂಡವು. ಹಂದಿಗಳಿಗೆ ಬರೀ ಹೊಲಸು ಕಾಣಿಸಿತು. ಆಸ್ತಿಕರು ಆಶೀರ್ವಾದ ಪಡೆದರು. ಭಕ್ತರಿಗೆ ದೇವ ದರ್ಶನ ವಾಯಿತು, ವರ್ತಕರಿಗೆ ವ್ಯಾಪಾರ ದೊರೆಯಿತು, ಬಡವರಿಗೆ ಬಾಳು ದೊರೆಯಿತು, ದಯಾಳುಗಳಿಗೆ ಕರುಣೆ ಪ್ರಾಪ್ತವಾಯಿತು, ಕೋಟ್ಯಾಂತರ ಭಕ್ತರಿಗೆ ಸ್ವಚ್ಛತೆ, ಸುವ್ಯವಸ್ಥೆ ಕಾಣಿಸಿತು. ಹೀಗೆ ಅವರವರ ಭಾವಕ್ಕೆ, ಅವರವರ ಭಕುತಿಗೆ ತಕ್ಕಂತೆ ಸಾಗುತಿದೆ ಮಹಾಕುಂಭ ಮೇಳ ಎಂದು ತಿರುಗೇಟು ಕೊಟ್ಟಿದ್ದಾರೆ.



### 14 ಲಕ್ಷ ರೂ. ಖೋಟಾ ನೋಟು ವಶ

**ಪಾಲ್ಗರ್:** ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಇಲ್ಲಿನ ಪಾಲಿ ಗ್ರಾಮದ ಬಳಿ 14 ಲಕ್ಷ ರೂಪಾಯಿ ಮುಖಬೆಲೆಯ ನಕಲಿ ನೋಟು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಅನ್ವಯ ವ್ಯಕ್ತಿಯೊಬ್ಬರು ಚೀಲವನ್ನು ಹೊತ್ತುಕೊಂಡು ಅನುಮಾನಾಸ್ಪದ ರೀತಿಯಲ್ಲಿ ತಿರುಗಾಡುತ್ತಿದ್ದ ಈ ವೇಳೆ ಕಾರಿನಲ್ಲಿ ಅಲ್ಲಿಗೆ ಬಂದು ಇಬ್ಬರು ಅದನ್ನು ಪಡೆಯುವಾಗ ದಾಳಿ ನಡೆಸಿ 100 ಮತ್ತು 500 ರೂಪಾಯಿ ಮುಖಬೆಲೆಯ ಪೊಲೀಸರು ಗಮನಿಸಿ 14 ಲಕ್ಷ ನಕಲಿ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೂವರನ್ನು ವಶಕ್ಕೆ ಪಡೆದು ತಪಾಸಣೆ 1 ಲಕ್ಷ ರೂಪಾಯಿಯ ಅಸಲಿ ನೋಟುಗಳನ್ನು ಪತ್ತೆಯಾಗಿದೆ. ಅಸಲಿ ನೋಟುಗಳನ್ನು ಬಂಡಲ್‌ಗಳ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಇರಿಸಲಾಗಿದ್ದು, ಅವುಗಳ ನಡುವೆ ಚಿಲ್ಡ್ರನ್ ಬ್ಯಾಂಕ್ ಆಫ್ ಇಂಡಿಯಾ ಎಂದು ಮುದ್ರಿಸಲಾದ ನಕಲಿ ಕರೆನ್ಸಿ ನೋಟುಗಳನ್ನು ಸೇರಿಸಲಾಗಿದೆ ಎಂದು ವಾಡಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ದತ್ತಾತ್ರೇಯ ಕಿಂದ್ರೆ ತಿಳಿಸಿದ್ದಾರೆ. ಇವರು 3 ಲಕ್ಷ ನಕಲಿ ನೋಟುಗಳನ್ನು 1 ಲಕ್ಷ ರೂಪಾಯಿ ಅಸಲಿ ನೋಟಿಗೆ ಬದಲಾಯಿಸಲು ಯೋಜಿಸಿದ್ದರು ಪ್ರಸ್ತುತ ನಕಲಿ ನೋಟುಗಳ ಮೂಲವನ್ನು ಪತ್ತೆ ಹಚ್ಚಲು ಪೊಲೀಸರು ತನಿಖೆ ನಡೆಸುತ್ತಿದ್ದರು. ಈ ಹಿಂದೆಯೂ ಎರಡು ಬಾರಿ ಇಲ್ಲಿನ ಗೋಹರ್ ಮತ್ತು ಶಿರೀಷ್ ಪದಾ ಪ್ರದೇಶಗಳಿಂದ ನಕಲಿ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಆರೋಪಿಗಳು ತಮ್ಮ ಮನೆಗಳಲ್ಲಿ ನಕಲಿ ನೋಟುಗಳನ್ನು ಮುದ್ರಿಸಿ ಚಲಾವಣೆ ಮಾಡುತ್ತಿದ್ದರು ಎಂದು ಅಧಿಕಾರಿ ತಿಳಿಸಿದ್ದಾರೆ.

### ಭಕ್ತರ ಗುಂಪಿನ ಮೇಲೆ ಆನೆ ದಾಳಿ, ಮೂವರ ದುರ್ಮರಣ

**ಓಬುಲಾವರಿಪಲ್ಲಿ:** ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯ ಅರಣ್ಯವೊಂದರಲ್ಲಿ ಮಂಗಳವಾರ ಮುಂಜಾನೆ ಆನೆ ದಾಳಿಯಿಂದ ಮೂವರು ಭಕ್ತರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ. ಮುಂಜಾನೆ 2:30 ರ ಸುಮಾರಿಗೆ ತಲಕೋನ ದೇವಸ್ಥಾನಕ್ಕೆ ಹೊರಟ 30 ಭಕ್ತರ ಗುಂಪಿನ ಮೇಲೆ ಆನೆಗಳ ಗುಂಪು ದಾಳಿ ನಡೆಸಿದ್ದು, ಮೂವರು ಭಕ್ತರು ಸಾವನ್ನಪ್ಪಿದ್ದಾರೆ ಮತ್ತು ಕಾಡಿನೊಳಗೆ ಇನ್ನೂ ಮೂವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿ ಪಿಟಿಐಗೆ ತಿಳಿಸಿದ್ದಾರೆ.

ಗಾಯಗೊಂಡ ಮೂವರಲ್ಲಿ ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಉಳಿದ ಇಬ್ಬರು ಅಪಾಯದಿಂದ ಪಾರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಅರಣ್ಯವು ಓಬುಲಾವರಿಪಲ್ಲಿ ಮಂಡಲದ ವೈ ಕೋಟಾ ಪ್ರದೇಶದ ವ್ಯಾಪ್ತಿಗೆ ಬರುತ್ತದೆ ಮತ್ತು ಭಕ್ತರ ಮೇಲೆ ದಾಳಿ ಮಾಡಿದ ಹಿಂಡಿನ ಭಾಗವಾಗಿ 15 ಆನೆಗಳು ಇದ್ದವು ಎಂದು ನಂಬಲಾಗಿದೆ. ಪೊಲೀಸರು ಮೃತ ಭಕ್ತರ ಶವಗಳನ್ನು ಹೊರತೆಗೆದರೆ, ದಾಳಿಯಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದ ಭಕ್ತರನ್ನು ಮನೆಗೆ ಕಳುಹಿಸಲಾಗಿದೆ.

### ಪುಣ್ಯಸ್ನಾನಕ್ಕೆ ತಯಾರಿ, ವಾಹನ ರಹಿತ ಪ್ರದೇಶವಾದ ಪ್ರಯಾಗ್‌ರಾಜ್

**ಪ್ರಯಾಗ್ ರಾಜ್:** ಮಹಾಶಿವರಾತ್ರಿಯಂದು ಕೊನೆಯ ವಿಶೇಷ ಸ್ನಾನಕ್ಕೆ ಭಕ್ತರ ಭಾರಿ ಒಳಹರಿವನ್ನು ಗಮನದಲ್ಲಿಟ್ಟುಕೊಂಡು ಮಹಾಕುಂಭ ಮೇಳ ಪ್ರದೇಶವನ್ನು ಮಂಗಳವಾರ ಸಂಜೆ 4 ಗಂಟೆಯಿಂದ ವಾಹನ ರಹಿತ ವಲಯವಾಗಿ ಮಾರ್ಪಾಡು ಮಾಡಲಾಗಿದೆ. ಇಡೀ ಪ್ರಯಾಗ್ ರಾಜ್ ಸಂಜೆ 6 ಗಂಟೆಯಿಂದ ಇದನ್ನು ಅನುಸರಿಸುತ್ತದೆ. ಸುಗಮ ಜನಸಂದಣಿಯನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳು ಈ ನಿರ್ಬಂಧಗಳನ್ನು ವಿಧಿಸಿದ್ದಾರೆ. ಆದಾಗ್ಯೂ, ಅಗತ್ಯ ವಸ್ತುಗಳನ್ನು ಸಾಗಿಸುವ ವಾಹನಗಳಿಗೆ ವಿನಾಯಿತಿ ನೀಡಲಾಗುವುದು ಎಂದು ಅಧಿಕೃತ ಹೇಳಿಕೆ ತಿಳಿಸಿದೆ. ಎಲ್ಲಾ ಸಂದರ್ಶಕರು ಮಾರ್ಗಸೂಚಿಗಳನ್ನು ಅನುಸರಿಸಲು, ಅಧಿಕಾರಿಗಳೊಂದಿಗೆ ಸಹಕರಿಸಲು ಆಡಳಿತವು ಒತ್ತಾಯಿಸಿದೆ ಎಂದು ಮೇಳ ಪೊಲೀಸರು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಭಕ್ತರು ತಮ್ಮ ಪ್ರವೇಶ ದ್ವಾರಗಳ ಆಧಾರದ ಮೇಲೆ ಹತ್ತಿರದ ಗೊತ್ತುಪಡಿಸಿದ ಘಾಟ್‌ಗಳಲ್ಲಿ ಮಾತ್ರ ಸ್ನಾನ ಮಾಡಬೇಕು. ದಕ್ಷಿಣಿ ಝುನ್ಸಿ ಮಾರ್ಗದಿಂದ ಬರುವವರು ಅರೈಲ್ ಘಾಟ್ ಮೂಲಕ, ಉತ್ತರಿ ಝುನ್ಸಿ ಮಾರ್ಗದಿಂದ ಬರುವವರು ಹರಿಶ್ಚಂದ್ರ ಘಾಟ್ ಮತ್ತು ಓಲ್ಡ್ ಜಿಟಿ ಘಾಟ್ ಗೆ ಹೋಗಬೇಕು. ಪಾಂಡೆ ಕ್ಷೇತ್ರಕ್ಕೆ ಪ್ರವೇಶಿಸುವವರಿಗೆ ಭಾರದ್ವಾಜ್ ಘಾಟ್. ನಾಗವಾಸುಕಿ ಘಾಟ್, ಮೋರಿ ಘಾಟ್, ಕಾಳಿ ಘಾಟ್, ರಾಮ್ ಘಾಟ್, ಹನುಮಾನ್ ಘಾಟ್ ಗೆ ನಿರ್ದೇಶಿಸಲಾಗಿದೆ.

**ರಷ್ಯಾ-ಉಕ್ರೇನ್ ನಡುವಿನ ಸುದೀರ್ಘ ಯುದ್ಧದಲ್ಲಿ ಇದುವರೆಗೂ ಉಕ್ರೇನ್ ಪರ ನಿಲುವು ತಳೆಯುತ್ತಿದ್ದ ಅಮೆರಿಕ, ಇದೇ ಮೊದಲ ಬಾರಿಗೆ ರಷ್ಯಾ ಪರ ತನ್ನ ಧ್ವನಿಯನ್ನು ಗಟ್ಟಿಗೊಳಿಸಿದೆ. ಉಕ್ರೇನ್‌ನಲ್ಲಿನ ಯುದ್ಧವನ್ನು ಶಾಂತಿಯುತವಾಗಿ ಬಗೆಹರಿಸಲು ಮತ್ತು ಹಗೆತನವನ್ನು ನಿಲ್ಲಿಸಲು ಒತ್ತಾಯಿಸುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯಕ್ಕೆ ಅಮೆರಿಕ ಬೆಂಬಲ ನೀಡಲು ನಿರಾಕರಿಸಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ವಿರುದ್ಧ ತಮ್ಮ ಟೀಕಾಪ್ರಹಾರವನ್ನು ಮುಂದುವರೆಸಿರುವ ಟ್ರಂಪ್, ಸರ್ವಾಧಿಕಾರಿ ಧೋರಣೆ ಬಿಡುವಂತೆ ಒತ್ತಾಯಿಸಿದ್ದಾರೆ.**

## ಪಾರ್ಟಿ ಬದಲಿಸಿದ ಅಮೆರಿಕ, ವಿಶ್ವಸಂಸ್ಥೆಯಲ್ಲಿ ರಷ್ಯಾ ಪರ ನಿರ್ಣಯ; ಪುಟಿನ್ ಈಗ ಯುಎಸ್ ಅಧ್ಯಕ್ಷರ ಖಾಸಾ ಗೆಳೆಯ

# ರಷ್ಯಾ-ಉಕ್ರೇನ್ ಯುದ್ಧದ ನಿಲುವು ಬದಲಿಸಿದ ಅಮೆರಿಕ

**ವಾಷಿಂಗ್ಟನ್:** ರಷ್ಯಾ-ಉಕ್ರೇನ್ ನಡುವಿನ ಸುದೀರ್ಘ ಯುದ್ಧದಲ್ಲಿ ಇದುವರೆಗೂ ಉಕ್ರೇನ್ ಪರ ನಿಲುವು ತಳೆಯುತ್ತಿದ್ದ ಅಮೆರಿಕ, ಇದೇ ಮೊದಲ ಬಾರಿಗೆ ರಷ್ಯಾ ಪರ ತನ್ನ ಧ್ವನಿಯನ್ನು ಗಟ್ಟಿಗೊಳಿಸಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ, ರಷ್ಯಾ ಪರ ಮಾತನಾಡಿರುವ ಅಮೆರಿಕ, ಈ ಮೂಲಕ ತನ್ನ ರಣನೀತಿಯಲ್ಲಿ ಗಮನಾರ್ಹ ಬದಲಾವಣೆ ತಂದಿದೆ. ಉಕ್ರೇನ್‌ನಲ್ಲಿನ ಯುದ್ಧವನ್ನು ಶಾಂತಿಯುತವಾಗಿ ಬಗೆಹರಿಸಲು ಮತ್ತು ಹಗೆತನವನ್ನು ನಿಲ್ಲಿಸಲು ಒತ್ತಾಯಿಸುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯಕ್ಕೆ ಅಮೆರಿಕ ಬೆಂಬಲ ನೀಡಲು ನಿರಾಕರಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ನಡುವಿನ ವಾಗ್ಯುದ್ಧ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಈ ಹಿಂದೆ ಕೀವ್ ಪರ ನಿರ್ಣಯಗಳಿಗೆ ಮತ ಹಾಕಿದ್ದ ವಾಷಿಂಗ್ಟನ್ ಈಗ ತನ್ನ ನಿಲುವು ಬದಲಿಸಿದೆ.

193 ಸದಸ್ಯ ರಾಷ್ಟ್ರಗಳ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಉಕ್ರೇನ್‌ನಲ್ಲಿ ಸಮಗ್ರ, ನ್ಯಾಯಯುತ, ಶಾಶ್ವತ ಶಾಂತಿಯನ್ನು ಮುನ್ನಡೆಸುವುದು ಎಂಬ ನಿರ್ಣಯದ ಮೇಲೆ ಮತದಾನ ನಡೆಯಿತು. ಉಕ್ರೇನ್, ಅದರ ಯುರೋಪಿಯನ್ ಮಿತ್ರರಾಷ್ಟ್ರಗಳು ಈ ನಿರ್ಣಯ ಮಂಡಿಸಿದ್ದವು. ಈ ನಿರ್ಣಯಕ್ಕೆ 93 ರಾಷ್ಟ್ರಗಳು ಪರವಾಗಿ, 18 ರಾಷ್ಟ್ರಗಳು ವಿರುದ್ಧವಾಗಿ ಮತಚಲಾಯಿಸಿದರೆ, 65 ರಾಷ್ಟ್ರಗಳು ತಟಸ್ಥವಾಗಿ ಉಳಿದವು. ರಷ್ಯಾ-ಉಕ್ರೇನ್ ಯುದ್ಧದ ಮೂರನೇ ವಾರ್ಷಿಕೋತ್ಸವದಂದು ಈ ನಿರ್ಣಯ ಹೊರಬಿದ್ದಿದ್ದು, ರಷ್ಯಾದ ಮಿತ್ರರಾಷ್ಟ್ರಗಳಾದ ಬೆಲಾರಸ್, ಉತ್ತರ ಕೊರಿಯಾ ಮತ್ತು ಸುಡಾನ್ ಈ ನಿರ್ಣಯದಲ್ಲಿ ರಷ್ಯಾವನ್ನು ಬೆಂಬಲಿಸಿದವು. ಸಂವಾದ, ರಾಜತಾಂತ್ರಿಕ ಮಾತುಕತೆ ಮೂಲಕ ಸಂಘರ್ಷವನ್ನು ಶಾಂತಿಯುತವಾಗಿ ಬಗೆಹರಿಸಲು ಕರೆ ನೀಡಿರುವ ಭಾರತ ಈ ಮತದಾನದಿಂದ ದೂರ ಉಳಿದಿದೆ. ಕಳೆದ ತಿಂಗಳು ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಮರಳಿದ ನಂತರ, ಅಮೆರಿಕ, ಉಕ್ರೇನ್ ನಡುವಿನ ಸಂಬಂಧಗಳು ಹದಗೆಟ್ಟಿವೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿಯನ್ನು ಸರ್ವಾಧಿಕಾರಿ ಎಂದು ಕರೆದಿರುವ ಡೊನಾಲ್ಡ್ ಟ್ರಂಪ್, ಉಕ್ರೇನ್ ನಾಶಕ್ಕೆ ಝೆಲೆನ್ಸ್ಕಿ ಅವರ ಹಠಮಾರಿ ಧೋರಣೆಗಳು ಕಾರಣವಾಗುತ್ತಿವೆ ಎಂದು ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ರಷ್ಯಾ-ಉಕ್ರೇನ್ ನಡುವಿನ ಸುದೀರ್ಘ ಯುದ್ಧಕ್ಕೆ ಅಂತ್ಯ ಹಾಡಲು, ಕಳೆದ ವಾರ ರಷ್ಯಾ, ಅಮೆರಿಕ ಅಧಿಕಾರಿಗಳು ಸೌದಿ ಅರೇಬಿಯಾದಲ್ಲಿ ಮಾತುಕತೆ ನಡೆಸಿದ್ದರು. ಈ ಸಭೆಗೆ ಉಕ್ರೇನ್ ಅಧಿಕಾರಿಗಳನ್ನು ಆಹ್ವಾನಿಸದಿರುವುದು ಭಾರೀ ಚರ್ಚೆಗೆ ಕಾರಣವಾಗಿತ್ತು. ಈ ಸಭೆಯ ಬಳಿಕ ಯುದ್ಧವನ್ನು ಕೊನೆಗೊಳಿಸಲು ವೇಗವಾಗಿ ಕ್ರಮ ಕೈಗೊಳ್ಳುವಂತೆ ಡೊನಾಲ್ಡ್ ಟ್ರಂಪ್ ಅವರು ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿಗೆ ಅವರಿಗೆ ಸೂಚನೆ ನೀಡಿದ್ದರು. ರಷ್ಯಾ-ಉಕ್ರೇನ್ ಯುದ್ಧವನ್ನು ಅರ್ಥಹೀನ ಎಂದು ಕರೆದಿರುವ ಡೊನಾಲ್ಡ್ ಟ್ರಂಪ್, ರಷ್ಯಾ ಈ ಯುದ್ಧವನ್ನು ನಿಲ್ಲಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಫೆಬ್ರವರಿ 24, 2022ರಂದು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು, ಉಕ್ರೇನ್ ಗಡಿಯೊಳಗೆ ತಮ್ಮ ಸೈನಿಕರನ್ನು ನುಗ್ಗಿಸಿ, ರಷ್ಯಾ-ಉಕ್ರೇನ್ ಯುದ್ಧಕ್ಕೆ ನಾಂದಿ ಹಾಡಿದ್ದರು. ಈ ಸುದೀರ್ಘ ಯುದ್ಧದಲ್ಲಿ ಇದುವರೆಗೂ ಸುಮಾರು 43,000 ಉಕ್ರೇನಿಯನ್ ಸೈನಿಕರು, 1,98,000 ರಷ್ಯಾದ ಸೈನಿಕರು ಅಸುನೀಗಿದ್ದಾರೆ. ಉಕ್ರೇನ್‌ನಲ್ಲಿ ಸುಮಾರು 12,500 ನಾಗರಿಕರು ಸಾವನ್ನಪ್ಪಿದ್ದಾರೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ. ಯುದ್ಧ ಆರಂಭವಾದಾಗಿನಿಂದ ಅಮೆರಿಕವು ಇದುವರೆಗೂ ಉಕ್ರೇನ್‌ಗೆ 60 ಬಿಲಿಯನ್ ಅಮೆರಿಕನ್ ಡಾಲರ್‌ಗಿಂತಲೂ ಹೆಚ್ಚು ಮೌಲ್ಯದ ಮಿಲಿಟರಿ ನೆರವು ನೀಡಿದೆ.



**ಈ ಘೋರ ವಿನಾಶವನ್ನು ತಡೆಗಟ್ಟುವುದು ತುರ್ತು ಅಗತ್ಯ**

ಯುಎನ್ ಜನರಲ್ ಅಸೆಂಬ್ಲಿ ಕೈಗೊಂಡಿರುವ ನಿರ್ಣಯದಲ್ಲಿ ರಷ್ಯಾವನ್ನು ತೀವ್ರವಾಗಿ ಟೀಕಿಸಲಾಗಿದೆ. ವಿಶ್ವಸಂಸ್ಥೆಯ ಚಾರ್ಟರ್ ಮತ್ತು ಅಂತಾರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ, ಉದ್ವಿಗ್ನತೆ ಕಡಿಮೆ ಮಾಡಲು, ಹಗೆತನವನ್ನು ಶೀಘ್ರದಲ್ಲೇ ನಿಲ್ಲಿಸಲು ಮತ್ತು ಉಕ್ರೇನ್ ವಿರುದ್ಧದ ಯುದ್ಧವನ್ನು ಶಾಂತಿ ಯುತವಾಗಿ ಬಗೆಹರಿಸಲು ಈ ನಿರ್ಣಯ ಒತ್ತಾಯಿಸುತ್ತದೆ. ಸುದೀರ್ಘ ಯುದ್ಧವು ಪ್ರಚಂಡ ವಿನಾಶ ಮತ್ತು ಮಾನವ ಸಂಕಷ್ಟಕ್ಕೆ ಸಾಕ್ಷಿಯಾಗಿದೆ. ಮಾನವೀಯತೆ ಮೇಲಿನ ಈ ಘೋರ ವಿನಾಶವನ್ನು ತಡೆಗಟ್ಟುವುದು ತುರ್ತು ಅಗತ್ಯವಾಗಿದೆ ಎಂದು ಈ ನಿರ್ಣಯ ಉಲ್ಲೇಖಿಸಿದೆ. ಆದರೆ ಭದ್ರತಾ ಮಂಡಳಿಯ ಮತದಾನದಲ್ಲೂ ರಷ್ಯಾವನ್ನು ಬೆಂಬಲಿಸಿರುವ ಅಮೆರಿಕ, ವಿಶ್ವಸಂಸ್ಥೆಯ ಇತರ ಸದಸ್ಯ ರಾಷ್ಟ್ರಗಳ ಅಚ್ಚರಿಗೆ ಕಾರಣವಾಗಿದೆ.

- ಯುಎನ್ ಜನರಲ್ ಅಸೆಂಬ್ಲಿಯಲ್ಲಿ ರಷ್ಯಾ ಪರ ನಿಲುವು
- ರಷ್ಯಾ ಪರ ಧ್ವನಿ ಗಟ್ಟಿಗೊಳಿಸಿದ ಡೊನಾಲ್ಡ್ ಟ್ರಂಪ್ ಆಡಳಿತ
- ಝೆಲೆನ್ಸ್ಕಿಯನ್ನು ಸರ್ವಾಧಿಕಾರಿ ಎಂದು ಕರೆದ ಡೊನಾಲ್ಡ್ ಟ್ರಂಪ್

**ಹೆಚ್ಚು ಮೌಲ್ಯದ ಮಿಲಿಟರಿ ನೆರವು**

## ಪಟಾಕಿ ಸಂಗ್ರಹಗಾರ ಸ್ಫೋಟ, ಮೂವರು ಮಹಿಳೆಯರ ದಾರುಣ ಸಾವು

**ಚೆನ್ನೈ:** ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಟಾಕಿ ಸಂಗ್ರಹಣಾ ಘಟಕದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೂವರು ಮಹಿಳೆಯರು ಸಾವನ್ನಪ್ಪಿದ್ದಾರೆ. ಸ್ಫೋಟಕ್ಕೆ ಇಡಿ ಗೋದಾಮು ಸಂಪೂರ್ಣವಾಗಿ ನಾಶವಾಗಿದ್ದು, ಮೃತರನ್ನು ಶಣ್ಮುಗಂ, ತಿರುಮಲರ್ ಮತ್ತು ಮಂಜು ಎಂದು ಗುರುತಿಸಲಾಗಿದೆ. ಮೃತರು ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸ್ಥಳದಲ್ಲೇ ಸಾವನ್ನಪ್ಪಿದರು. ಪೊಲೀಸರೊಂದಿಗೆ ಅಗ್ನಿಶಾಮಕ ಮತ್ತು ರಕ್ಷಣಾ ಇಲಾಖೆಯು ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಆದರೆ, ಅವರು ಶವಗಳನ್ನು ಮಾತ್ರ ಹೊರತೆಗೆಯಲು ಸಾಧ್ಯವಾಯಿತು. ಪಟಾಕಿ ಘಟಕವು ದೀರ್ಘಕಾಲದವರೆಗೆ ಮಾನ್ಯ ಸರ್ಕಾರಿ ಪರವಾನಗಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ ಎಂದು ಜಿಲ್ಲಾಧಿಕಾರಿ ಸತೀಶ್ ದೃಢಪಡಿಸಿದರು. ಸ್ಫೋಟದ ಕಾರಣವನ್ನು ಪ್ರಸ್ತುತ ತನಿಖೆ ಮಾಡಲಾಗುತ್ತಿದೆ. ಪಟಾಕಿಗಳ ಸ್ಫೋಟದ ನಂತರ ಕಾರ್ಖಾನೆಯಲ್ಲಿ ಸಂಭವಿಸಿದ ಬೆಂಕಿಯನ್ನು ನಿಯಂತ್ರಿಸಲು ಅಗ್ನಿಶಾಮಕ, ರಕ್ಷಣಾ ಸೇವಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾಡಳಿತವು ಈ ಪ್ರದೇಶದ ಎಲ್ಲಾ ಪಟಾಕಿ ತಯಾರಿಕೆ ಮತ್ತು ಸಂಗ್ರಹಣಾ ಘಟಕಗಳನ್ನು ಕೂಲಂಕಷವಾಗಿ ಪರಿಶೀಲಿಸಲಿದೆ ಎಂದು ಭರವಸೆ ನೀಡಿದರು. ಘಟನೆಯ ನಂತರ, ಮೃತರ ಸಂಬಂಧಿಕರು ನ್ಯಾಯಕ್ಕಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಸಂಗ್ರಹಣಾ ಘಟಕವು ವಸತಿ ಪ್ರದೇಶದಲ್ಲಿದೆ. ಇದು ದೊಡ್ಡ ಅಪಾಯವನ್ನುಂಟುಮಾಡುತ್ತದೆ ಎಂದು ಸ್ಥಳೀಯರು ಹೇಳಿದ್ದಾರೆ. ಘಟನೆಯ ನಂತರ ಜಿಲ್ಲಾಧಿಕಾರಿ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ಅವಲೋಕಿಸಿದರು. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸಂತಾಪ ಸೂಚಿಸಿದ್ದು, ದುಃಖತಪ್ತ ಕುಟುಂಬಗಳಿಗೆ 4 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ.



## ಪಾಕ್ ಜೈಲಿನಿಂದ ಬಿಡುಗಡೆಯಾದ 22 ಭಾರತೀಯ ಮೀನುಗಾರರು, ತಾಯ್ನಾಡಿಗೆ ವಾಪಸ್



**ಅಹಮದಾಬಾದ್:** ಪಾಕಿಸ್ತಾನದ ಕರಾಚಿ ಜೈಲಿನಿಂದ ಬಿಡುಗಡೆಯಾದ 22 ಭಾರತೀಯ ಮೀನುಗಾರರು ಮಂಗಳವಾರ ಗುಜರಾತ್ ನ ಗಿರ್ ಸೋಮನಾಥ ತಲುಪಿದರು. ತವರಿಗೆ ವಾಪಸ್ಸಾಗಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು. ಇನ್ನೂ ಪಾಕಿಸ್ತಾನದ ಜೈಲಿನಲ್ಲಿರುವ ಇತರ ಭಾರತೀಯ ಮೀನುಗಾರರನ್ನು ಬಿಡುಗಡೆ ಮಾಡಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಗುಜರಾತಿನ ಅರಬ್ಬಿ ಸಮುದ್ರದ ಕಡಲ ಗಡಿ ಬಳಿ ಮೀನುಗಾರಿಕೆ ಮಾಡುತ್ತಿದ್ದಾಗ ಏಪ್ರಿಲ್ 2021, ಡಿಸೆಂಬರ್ 2022ರ ನಡುವಣ 22 ಭಾರತೀಯ ಮೀನುಗಾರರನ್ನು ಪಾಕಿಸ್ತಾನದ ನೌಕಾಪಡೆಯ ಭದ್ರತಾ ಸಂಸ್ಥೆ ಬಂಧಿಸಿತ್ತು. ಇನ್ನೂ ಸುಮಾರು 195 ಮೀನುಗಾರರು ಪಾಕಿಸ್ತಾನದ ಜೈಲಿನಲ್ಲಿದ್ದಾರೆ ಎಂದು ವೆರಾವಲ್ ನ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರು, ವಿಕೆ ಗೋಹೆಲ್ ತಿಳಿಸಿದ್ದಾರೆ. ಬಿಡುಗಡೆಯಾದ 22 ಮಂದಿ ಮೀನುಗಾರರಲ್ಲಿ 18 ಜನರು ಗುಜರಾತ್, ಮೂವರು ಡಿಯು, ಒಬ್ಬರು ಉತ್ತರ ಪ್ರದೇಶಕ್ಕೆ ಸೇರಿ ದವರಾಗಿದ್ದಾರೆ. ಮೀನುಗಾರರ ಬಿಡುಗಡೆಗೆ ಮುಖ್ಯಮಂತ್ರಿ ಭೂಪೇಂದ್ರ ಬಘೇಲ್, ಕೃಷಿ ಸಚಿವ ರಾಘವ್ ಜಿ ಪಟೇಲ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರು ಎಂದು ಗುಜರಾತ್ ಸರ್ಕಾರ ಹೇಳಿಕೆ ಯಲ್ಲಿ ತಿಳಿಸಿದೆ. ಕೆಲ ದಿನಗಳ ಹಿಂದೆ ವಾಘಾ ಗಡಿಯಲ್ಲಿ ಭಾರತೀಯ ಅಧಿಕಾರಿಗಳಿಗೆ ಹಸ್ತಾಂತರಿಸಿದ ನಂತರ ಸೋಮವಾರ ಸಂಜೆ ರೈಲಿನಲ್ಲಿ ಮೀನುಗಾರರು ವಡೋದರ ತಲುಪಿಸಿದರು.

ವಡೋದರಿಂದ ಬಸ್ ಮೂಲಕ ಗಿರಿ ಸೋಮನಾಥ ಜಿಲ್ಲೆಯ ವರವಲ್ ತಲುಪಿದ್ದಾರೆ ಎಂದು ಗೋಹೆಲ್ ತಿಳಿಸಿದ್ದಾರೆ.

## ತಾಯಿಯಾದವಳು ತನ್ನ ಮಕ್ಕಳಿಗೆ ಹೊಡೆಯಲ್ಲ

**ಮುಂಬೈ:** ತಾಯಿಯಾದವಳು ತನ್ನ ಮಕ್ಕಳಿಗೆ ಹೊಡೆಯಲು ಸಾಧ್ಯವಿಲ್ಲ ಎಂದು ಹೇಳಿರುವ ಬಾಂಬೆ ಹೈಕೋರ್ಟ್, ಹಲ್ಲೆ ಪ್ರಕರಣದಲ್ಲಿ 28 ವರ್ಷದ ಮಹಿಳೆಗೆ ಜಾಮೀನು ಮಂಜೂರು ಮಾಡಿದೆ. ದೂರುದಾರ ತಂದೆ, ಆರೋಪಿ ತಾಯಿ ನಡುವಿನ ಜಗಳದಲ್ಲಿ ಮಗು ಬಲಿಪಶುವಾಗಿದೆ ಎಂದು ನ್ಯಾಯಮೂರ್ತಿ ಮಿಲಿಂದ್ ಜಾದವ್ ಅವರಿದ್ದ ಏಕಸದಸ್ಯ ಪೀಠ ಅಭಿಪ್ರಾಯಪಟ್ಟಿದೆ.

ಬಾಲಕನ ವೈದ್ಯಕೀಯ ವರದಿಗಳು ಆತ ಮೂರ್ಛೆರೋಗದಿಂದ ಬಳಲುತ್ತಿರುವುದು ತೋರಿಸುತ್ತಿದೆ. ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದಲೂ ಬಳಲುತ್ತಿದ್ದಾನೆ. ಮಗುವಿನ ಆರೈಕೆಗೆ ಆರೋಪಿ ತಾಯಿ ಹೆಣಗಾಡುತ್ತಿರುವುದು ಇದರಿಂದ ತಿಳಿಯುತ್ತದೆ ಎಂದು ಪೀಠ ಹೇಳಿದೆ. ವಿಚ್ಛೇದಿತ ಪತ್ನಿ ಮತ್ತು ಆಕೆಯ ಸಂಗಾತಿ ನನ್ನ ಮಗನಿಗೆ ದೈಹಿಕವಾಗಿ ಹಲ್ಲೆ ಮಾಡುತ್ತಿದ್ದು, ಒಂದು ಬಾರಿ ಕೊಲ್ಲಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಿ ಮಗುವಿನ ಜೈವಿಕ ತಂದೆ ಪೊಲೀಸರಿಗೆ ದೂರು ನೀಡಿದ್ದರು. ದೂರಿನನ್ವಯ ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು ಮಹಿಳೆಯನ್ನು ಬಂಧಿಸಿದ್ದರು.

ಮೇಲ್ನೋಟಕ್ಕೆ ಆರೋಪಗಳನ್ನು ನಂಬಲು ಸಾಧ್ಯವಿಲ್ಲ ಎಂದು ಹೇಳಿರುವ ಕೋರ್ಟ್, 15 ಸಾವಿರ ವೈಯಕ್ತಿಕ ಬಾಂಡ್ ಮೇಲೆ ಮಹಿಳೆಗೆ ಜಾಮೀನು ಮಂಜೂರು ಮಾಡಿದೆ.

## ಚಂದ್ರ-ಚುಕ್ಕಿ-ಬಾನು ಮೀನಾಕ್ಷಿ ಮೊಗದಲ್ಲಿ ಸಂತಸ ತಂದ ಕೇರಳ ಶಿಕ್ಷಣ ಇಲಾಖೆ

**ತಿರುವನಂತಪುರ:** ತನ್ನ ಬುಡಕಟ್ಟು ಭಾಷೆ ಮಾತ್ರ ಗೊತ್ತಿರುವ ಅಂಗವಿಕಲ ಬಾಲಕಿಯೊಬ್ಬಳಿಗೆ ಅವಳದೇ ಬುಡಕಟ್ಟು ಭಾಷೆಯಲ್ಲಿ ಶಿಕ್ಷಣ ನೀಡಲು ಕೇರಳ ಶಿಕ್ಷಣ ಇಲಾಖೆ ವಿಶೇಷ ಆಸ್ಥೆ ವಹಿಸಿದೆ. ಕೇರಳದ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಯತ್ನದಿಂದ ಮಲಪ್ಪುರಂ ಜಿಲ್ಲೆಯ ನಿಲಂಬೂರ್ ಬಳಿಯ ಪೂಚಪ್ಪರ ದಟ್ಟಾರಣ್ಯದ ಚೋಳನಾಯಕ ಎಂಬ ಬುಡಕಟ್ಟು ಜನಾಂಗದ 12 ವರ್ಷ ವಯಸ್ಸಿನ ಮೀನಾಕ್ಷಿ ಎಂಬ ಬಾಲಕಿ ಮೊಗದಲ್ಲಿ ಸಂತಸ ಮೂಡಿದೆ. ಕಳೆದ ಜನವರಿಯಲ್ಲಿ ಮೀನಾಕ್ಷಿಯ ತಂದೆ ಮಣಿ ಎಂಬುವರು ಪೂಚಪ್ಪರ ಬಳಿ ಕಾಡಾನೆ ದಾಳಿಗೆ ತುತ್ತಾಗಿ ಮೃತಪಟ್ಟಿದ್ದರು. ಆ ನಂತರ ಮೀನಾಕ್ಷಿ, ಆಕೆಯ ತಾಯಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ನಿಲಂಬೂರ್‌ನ ಅರಣ್ಯ ಇಲಾಖೆಯ ಅತಿಥಿ ಗೃಹಕ್ಕೆ ಸ್ಥಳಾಂತರಿಸಿದ್ದರು. ಮೀನಾಕ್ಷಿಗೆ ಅಕ್ಷರ ಕಲಿಯಲು ಆಸೆಯಿದೆ. ಆದರೆ, ಅವಳಿಗೆ ದೈಹಿಕ ನ್ಯೂನ್ಯತೆ ಇರುವುದರಿಂದ ಮತ್ತು ಬುಡಕಟ್ಟು ಭಾಷೆ ಬಿಟ್ಟು ಬೇರೆ ಯಾವ ಭಾಷೆಯೂ ಗೊತ್ತಿಲ್ಲದಿರುವುದರಿಂದ ಸಮಸ್ಯೆ ಆಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಲಪ್ಪುರಂ ಜಿಲ್ಲಾ ಶಿಕ್ಷಣ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಈ ವಿಷಯವನ್ನು ಗಂಭೀರ ವಾಗಿ ತೆಗೆದುಕೊಂಡ ಅಧಿಕಾರಿಗಳು ಕೇಂದ್ರ ಕಚೇರಿಗೆ ಸಂಪರ್ಕ ಮಾಡಿದ್ದರು. ಇದಕ್ಕೆ ಸ್ಪಂದಿಸಿರುವ ಅಲ್ಲಿನ ಹಿರಿಯ ಅಧಿಕಾರಿಗಳು ಮೀನಾಕ್ಷಿ ಅಕ್ಷರಭ್ಯಾಸ ಮಾಡಲು ಅನುಕೂಲ ಆಗುವಂತೆ ಆಕೆಯದ್ದೇ ಚೋಳನಾಯಕ ಬುಡಕಟ್ಟು ಭಾಷೆಯಲ್ಲಿ 30 ಆಡಿಯೊ, ವೀಡಿಯೋ ಟೆಕ್ಸ್ ಇರುವ ಪಠ್ಯಗಳನ್ನು ಸಿದ್ದಪಡಿಸಲು ವ್ಯವಸ್ಥೆ ಕಲ್ಪಿಸಿತ್ತು. ಸಿದ್ಧಪಡಿಸಿದ ಆಡಿಯೋ, ವೀಡಿಯೋ ಟೆಕ್ಸ್ ಅನ್ನು ತೆಗೆದುಕೊಂಡು ಮಲಪ್ಪುರಂನ ಸಮಗ್ರ ಶಿಕ್ಷಾ ಕೇರಳ (ಎಸ್‌ಎಸ್‌ಕೆ) ಯೋಜನೆಯ ಅಧಿಕಾರಿಗಳು ವಾರದಲ್ಲಿ ಒಂದು ದಿನ ಮೀನಾಕ್ಷಿ ಇದ್ದಲ್ಲಿ ತೆರಳಿ ಅವಳಿಗೆ ಶಿಕ್ಷಣ ನೀಡುವಲ್ಲಿ ಶ್ರಮಿಸುತ್ತಿದ್ದಾರೆ.



# ಸಿಎಜಿ ವರದಿ ಮಂಡಿಸುವ ವೇಳೆ ಕಿರಿಕ್, 12 ಎಎಪಿ ಶಾಸಕರು ಅಮಾನತು

## ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರವನ್ನು ತೆಗೆದುಹಾಕುವ ಮೂಲಕ ಬಿಜೆಪಿ ತನ್ನ ನಿಜಬಣ್ಣವನ್ನು ತೋರಿಸಿದೆ

**ನವದೆಹಲಿ:** ಈಗ ರದ್ದುಗೊಂಡಿರುವ ಮದ್ಯ ನೀತಿಯ ಕುರಿತು ಕಂಟ್ರೋಲರ್, ಆಡಿಟರ್ ಜನ ರಲ್ ಆಫ್ ಇಂಡಿಯಾ (ಸಿಎಜಿ) ವರದಿ ಮಂಡಿಸುವ ವೇಳೆ ಉಂಟಾದ ಕೋಲಾಹಲದಿಂದಾಗಿ ದೆಹಲಿಯ ಮಾಜಿ ಮುಖ್ಯಮಂತ್ರಿ, ಪ್ರತಿಪಕ್ಷದ ನಾಯಕಿ ಅತಿಶಿ ಸೇರಿದಂತೆ ಕನಿಷ್ಠ 12 ಆಮ್ ಆದ್ಮಿಪಕ್ಷದ (ಎಎಪಿ) ಶಾಸಕರನ್ನು ವಿಧಾನಸಭೆ ಅಧಿವೇಶನ ದಿಂದ ಒಂದು ದಿನದ ಮಟ್ಟಿಗೆ ಅಮಾನತುಗೊಳಿಸಲಾಗಿದೆ.

ದಿನದ ಅಧಿವೇಶನ ಆರಂಭವಾಗುತ್ತಿದ್ದಂತೆ ಲೆಫ್ಟಿನೆಂಟ್ ಗವರ್ನರ್ ವಿಕೆ ಸಕ್ಸೇನಾ ಸದನವನ್ನು ಉದ್ದೇಶಿಸಿ ಮಾತನಾಡಿದರು. ಆದಾಗ್ಯೂ, ಅವರ ಭಾಷಣಕ್ಕೆ ಎಎಪಿ ಶಾಸಕರು ಅಡ್ಡಿಪಡಿಸಿದರು. ಏಕೆಂದರೆ ಅವರು ಬಿಜೆಪಿ ಸರ್ಕಾರದ ವಿರುದ್ಧ ಜೋರಾಗಿ ಘೋಷಣೆಗಳನ್ನು ಮಾಡಿದ್ದರು. ಸ್ಪೀಕರ್ ವಿಜೇಂದರ್ ಗುಪ್ತಾ ಅವರು ಶಾಸಕರಿಗೆ ಶಾಂತ ವಾಗಿರಲು ಹಲವು ಬಾರಿ ಮನವಿ ಮಾಡಿದರು, ಆದರೆ ಅವರು ಲೆಫ್ಟಿನೆಂಟ್ ಗವರ್ನರ್ ಭಾಷಣಕ್ಕೆ ಅಡ್ಡಿಪಡಿಸಿದರು. ಇದರಿಂದ ಸ್ಪೀಕರ್ ಅವರು ಶಾಸಕರನ್ನು ದಿನದ ಮಟ್ಟಿಗೆ ಅಮಾನತುಗೊಳಿಸಿ ಆದೇಶ ಹೊರಡಿಸಿದರು. ಬಾಬಾ ಸಾಹೇಬ್ ಭೀಮ ರಾವ್ ಅಂಬೇಡ್ಕರ್, ಭಗತ್ ಸಿಂಗ್ ಅವರಿಗೆ ಅವಮಾನ ಮಾಡಿದ ವಿಷಯದ ಕುರಿತು ಎಎಪಿ ಶಾಸಕರು ಗದ್ದಲ ಸೃಷ್ಟಿಸಿದ ನಂತರ ಸ್ಪೀಕರ್ ಗುಪ್ತಾ ಅವರನ್ನು ಅಮಾನತುಗೊಳಿಸಿದರು.

ಅಮಾನತುಗೊಂಡ ಶಾಸಕರನ್ನು ಸದನದ ಹೊರಗೆ ಕರೆದೊಯ್ಯಲಾಯಿತು. ಮಾರ್ಷಲ್‌ಗಳು ಅತಿಶಿ, ಗೋಪಾಲ್ ರೈ, ಸಂಜೀವ್ ಝಾ, ವಿಶೇಷ ರವಿ, ಅನಿಲ್‌ಝಾ, ಜರ್ನೈಲ್ ಸಿಂಗ್ ಅವರನ್ನು ಸದನದ ಹೊರಗೆ ಕರೆದೊಯ್ದರು. ಶಾಸಕರನ್ನು ಅಮಾನತುಗೊಳಿಸಿದ ಹಿನ್ನೆಲೆಯಲ್ಲಿ ಶಾಸಕರು ವಿಧಾನಸೌಧ ಆವರಣದಲ್ಲಿ ಧರಣಿ ನಡೆಸುತ್ತಿದ್ದಂತೆ ಅತಿಶಿ ಅವರು, ಮುಖ್ಯಮಂತ್ರಿ ಕಚೇರಿಯಲ್ಲಿದ್ದ ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ತೆಗೆಸುವ ಮೂಲಕ ಬಿಜೆಪಿಯವರು ಅಗೌರವ ತೋರಿದ್ದಾರೆ ಎಂದು ಆರೋಪಿಸಿದರು.

ಅರವಿಂದ್ ಕೇಜ್ರವಾಲ್ ನೇತೃತ್ವದ ದೆಹಲಿಯ ಹಿಂದಿನ ಎಎಪಿ ಆಡಳಿತದ ಹಣಕಾಸು ಅಕ್ರಮಗಳ ಮೇಲೆ ಕೇಂದ್ರೀಕರಿಸುವ 14 ಬಾಕಿ ಉಳಿದಿರುವ ಸಿಎಜಿ ವರದಿಗಳಲ್ಲಿ, ಬಿಜೆಪಿ ಸರ್ಕಾರವು ಈಗ ರದ್ದಾದ ಮದ್ಯ ನೀತಿಯ ಬಗ್ಗೆ ಒಂದನ್ನು ಮಂಡಿಸಲಿದೆ. ವಿಧಾನಸಭೆಯನ್ನುದ್ದೇಶಿಸಿ ಮಾತನಾಡಿದ ಎಲ್.ಜಿ. ಸಸ್ಸೇನಾ, ಸಿಎಜಿ ವರದಿಯನ್ನು ಮಂಡಿಸುವ ಸರ್ಕಾ ರದ ಕಾರ್ಯಸೂಚಿಯನ್ನು ಪ್ರಸ್ತಾಪಿಸುತ್ತಾ, ಸರ್ಕಾರ ತನ್ನ ಮೊದಲ ಸಚಿವ ಸಂಪುಟ ಸಭೆಯಲ್ಲಿ ಸಿಎಜಿ ವರದಿಗಳನ್ನು ಮಂಡಿಸಲು ನಿರ್ಧರಿಸಿದೆ. ಇದು ಹಿಂದಿನ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆಯಲಿದೆ ಎಂದು ಹೇಳಿದ್ದಾರೆ. ಭ್ರಷ್ಟಾಚಾರ ಮುಕ್ತ ಆಡಳಿತ, ಮಹಿಳಾ ಸಬಲೀಕರಣ, ಸ್ವಚ್ಛದೆಹಲಿ, ಯಮುನಾ ನದಿಯ ಪುನರುಜ್ಜೀವನ, ಶುದ್ಧ ಕುಡಿಯುವ ನೀರು ಮುಂಬರುವ ತಿಂಗಳುಗಳಲ್ಲಿ ಸರ್ಕಾರದ ಗಮನದ ಕ್ಷೇತ್ರಗಳಾಗಿವೆ ಎಂದು ಹೇಳಿದ್ದಾರೆ.





**ಬಿಜೆಪಿ ವಿರುದ್ಧ ಜೋರಾಗಿ ಘೋಷಣೆ**

> (ಪ್ರಧಾನಿ ನರೇಂದ್ರ) ಮೋದಿ ಅವರು ಬಾಬಾ ಸಾಹೇಬ್ ಅವರನ್ನು ಬದಲಾಯಿಸಬಹುದು ಎಂದು ಪಕ್ಷವು ನಂಬುತ್ತದೆಯೇ ಎಂದು ಅವರು ಪ್ರಶ್ನೆ ಮಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಹಾಕುವವರೆಗೂ ನಾವು ಪ್ರತಿಭಟನೆ ನಡೆಸುತ್ತೇವೆ ಎಂದು ವಿರೋಧ ಪಕ್ಷದ ನಾಯಕರು ತಿಳಿಸಿದ್ದಾರೆ.

**ಭಾರತ ಸಹಿಸುವುದಿಲ್ಲ**

ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರವನ್ನು ತೆಗೆದುಹಾಕುವ ಮೂಲಕ ಬಿಜೆಪಿ ತನ್ನ ನಿಜಬಣ್ಣವನ್ನು ತೋರಿಸಿದೆ. ಅಮಾನತುಗೊಂಡ ಎಎಪಿ ಶಾಸಕರು ಬಾಬಾ ಸಾಹೇಬ್ ಕಾಯೇ ಆಪ್ಮಾನ್ ನಹೀನ್ ಸಾಹೇಗಾ ಹಿಂದೂಸ್ತಾನ್ (ಬಾಬಾಸಾಹೇಬ್‌ಗೆ ಮಾಡಿದ ಈ ಅವಮಾನವನ್ನು ಭಾರತ ಸಹಿಸುವುದಿಲ್ಲ) ಘೋಷಣೆಗಳನ್ನು ಎತ್ತಿದರು.



# ಭಾರತದ ವಿರುದ್ಧ ಸೋತ ಪಾಕ್ ತಂಡದಲ್ಲಿ ಬರೋಬ್ಬರಿ 10 ಬದಲಾವಣೆ..!



ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ವಿರುದ್ಧ ಸೋತ ನಂತರ ಪಾಕಿಸ್ತಾನ ತೀವ್ರ ಟೀಕೆ ಎದುರಿಸುತ್ತಿದೆ. ಅಭಿಮಾನಿಗಳಿಂದ ಹಿಡಿದು ಮಾಜಿ ಕ್ರಿಕೆಟಿಗರವರೆಗೆ ಎಲ್ಲಾರೂ ತಮ್ಮ ಕ್ರಿಕೆಟ್ ತಂಡದ ಬಗ್ಗೆ ತೀವ್ರ ಕೋಪ ಹೊರ ಹಾಕುತ್ತಿದ್ದಾರೆ. ಇದೆಲ್ಲದರ ನಡುವೆ ನಿರಂತರ ಕಳಪೆ ಪ್ರದರ್ಶನ ನೀಡುತ್ತಿರುವ ಪಾಕಿಸ್ತಾನ ತಂಡದ ಕೋಚಿಂಗ್ ಸಿಬ್ಬಂದಿಗಳ ತಲೆದಂಡವಾಗಬಹುದು ಎಂಬ ಚರ್ಚೆಗಳು ಶುರುವಾಗಿದೆ. ಇದರ ಜೊತೆಗೆ ತಂಡ ಅನೇಕ ಆಟಗಾರರನ್ನು ತಂಡದಿಂದ ಕೈಬಿಡಬಹುದು ಎಂದು ಹೇಳಲಾಗುತ್ತಿದೆ.

**ಕೋಚಿಂಗ್ ಸಿಬ್ಬಂದಿಯಲ್ಲಿ ಯಾರಿದ್ದಾರೆ**

ಟೀಮ್ ಇಂಡಿಯಾದ ಕೋಚ್ ಆಗಿದ್ದ ಗ್ಯಾರಿ ಕರ್ಸ್ಟನ್, ಪಾಕಿಸ್ತಾನದ ಸೀಮಿತ ಓವರ್‌ಗಳ ಕ್ರಿಕೆಟ್‌ನ ಕೋಚ್ ಆಗಿದ್ದರು. ಆದರೆ 2024 ರಲ್ಲಿ ಅವರು ರಾಜೀನಾಮೆ ನೀಡಿದರು. ಏತನ್ಮಧ್ಯೆ, ಜೇಸನ್ ಗಿಲ್ಲೆಸ್ಪಿ ಪಾಕಿಸ್ತಾನ ಟೆಸ್ಟ್ ತಂಡದ ಕೋಚಿಂಗ್ ಹುದ್ದೆಗೆ ರಾಜೀನಾಮೆ ನೀಡಿದ್ದರು. ಇದಾದ ನಂತರ, ಆಕಿಬ್ ಜಾವೇದ್ ಅವರನ್ನು ಪಾಕಿಸ್ತಾನದ ಮಧ್ಯಂತರ ಮುಖ್ಯ ಕೋಚ್ ಆಗಿ ನೇಮಿಸಲಾಯಿತು. ಅವರಿಗೆ ಮೊಹಮ್ಮದ್ ಮಸ್ರೂರ್ (ಬ್ಯಾಟಿಂಗ್ ಕೋಚ್), ಅಬ್ದುಲ್ ರೆಹಮಾನ್ (ಸ್ಪಿನ್ ಬೌಲಿಂಗ್ ಕೋಚ್) ಮತ್ತು ಶಾಹಿದ್ ಅಸ್ಲಾಂ (ಸಹಾಯಕ ಕೋಚ್) ಅವರು ತರಬೇತಿಯಲ್ಲಿ ಸಹಾಯ ಮಾಡುತ್ತಿದ್ದಾರೆ. ಇದೀಗ ಆಯ್ಕೆದಾರರು ಕೋಚಿಂಗ್ ಸಿಬ್ಬಂದಿಯಲ್ಲಿ ಬದಲಾವಣೆಗಳನ್ನು ತರಲು ಮುಂದಾದರೆ.. ಇವರೆಲ್ಲರನ್ನೂ ವಜಾಗೊಳಿಸಬಹುದು.

**ಈ ಆಟಗಾರರ ತಲೆದಂಡ**

ಪಾಕಿಸ್ತಾನದ ಸೋಲಿನ ನಂತರ ಮಾಜಿ ವೇಗಿ ವಾಸಿಮ್ ಅಕ್ರಮ್ ನಿರಾಶೆ ವ್ಯಕ್ತಪಡಿಸಿದ್ದು, ಆಯ್ಕೆ ಸಮಿತಿಯು ಈಗ ಒಂದು ದೊಡ್ಡ ಹೆಜ್ಜೆ ಇಟ್ಟು ಐದರಿಂದ ಆರು ಬದಲಾವಣೆಗಳನ್ನು ಮಾಡಿ ಅವರ ಬದಲಿಗೆ ನಿರ್ಭೀತ ಕ್ರಿಕೆಟ್ ಆಡುವ ಹೊಸ ಆಟಗಾರರನ್ನು ನೇಮಿಸಬೇಕು ಎಂದು ಹೇಳಿದ್ದರು. ಇದಲ್ಲದೆ, ವಕಾರ್ ಯೂನಸ್, ಶೋಯೆಬ್ ಅಖ್ತರ್ ಸೇರಿದಂತೆ ಅನೇಕ ಪಾಕಿಸ್ತಾನಿ ಮಾಜಿ ಆಟಗಾರರು ತಂಡದಲ್ಲಿ ಬದಲಾವಣೆಯ ಬೇಡಿಕೆಯನ್ನು ಎತ್ತಿದ್ದಾರೆ. ಇದಲ್ಲದೆ ಭಾರತ ವಿರುದ್ಧದ ಸೋಲಿನ ನಂತರ ಪಾಕಿಸ್ತಾನ ತಂಡದ ನಾಯಕ ಮೊಹಮ್ಮದ್ ರಿಜ್ವಾನ್ ತಮ್ಮ ನಾಯಕತ್ವವನ್ನು ಕಳೆದುಕೊಳ್ಳಬಹುದು ಮತ್ತು ತಂಡದಿಂದಲೇ ಕೈಬಿಡಲ್ಪಡಬಹುದು ಎನ್ನಲಾಗುತ್ತಿದೆ.

ಇದಲ್ಲದೆ, ಕಳಪೆ ಫಾರ್ಮ್‌ನಿಂದ ಬಳಲುತ್ತಿರುವ ಬಾಬರ್ ಆಝಂನಂತಹ ಸ್ಟಾರ್ ಬ್ಯಾಟ್ಸ್‌ಮನ್‌ನನ್ನು ಸಹ ತಂಡದಿಂದ ಕೈಬಿಡಬಹುದು. ಫಖರ್ ಜಮಾನ್ ಗಾಯದಿಂದಾಗಿ ಪಾಕಿಸ್ತಾನ ತಂಡಕ್ಕೆ ಸೇರ್ಪಡೆಗೊಂಡಿದ್ದ ಇಮಾಮ್ ಉಲ್ ಹಕ್ ಭಾರತದ ವಿರುದ್ಧ ಆಡುವ ಅವಕಾಶ ಪಡೆದರು ಆದರೆ ಅವರು ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ಹೀಗಾಗಿ ಇಮಾಮ್ ಅವರನ್ನು ಮತ್ತೆ ತಂಡದಿಂದ ಹೊರಹಾಕಬಹುದು.

# ಬೆಚ್ಚಿಬಿದ್ದ ಕ್ರಿಕೆಟ್ ಜಗತ್ತು, ಮೈದಾನಕ್ಕೇ ನುಗ್ಗಿ ಕನ್ನಡಿಗ ರಚಿನ್‌ನ ಹಿಡಿದುಕೊಂಡ ಉಗ್ರ!

ಈ ಘಟನೆ ಪಾಕಿಸ್ತಾನದ ಭದ್ರತಾ ವ್ಯವಸ್ಥೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇದಕ್ಕೂ ಮುನ್ನ ಅಫ್ಘಾನ್ ಭದ್ರತಾ ಪಡೆಗಳು ಚಾಂಪಿಯನ್ಸ್ ಟ್ರೋಫಿ ಮೇಲೆ ಭಯೋತ್ಪಾದಕ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದ್ದವು. ಪಾಕಿಸ್ತಾನದಲ್ಲಿ ನಡೆಯುತ್ತಿರುವ ಚಾಂಪಿಯನ್ಸ್ ಟ್ರೋಫಿಯಲ್ಲೂ ಆಟಗಾರರ ಸುರಕ್ಷತೆಯಲ್ಲಿ ಲೋಪಗಳು ಕಾಣಿಸಿಕೊಂಡಿವೆ. ಪಾಕಿಸ್ತಾನದಲ್ಲಿ ಆಡುತ್ತಿರುವ ಎಲ್ಲಾ ತಂಡಗಳ ಆಟಗಾರರ ಜೀವ ಅಪಾಯದಲ್ಲಿದೆ. ಚಾಂಪಿಯನ್ಸ್ ಟ್ರೋಫಿಗೆ ಬರುವ ಆಟಗಾರರ ಸುರಕ್ಷತೆ ಬಗ್ಗೆ ಪಾಕಿಸ್ತಾನ ನೀಡಿದ್ದ ಭರವಸೆ ಪ್ರಶ್ನಾರ್ಹವಾಗಿದೆ. ನ್ಯೂಜಿಲೆಂಡ್ ವಿರುದ್ಧದ ಪಂದ್ಯದ ವೇಳೆ ಭಯೋತ್ಪಾದಕನೋರ್ವ ಮೈದಾನಕ್ಕೆ ನುಗ್ಗಿ ಆಟಗಾರ ರಚಿನ್ ರವೀಂದ್ರ ಅವರನ್ನು ಅಪ್ಪಿಕೊಂಡಿದ್ದ. ಈತ ನಿಷೇಧಿತ ಇಸ್ಲಾಮಿಕ್ ಪಕ್ಷ ತೆಹ್ರೀಕ್-ಎ-ಲಬ್ಬಾಯಿಕ್ ಪಾಕಿಸ್ತಾನದ ಬೆಂಬಲಿಗ ಅಂತಾ ಗೊತ್ತಾಗಿದೆ.

ಈ ಘಟನೆ ಪಾಕಿಸ್ತಾನದ ಭದ್ರತಾ ವ್ಯವಸ್ಥೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇದಕ್ಕೂ ಮುನ್ನ ಅಫ್ಘಾನ್ ಭದ್ರತಾ ಪಡೆಗಳು ಚಾಂಪಿಯನ್ಸ್ ಟ್ರೋಫಿ ಮೇಲೆ ಭಯೋತ್ಪಾದಕ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದ್ದವು. ಈ ಘಟನೆಯ ನಂತರ, ಪಾಕಿಸ್ತಾನದಲ್ಲಿರುವ ಆಟಗಾರರ ಸುರಕ್ಷತೆಯ ಬಗ್ಗೆ ಪ್ರಶ್ನೆಗಳು ಎದ್ದಿವೆ. ಪಾಕಿಸ್ತಾನದಲ್ಲಿರುವ ಆಟಗಾರರು ಎಷ್ಟು ಸುರಕ್ಷಿತರು ಈ ಬಗ್ಗೆಯೂ ಚರ್ಚೆ ನಡೆಯುತ್ತಿರುವಂತೆ ಕಾಣುತ್ತಿದೆ.







ಚಾಂಪಿಯನ್ಸ್ ಟ್ರೋಫಿಯಡಿಯಲ್ಲಿ ಪಾಕಿಸ್ತಾನದಲ್ಲಿ ಇನ್ನೂ ಸುಮಾರು 10 ಪಂದ್ಯಗಳು ನಡೆಯಬೇಕಿದೆ. ಭಯೋತ್ಪಾದಕ ಸಂಘಟನೆ ಐಸಿಸ್ ಮುಖ್ಯಸ್ಥ ಅಬ್ದುಲ್ ಖಾದಿರ್ ಮುಮಿನ್ ಅವರ ಪಾಕಿಸ್ತಾನ ಭೇಟಿಗೂ ಈ ದಾಳಿಗಳಿಗೂ ಸಂಬಂಧವಿದೆ ಎಂದು ಹೇಳಲಾಗುತ್ತಿದೆ.

ಚಾಂಪಿಯನ್ಸ್ ಟ್ರೋಫಿಯಲ್ಲಿ ಇನ್ನೂ 10 ಪಂದ್ಯಗಳು ಬಾಕಿ ಇವೆ. ಐಸಿಸ್ ಮುಖ್ಯಸ್ಥ ಅಬ್ದುಲ್ ಖಾದಿರ್ ಮುಮಿನ್ ಪಾಕಿಸ್ತಾನಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಈ ಘಟನೆಗಳು ನಡೆಯುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಪಾಕಿಸ್ತಾನಿ ಭದ್ರತಾ ಪಡೆಗಳಿಗೆ ಸೂಚನೆ ನೀಡಲಾಗಿದೆ. ಬಾಂಗ್ಲಾದೇಶ ಸೇರಿದಂತೆ ಹಲವು ತಂಡಗಳು ಇಸ್ಲಾಮಾಬಾದ್ ಮತ್ತು ಕರಾಚಿಯಲ್ಲಿವೆ. ಮುಂದಿನ ಪಂದ್ಯಗಳು ರಾವಲ್ಪಿಂಡಿಯಲ್ಲಿ 3, ಲಾಹೋರ್ ನಲ್ಲಿ 3 ಮತ್ತು ಕರಾಚಿಯಲ್ಲಿ 2 ಪಂದ್ಯಗಳು ನಡೆಯಲಿವೆ.





# ಒಂದೂ ಎಸೆತ ಕಾಣದೆ ದಕ್ಷಿಣ ಆಫ್ರಿಕಾ–ಆಸ್ಟ್ರೇಲಿಯಾ ಪಂದ್ಯ ರದ್ದು!



ಚಾಂಪಿಯನ್ಸ್ ಟ್ರೋಫಿಯ 7ನೇ ಪಂದ್ಯ ಮಳೆ ಕಾರಣ ರದ್ದಾಗಿದೆ. ಗ್ರೂಪ್ ಬಿ ನಲ್ಲಿ ಎರಡೂ ತಂಡಗಳು ತಮ್ಮ ಮೊದಲ ಪಂದ್ಯವನ್ನು ಗೆದ್ದಿದ್ದವು. ಪಂದ್ಯ ರದ್ದಾದ ಕಾರಣ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಲಾ ಒಂದು ಅಂಕವನ್ನು ಪಡೆದುಕೊಂಡವು.

2025 ರ ಚಾಂಪಿಯನ್ಸ್ ಟ್ರೋಫಿಯ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ನಡುವಿನ 7 ನೇ ಪಂದ್ಯವು ಒಂದೇ ಒಂದು ಎಸೆತ ಕಾಣದೇ ರದ್ದಾಗಿದೆ. ಮಂಗಳವಾರ ರಾವಲ್ಪಿಂಡಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಪಂದ್ಯ ಟಾಸ್ ಕೂಡ ನಡೆಯಲಿಲ್ಲ. ಪಂದ್ಯ ರದ್ದಾದ ಕಾರಣ ಎರಡೂ ತಂಡಗಳು ತಲಾ ಒಂದು ಅಂಕವನ್ನ ಹಂಚಿಕೊಂಡವು. ನಿಗದಿತ ಸಮಯಕ್ಕಿಂತ ಮೂರು ಗಂಟೆಗಳಿಗೂ ಹೆಚ್ಚು ಸಮಯ ಮಳೆ ಸುರಿದ ಕಾರಣ ಪಂದ್ಯದ ಅಧಿಕಾರಿಗಳು ಆಟವನ್ನು ರದ್ದುಗೊಳಿಸಿದರು. ಗ್ರೂಪ್ ಬಿ ನಲ್ಲಿ ಎರಡೂ ತಂಡಗಳು ತಮ್ಮ ಮೊದಲ ಪಂದ್ಯವನ್ನು ಗೆದ್ದಿದ್ದವು. ಪಂದ್ಯ ರದ್ದಾದ ಕಾರಣ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಲಾ ಒಂದು ಅಂಕವನ್ನು ಪಡೆದುಕೊಂಡವು.

ಬುಧವಾರ ಇಂಗ್ಲೆಂಡ್ ಮತ್ತು ಅಫ್ಘಾನಿಸ್ತಾನ ನಡುವಿನ ಪಂದ್ಯವು ಬಹುತೇಕ ನಾಕೌಟ್ ಆಗಿದೆ, ಇದರಲ್ಲಿ ಸೋತ ತಂಡವು ಐಸಿಸಿ ಟೂರ್ನಮೆಂಟ್‌ನಿಂದ


# ಟೀಮ್ ಇಂಡಿಯಾ ಮಾಟಮಂತ್ರದಿಂದ ಗೆದ್ದಿದ್ದಾರೆ



ಚಾಂಪಿಯನ್ಸ್ ಟ್ರೋಫಿಯ ಹಾಲಿ ಚಾಂಪಿಯನ್ ಪಾಕಿಸ್ತಾನ್ ತಂಡಕ್ಕೆ ಟೀಮ್ ಇಂಡಿಯಾ ಆಘಾತ ನೀಡಿದೆ. ಈ ಸೋಲಿನ ಆಘಾತವನ್ನು ಅರಗಿಸಿಕೊಳ್ಳಲು ಪಾಕಿಸ್ತಾನದ ಕೆಲವರಿಗೆ ಇನ್ನೂ ಸಾಧ್ಯವಾಗಿಲ್ಲ. ಇದಕ್ಕೆ ಸಾಕ್ಷಿ ಪಾಕಿಸ್ತಾನದಲ್ಲಿ ನಡೆದ ಪೋಸ್ಟ್ ಮ್ಯಾಚ್ ಚರ್ಚೆ. ಈ ಚರ್ಚೆಯಲ್ಲಿ ಟೀಮ್ ಇಂಡಿಯಾ ಮಾಟಮಂತ್ರದಿಂದ ಗೆದ್ದಿದ್ದಾರೆ ಎಂದು ಆರೋಪಿಸಲಾಗಿದೆ. ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಬಹುನಿರೀಕ್ಷಿತ ಪಂದ್ಯದಲ್ಲಿ ಪಾಕಿಸ್ತಾನ್ ತಂಡವನ್ನು ಬಗ್ಗು ಬಡಿದು ಟೀಮ್ ಇಂಡಿಯಾ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ. ದುಬೈನ ಅಂತಾರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ್ ಕಲೆಹಾಕಿದ್ದು ಕೇವಲ 241 ರನ್‌ಗಳನ್ನು ಮಾತ್ರ. ಈ ಗುರಿಯನ್ನು ಟೀಮ್ ಇಂಡಿಯಾ ಕೇವಲ 42.3 ಓವರ್‌ಗಳಲ್ಲಿ ಚೇಸ್ ಮಾಡಿ ಗೆದ್ದಿದೆ. ಟೀಮ್ ಇಂಡಿಯಾದ ಈ ಭರ್ಜರಿ ಗೆಲುವಿನ ಬಳಿಕ ಪಾಕಿಸ್ತಾನದ ಮಾಧ್ಯಮವೊಂದರಲ್ಲಿ ನಡೆದ ವಿಲಕ್ಷಣ ಚರ್ಚೆಯೊಂದು ಇದೀಗ ಭಾರೀ ವೈರಲ್ ಆಗಿದೆ.

ಪಾಕಿಸ್ತಾನ್ ತಂಡದ ಸೋಲಿನೊಂದಿಗೆ ಶುರುವಾದ ಈ ಚರ್ಚೆಯಲ್ಲಿ ಕಾಣಿಸಿಕೊಂಡ ಪ್ಯಾನೆಲ್‌ಗಳು ಆಘಾತಕಾರಿ ಮತ್ತು ವಿಲಕ್ಷಣ ಆರೋಪಗಳನ್ನು ಮಾಡಿರುವುದೇ ಅಚ್ಚರಿ. ಅದರಲ್ಲಿ ಒಬ್ಬರು ಭಾರತವು ದುಬೈ ಅಂತರಾಷ್ಟ್ರೀಯ ಕ್ರೀಡಾಂಗಣಕ್ಕೆ 22 ಹಿಂದೂ ಪುರೋಹಿತರನ್ನು (ಪಂಡಿತರು) ಮಾಟಮಂತ್ರ ಮಾಡಲು ಕಳುಹಿಸಿದೆ. ಇದರಿಂದ ಪಾಕಿಸ್ತಾನ್ ಆಟಗಾರರ ಗಮನವನ್ನು ಬೇರೆಡೆಗೆ ಸೆಳೆಯಿತು ಎಂದಿದ್ದಾರೆ. ಇನ್ನು ಮತ್ತೊಬ್ಬ ಪ್ಯಾನೆಲಿಸ್ಟ್ ಭಾರತ ಪಾಕಿಸ್ತಾನದಲ್ಲಿ ಆಡಲು ನಿರಾಕರಿಸಲು ಇದೇ ಕಾರಣ ಎಂದು ಸೂಚಿಸಿದರು. ಏಕೆಂದರೆ ಪಂದ್ಯಕ್ಕೂ ಮುನ್ನ ಅವರಿಗೆ ಪೂಜೆ ಮಾಡಬೇಕಿತ್ತು. ಪಾಕಿಸ್ತಾನದಲ್ಲಿ ನಡೆದರೆ ಅದು ಸಾಧ್ಯವಿಲ್ಲ. ದುಬೈನಲ್ಲಿ ನಡೆದ ಪಂದ್ಯಕ್ಕೂ ಮುನ್ನ ದಿನ ಏಳು ಪುರೋಹಿತರು ಮೈದಾನದಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಇದೀಗ ಪಾಕಿಸ್ತಾನ್ ಮಾಧ್ಯಮದ ವಿತಂಡವಾದ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಕಳೆದ ಏಕದಿನ ವಿಶ್ವಕಪ್ ಪಂದ್ಯದ ವೇಳೆ ಟೀಮ್ ಇಂಡಿಯಾಗೆ ಐಸಿಸಿ ವಿಶೇಷ ಚೆಂಡುಗಳನ್ನು ನೀಡುತ್ತಿದೆ. ಹೀಗಾಗಿ ಭಾರತೀಯ ಬೌಲರ್‌ಗಳು ಯಶಸ್ಸು ಗಳಿಸುತ್ತಿದ್ದಾರೆ ಎಂದು ಪಾಕ್ ತಂಡದ ಮಾಜಿ ಆಟಗಾರ ಹಸನ್ ರಾಜಾ ಲೈವ್ ಚರ್ಚೆಯಲ್ಲಿ ಆರೋಪಿಸಿದ್ದಾರೆ. ಇದೀಗ ಪಾಕಿಸ್ತಾನ್ ಮಾಧ್ಯಮದಲ್ಲಿ ಭಾರತ ತಂಡವು ಮಾಟಮಂತ್ರದಿಂದ ಗೆದ್ದಿದೆ ಎನ್ನುವ ಮೂಲಕ ನಗೆಪಾಟಲಿಗೀಡಾಗಿದ್ದಾರೆ.

# ಪ್ರಿಯಾಂಕಾ ಶಾಕಿಂಗ್ ಸ್ಟೇಟ್‌ಮೆಂಟ್



ಒಂದು ರಾತ್ರಿಯಲ್ಲಿ ಕಳೆದು ಹೋಗುತ್ತೆ!

ಬಾಲಿವುಡ್‌ನಿಂದ ಹಾಲಿವುಡ್‌ಗೆ ಹಾರಿದ ಪ್ರಿಯಾಂಕಾ ಚೋಪ್ರಾ, ಕನ್ಯತ್ವದ ಬಗ್ಗೆ ಶಾಕಿಂಗ್ ಕಮೆಂಟ್ ಮಾಡಿದ್ದಾರೆ. ವಿವಾದಾತ್ಮಕ ಕಮೆಂಟ್ ಗಳ ಮೂಲಕವೇ ದೇಸಿ ಗರ್ಲ್ ಸುದ್ದಿ ಆಗ್ತಾರೆ. ಈ ಬಾರಿ ಸ್ಟಾರ್ ನಟಿ ಮದುವೆ ಬಗ್ಗೆ ಮಾತಾಡ್ತಾ ಶಾಕಿಂಗ್ ಕಮೆಂಟ್ ಮಾಡಿದ್ದಾರೆ. ಪ್ರಿಯಾಂಕಾ ಚೋಪ್ರಾ, ಕಳೆದ 5 ವರ್ಷಗಳಿಂದ ಬಾಲಿವುಡ್ನಿಂದ ದೂರ ಉಳಿದಿದ್ದರು. ನಟಿ ಕೊನೆಯದಾಗಿ 2019ರಲ್ಲಿ 'ಸ್ಕೈ ಈಸ್ ಪಿಂಕ್' ಚಿತ್ರದಲ್ಲಿ ಕಾಣಿಸಿಕೊಂಡಿದ್ದರು. ಆ ನಂತರ ಹಾಲಿವುಡ್ ನತ್ತ ಮುಖ ಮಾಡಿದ್ರು. ಹಿಂದಿ ಚಿತ್ರಗಳಿಂದ ದೂರ ಉಳಿದಿದ್ರು. ಇದೀಗ ದೇಸಿ ಗರ್ಲ್, ಮತ್ತೆ ಕಮ್ ಬ್ಯಾಕ್ ಮಾಡ್ತಿದ್ದಾರೆ. ಸೌತ್ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇತ್ತೀಚೆಗಷ್ಟೇ ಪ್ರಿಯಾಂಕಾ ಚೋಪ್ರಾ, ನಟಿಸಿದ 'ಸಿಟಾಡೆಲ್' ಸೀರಿಸ್ ಕೂಡ ಹಿಟ್ ಟಾಕ್ ಪಡೆಯಿತು. ಪ್ರಿಯಾಂಕಾ ಅಭಿನಯಕ್ಕೆ ಭಾರೀ ಮೆಚ್ಚುಗೆ ವ್ಯಕ್ತವಾಗಿತ್ತು. ರಾಜಮೌಳಿ ನಿರ್ದೇಶನದ ಸೂಪರ್ ಸ್ಟಾರ್ ಮಹೇಶ್ ಬಾಬು ಅಭಿನಯದ ಚಿತ್ರದಲ್ಲಿ ಪ್ರಿಯಾಂಕಾ ಚೋಪ್ರಾ, ಕಾಣಿಸಿಕೊಳ್ಳಲಿದ್ದಾರಂತೆ. ಅಮೆರಿಕದಲ್ಲಿ ನೆಲೆಸಿರುವ ಪ್ರಿಯಾಂಕಾ ಇತ್ತೀಚೆಗೆ ಭಾರತಕ್ಕೆ ಮರಳಿದ್ರು. ಹಿಂದಿನ ಸಂದರ್ಶನದಲ್ಲಿ ಪ್ರಿಯಾಂಕಾ ಚೋಪ್ರಾ, ಮಾತಾಡಿದ್ದ ವಿಡಿಯೋ ಇದೀಗ ವೈರಲ್ ಆಗಿದೆ. ಅನೇಕ ಪುರುಷರು ತಮ್ಮ ಭಾವಿ ಪತ್ನಿಯರು ಕನ್ಯೆಯರಾಗಬೇಕೆಂದು ಬಯಸುತ್ತಾರೆ. ಆದ್ರೆ ವರ್ಜಿನ್ ಅಷ್ಟು ಮುಖ್ಯವಲ್ಲ. ಒಂದೇ ರಾತ್ರಿಯಲ್ಲಿ ಕನ್ಯತ್ವ ಕಳೆದು ಹೋಗುತ್ತದೆ. ಅದರ ಬಗ್ಗೆ ಹೆಚ್ಚು ಚಿಂತಿಸಬೇಡಿ ಎಂದಿದ್ರು ಪ್ರಿಯಾಂಕಾ. ನಾವು ಅರ್ಥಮಾಡಿಕೊಳ್ಳುವ ಹುಡುಗಿ ನಮ್ಮ ಹೆಂಡತಿಯಾಗಬೇಕೆಂದು ಬಯಸಬೇಕು. ನಮಗೆ ಇಷ್ಟವಾಗುವಂತಹ ಹುಡುಗಿ ನಮ್ಮ ಜೀವನ ಸಂಗಾತಿಯಾಗೋದು ಮುಖ್ಯ. ಒಂದು ಹುಡುಗಿ ಒಬ್ಬ ಹುಡುಗನನ್ನು ನಂಬಿದ್ರೆ, ಅವಳು ಅವನಿಗಾಗಿ ಏನು ಬೇಕಾದರೂ ಮಾಡುತ್ತಾಳೆ. ನಾವು ಅರ್ಥಮಾಡಿಕೊಳ್ಳುವ ಹುಡುಗಿ ನಮ್ಮ ಹೆಂಡತಿಯಾಗಬೇಕೆಂದು ಬಯಸಬೇಕು. ನಮಗೆ ಇಷ್ಟವಾಗುವಂತಹ ಹುಡುಗಿ ನಮ್ಮ ಜೀವನ ಸಂಗಾತಿಯಾಗೋದು ಮುಖ್ಯ.

ಒಂದು ಹುಡುಗಿ ಒಬ್ಬ ಹುಡುಗನನ್ನು ನಂಬಿದ್ರೆ, ಅವಳು ಅವನಿಗಾಗಿ ಏನು ಬೇಕಾದರೂ ಮಾಡುತ್ತಾಳೆ.

# ನಿಮಗೆ ನಾಚಿಕೆ ಆಗಬೇಕು

ಖ್ಯಾತ ಬಾಲಿವುಡ್ ನಟಿ ಪ್ರೀತಿ ಝಿಂಟಾ ವಿವಾದಗಳಿಂದ ದೂರವೇ ಇದ್ದವರು. ಅವರು ಸಿನಿಮಾಗಳಲ್ಲಿ ನಟಿಸಿಯೇ ಬಹುಸಮಯವಾಗಿದೆ. ವಿದೇಶದಲ್ಲಿ ನೆಲೆಸಿರುವ ಪ್ರೀತಿ, ಭಾರತಕ್ಕೆ ಬರುವುದು ಅಪರೂಪ. ಆದರೆ ಇದೀಗ ಏಕಾಏಕಿ ನಟಿ ಪ್ರೀತಿ ಝಿಂಟಾ ಕಾಂಗ್ರೆಸ್ ಪಕ್ಷದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. 'ನಿಮಗೆ ನಾಚಿಕೆ ಆಗಬೇಕು' ಎಂದು ಮೂದಲಿಸಿದ್ದಾರೆ. ನಟಿಯ ಸಿಟ್ಟಿಗೆ ಕಾರಣವೇನು ಸಿನಿಮಾ ಹಾಗೂ ರಾಜಕೀಯಕ್ಕೆ ಬಹಳ ಹತ್ತಿರದ ಸಂಬಂಧ.

ಸಿನಿಮಾ ನಟ-ನಟಿಯರು ಹಾಗೂ ರಾಜಕಾರಣಿಗಳು ಬಹುತೇಕ ಗೆಳೆಯರಾಗಿಯೇ ಇರುತ್ತಾರೆ. ರಾಜಕಾರಣಿಗಳು ತಮಗೆ ಅವಶ್ಯಕತೆ ಬಂದಾಗಲೆಲ್ಲ ಸಿನಿಮಾ ಮಂದಿಯನ್ನು ಪ್ರಚಾರಕ್ಕೆ ಬಳಸಿಕೊಳ್ಳುತ್ತಾರೆ. ಸಿನಿಮಾ ಮಂದಿಯೂ ಸಹ ರಾಜಕಾರಣಿಗಳೊಟ್ಟಿಗೆ ಆಪ್ತ ಗೆಳೆತನ ಕಾಯ್ದಿಟ್ಟುಕೊಳ್ಳುತ್ತಾರೆ. ಆಡಳಿತ ಪಕ್ಷದ ಮುಖಂಡರನ್ನು ಬಹುವಾಗಿ ಹೊಗಳುವ ಹಲವು ನಟ-ನಟಿಯರು ಈಗಲೂ ಇದ್ದಾರೆ. ಯಾವುದೇ ರಾಜಕೀಯ ಪಕ್ಷಗಳು, ಮುಖಂಡರನ್ನು ಸಿನಿಮಾದವರು ಟೀಕೆ ಮಾಡುವುದು ಅಪರೂಪವೇ. ಆದರೆ ಇದೀಗ ನಟಿ ಪ್ರೀತಿ ಝಿಂಟಾ ಹಠಾತ್ತನೆ ಕಾಂಗ್ರೆಸ್ ಪಕ್ಷದ ಮೇಲೆ ಕಿಡಿ ಕಾಯ್ದಿದ್ದಾರೆ. ಕೇರಳ ಕಾಂಗ್ರೆಸ್ ಪಕ್ಷದ ಅಧಿಕೃತ ಟ್ವಿಟ್ಟರ್ ಖಾತೆಯಿಂದ ಮಾಡಲಾದ ಟ್ವೀಟ್ ನಟಿ ಪ್ರೀತಿ ಝಿಂಟಾ ಸಿಟ್ಟಿಗೆ ಕಾರಣವಾಗಿದೆ. ಕೇರಳ ಕಾಂಗ್ರೆಸ್ ಮಾಡಿರುವ ಟ್ವೀಟ್‌ನಲ್ಲಿ ಪ್ರೀತಿ ಝಿಂಟಾ ಮಾಡಿದ್ದ 18 ಕೋಟಿ ಸಾಲವನ್ನು ಬಿಜೆಪಿ ಪಕ್ಷ ಮನ್ನಾ ಮಾಡಿದೆ, ಇದಕ್ಕಾಗಿ ಪ್ರೀತಿ ಝಿಂಟಾ, ಬಿಜೆಪಿಯ ಗುಣಗಾನ ಮಾಡುತ್ತಾ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿತ್ತು. ಕೇರಳ ಕಾಂಗ್ರೆಸ್‌ನ ಈ ಟ್ವೀಟ್‌ಗೆ ಪ್ರೀತಿ ಝಿಂಟಾ ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ.



# ಬಡ ಮಕ್ಕಳಿಗೆ ನೆರವಿನ ಹಸ್ತ ಚಾಚಿದ ನಟ ಧ್ರುವ

ನಟ ಧ್ರುವ ಸರ್ಜಾ ಆಗಾಗ್ಗೆ ತಮ್ಮ ಸಾಮಾಜಿಕ ಕಾರ್ಯಗಳಿಂದಲೂ ಸುದ್ದಿಯಲ್ಲಿರುತ್ತಾರೆ. ಇತ್ತೀಚೆಗೆ ಪತ್ನಿ ಮಕ್ಕಳೊಡನೆ ನಾಗರಹೊಳೆ ಕಾಡಿಗೆ ಸಫಾರಿಗೆ ತೆರಳಿದ್ದ ನಟ ಧ್ರುವ ಸರ್ಜಾ, ಅಲ್ಲಿಯೇ ಹತ್ತಿರದಲ್ಲಿದ್ದ ಬುಡಕಟ್ಟು ವಸತಿ ಶಾಲೆಗೆ ಭೇಟಿ ನೀಡಿದ್ದರು. ಈ ವೇಳೆ ಅಲ್ಲಿನ ಮಕ್ಕಳಿಗೆ ಅಗತ್ಯವಾಗಿ ಬೇಕಾದ ವಸ್ತುಗಳ ಪಟ್ಟಿ ತೆಗೆದುಕೊಂಡು ಎಲ್ಲಾವನ್ನೂ ಮಕ್ಕಳಿಗೆ ತಲುಪಿಸಿದ್ದಾರೆ. ನಟ ಧ್ರುವ ಸರ್ಜಾ ಸಿನಿಮಾ ಜೊತೆಗೆ ಸಾಮಾಜಿಕ ಕಾರ್ಯದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ದೇವಸ್ಥಾನ ನಿರ್ಮಾಣ ಸೇರಿದಂತೆ ಕೆಲವು ಸಾಮಾಜಿಕ ಕಾರ್ಯಗಳಿಗೆ ಸಹಾಯ ಹಸ್ತ ಚಾಚುತ್ತಿರುತ್ತಾರೆ. ಕನ್ನಡ ಭಾಷೆಯ ಬಗ್ಗೆಯೂ ಆಗಾಗ್ಗೆ ನಿಲುವು ತಳೆಯುತ್ತಿರುತ್ತಾರೆ. ಇದೀಗ ಧ್ರುವ ಸರ್ಜಾ ಬುಡಕಟ್ಟು ಮಕ್ಕಳಿಗೆ ನೆರವಿನ ಹಸ್ತ ಚಾಚಿದ್ದಾರೆ. ಮಕ್ಕಳ ಆಟಕ್ಕೆ ಬೇಕಾದ ಕೆಲವು ಕ್ರೀಡಾ ಸಲಕರಣೆಗಳನ್ನು ಮಕ್ಕಳಿಗಾಗಿ ಕಳಿಸಿಕೊಟ್ಟಿದ್ದಾರೆ.



# ವೆಬ್‌ಸೀರಿಸ್‌ಗೆ ಮೊದಲ ಹೆಜ್ಜೆ ಇಟ್ಟ ಪರಿಣೀತಿ

ನಟಿ ಪರಿಣೀತಿ ಚೋಪ್ರಾ, ಅವರು ನೆಟ್‌ಫ್ಲಿಕ್ಸ್‌ನಲ್ಲಿ ಒಂದು ರಹಸ್ಯ ಥ್ರಿಲ್ಲರ್ ವೆಬ್ ಸರಣಿಯ ಮೂಲಕ ವೆಬ್ ಸರಣಿಯಲ್ಲಿ ಪಾದಾರ್ಪಣೆ ಮಾಡಲಿದ್ದಾರೆ.


ಅಮರ್ ಸಿಂಗ್ ಚಮ್ಕಿಲಾ ಚಿತ್ರದ ಯಶಸ್ಸಿನ ನಂತರ, ನಟಿ ಪರಿಣೀತಿ ಚೋಪ್ರಾ, 'ಉಂಗ್ಲಿ' ಮತ್ತು 'ಕುರ್ಬಾನ್' ಚಿತ್ರಗಳ ನಿರ್ದೇಶಕ ರೆನ್ಸಿಲ್ ಡಿ'ಸಿಲ್ವಾ ನಿರ್ದೇಶನದಲ್ಲಿ ಒಂದು ರಹಸ್ಯ ಥ್ರಿಲ್ಲರ್ ವೆಬ್ ಸರಣಿಯ ಮೂಲಕ ಇದೇ ಮೊದಲ ಬಾರಿಗೆ ವೆಬ್ ಸರಣಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಹೆಸರಿಲ್ಲದ ರಹಸ್ಯ ಥ್ರಿಲ್ಲರ್ ನೆಟ್‌ಫ್ಲಿಕ್ಸ್‌ನಲ್ಲಿ ಸ್ಟ್ರೀಮ್ ಆಗಲಿದೆ. ಈ ಸರಣಿಯಲ್ಲಿ ಅವರೊಂದಿಗೆ ತಾಹಿರ್ ರಾಜ್ ಭಾಸಿನ್, ಅನೂಪ್ ಸೋನಿ, ಜೆನಿಫರ್ ವಿಂಗೇಟ್ ಮತ್ತು ಚೈತನ್ಯ ಚೌಧರಿ ನಟಿಸಲಿದ್ದಾರೆ. ನಟರ ಪಟ್ಟಿಯಲ್ಲಿ ಸುಮಿತ್ ವ್ಯಾಸ್, ಸೋನಿ ರಾಜ್‌ದಾನ್ ಮತ್ತು ಹರ್ಲೀನ್ ಸೇಥಿ ಕೂಡ ಇದ್ದಾರೆ. ಪರಿಣೀತಿ ಅವರ ವೆಬ್ ಸರಣಿಯ ಪಾದಾರ್ಪಣೆಯನ್ನು 'ಮಹಾರಾಜ್' ಚಿತ್ರದ ನಿರ್ದೇಶಕ ಸಿದ್ಧಾರ್ಥ್ ಪಿ ಮಲ್ಹೋತ್ರಾ ಮತ್ತು ಆಲ್ಕೆಮಿ ಪ್ರೊಡಕ್ಷನ್‌ನ ಸ್ವಪ್ನಾ ಮಲ್ಹೋತ್ರಾ ನಿರ್ಮಿಸುತ್ತಿದ್ದಾರೆ. ಈ ಸರಣಿಯು ರಹಸ್ಯ ಮತ್ತು ಉದ್ವೇಗದ ಮಿಶ್ರಣದ ಭರವಸೆ ನೀಡುತ್ತಿದೆ. ಈ ಹೊಸ ಸರಣಿ ಮತ್ತು ನಟರ ಬಗ್ಗೆ ಸೃಷ್ಟಿಕರ್ತ ಸಿದ್ಧಾರ್ಥ್ ಮಲ್ಹೋತ್ರಾ ಮತ್ತು ರೆನ್ಸಿಲ್ ಡಿ'ಸಿಲ್ವಾ ಹೇಳಿದ್ದು, ನೆಟ್‌ಫ್ಲಿಕ್ಸ್‌ನೊಂದಿಗೆ ಈ ನಾಯರ್ ರಹಸ್ಯ ಥ್ರಿಲ್ಲರ್‌ನಲ್ಲಿ ಕೆಲಸ ಮಾಡಲು ನಾವು ರೋಮಾಂಚನಗೊಂಡಿದ್ದೇವೆ, ಇದು ಕಥೆ ಹೇಳುವ ಅತ್ಯಂತ ವೈವಿಧ್ಯಮಯ ಮತ್ತು ಆಕರ್ಷಕ ರೂಪವನ್ನು ಆಚರಿಸುವ ವೇದಿಕೆಯಾಗಿದೆ.



# ಬಂಪರ್ ಬೆಳೆ ತೆಗೆದ ಛಾವ

'ಛಾವ' ಸಿನಿಮಾ ತೆರೆಕಂಡು 11 ದಿನಗಳು ಕಳೆದಿವೆ. ಇಂದಿಗೂ ಈ ಸಿನಿಮಾ ಉತ್ತಮವಾಗಿ ಪ್ರದರ್ಶನ ಕಾಣುತ್ತಿದೆ. ಭಾರತದ ಬಾಕ್ಸ್ ಆಫೀಸ್‌ನಲ್ಲಿ ಈತನಕ 353.61 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ. ಹೀಗೆಯೇ ಮುಂದುವರಿದರೆ 500 ಕೋಟಿ ರೂಪಾಯಿ ಗಡಿ ಮುಟ್ಟಲಿದೆ. ವಿಕ್ಕಿ ಕೌಶಲ್ ಅವರು ಈ ಸಿನಿಮಾದಲ್ಲಿ ಪ್ರಮುಖ ಪಾತ್ರ ಮಾಡಿದ್ದಾರೆ.

ಸೂಪರ್ ಹಿಟ್ 'ಛಾವ' ಸಿನಿಮಾದ ಅಬ್ಬರ ಸದ್ಯಕ್ಕಂತೂ ಕಡಿಮೆ ಆಗುವಂತೆ ಕಾಣುತ್ತಿಲ್ಲ. ಸತತ 11ನೇ ದಿನವೂ ಈ ಸಿನಿಮಾ ಬಹುಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ವಿಕ್ಕಿ ಕೌಶಲ್, ರಶ್ಮಿಕಾ ಮಂದಣ್ಣ, ಅಕ್ಷಯ್ ಖನ್ನಾ ಮುಂತಾದವರು ನಟಿಸಿದ ಈ ಸಿನಿಮಾಗೆ ಭರ್ಜರಿ ಜನಸ್ಪಂದನೆ ಸಿಕ್ಕಿದೆ. ದಿನದಿಂದ ದಿನಕ್ಕೆ ಪ್ರೇಕ್ಷಕರಿಂದ ಬಾಯಿ ಮಾತಿನ ಪ್ರಚಾರ ಹೆಚ್ಚಾಗುತ್ತಿರುವುದರಿಂದ ಉತ್ತಮವಾಗಿ ಕಲೆಕ್ಷನ್ ಆಗುತ್ತಿದೆ. ಅಚ್ಚರಿ ಎಂದರೆ, 2ನೇ ಸೋಮವಾರ ಕೂಡ ಈ ಸಿನಿಮಾಗೆ ಭರ್ಜರಿ ಕಮಾಯಿ ಆಗಿದೆ. 11 ದಿನಕ್ಕೆ 'ಛಾವ' ಸಿನಿಮಾದ ಒಟ್ಟು ಕಲೆಕ್ಷನ್ 353.61 ಕೋಟಿ ರೂಪಾಯಿ ಆಗಿದೆ.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**